ಪೂರ್ವ ಕಾಲದಲ್ಲಿ ಶತ್ರುಗಳು ದ್ವೀಪಕ್ಕೆ ಹಿಸಿದ ಮಹಾಸೈನ್ಯವನ್ನು ಯುದ್ಧ ಬಂಬ್ಬಿದ್ದಿ ಈ ಇಷ್ಟ ಸೈಯನ್ನು ಸೆದ ಸಮುದ್ರದಲ್ಲಿ ಸೈನ್ಯಗಳನ್ನು ಕಳುಹಿಸುವದಕ್ಕಿ ಲ ಸಮಯ ವ ಸಮುದ್ರದ ಒಳಗೆ ವ ಒಂದು ಅವರಿಗೆ ತಿಳಿದಿದೆ ಅವರ ಸವಿಯೂದ ಮಾಡುವುದು ಸೈನ್ಯವನ್ನು ಸೋಸಗೊಳಿಸಿ ಸೈನ್ಯವನ್ನು ಕಳಿಸಿ ಸಿದ್ಧರಾಗಿ ಒಟ್ಟಿಗೆ ಸೈನ್ಯಗಳನ್ನು ಕಳುಹಿಸುವುದು ಇದು ಹೊಸ ರಣತಂತ್ರ ಎಚ್ಚರವಿಟ್ಟಿದ ಜನರಲ್ ಪೆಲೆ ದೊಡ್ಡ ಪ್ರಣಾಳಿಕೆ ಪ್ರಾಮಿಸಿಂಗಾಪುರ ಆದರೆ ರಡಿಯೋ ಮೂಲಕ ಜಪಾನಿಯರು ಅಡವ ಸ್ಫೋಟ್ಟವದ ಮಾತುಗಳ ಹಿಂದುಡ ವತ್ತು ಆ ಗಾಳಿಯೂ ಹಳ್ಳಗಳಲ್ಲಿಯೂ ಜಪಾನಿಯರ ವಿಜಯೋತ್ಸವಗಳು ಪ್ಲೇಗಿನಂತೆ ಹರಡಿರುವ ಮಾತುಗಳ ಹಿಂದುದೆ ಜಪಾನಿಯರ ಈಗಿನ ಮತ್ತ ಅವರ ಸಾಮರ್ಥ್ಯವನ್ನು ಇಂಡಿಯಾ ದಾರದ ವರ್ತಮಾನ ಪತ್ರಿಕೆಯು ತಮಗೆ ಬೆಂಬಲವನ್ನು—ನ್ಯೂಸ್ಕೂರ್ಸಗಳಿಗೆ ಕಾರ್ಯಕ್ಕೆ ಪತ್ರಿಕೆ ? ಇಂಡಿಯಾ ದೇಶವು ಲಿಂಡ್ಯದ ಜನಸಂಖ್ಯೆಯಲ್ಲಿ ಇಷ್ಟು ಇಷ್ಟಾಗಿ ಅಲ್ಲಿಗೆ ಬೇಕಾದಷ್ಟು ಒಂದೆ ಸಿಕ್ಕಿತ್ತದೆ ಆ ಪ್ರದೇಶದ ತಿಂಡಿಯಾ ದೇಶವನ್ನು ಪ್ರತಿಸಲು ಯಾರಿಗೆ ಇಷ್ಟ ಜಪಾನಿಯರು ಸೈನ್ಯಕ್ಕೆ ಸೇರಿದ್ದಾರು



ಚೀನಾ ದೇಶದ ಹೆಂಗಸರಿಗೆ ತಿಳಿದಿದೆ

ಸಂಬಂಧವನ್ನು ನಮಗೆ ಪಡಬೇಕಾದರೆ ಜಪಾನಿಯರು ಅವನಿಯಿಂದ ನಾವು ಬಿಡುಗಡೆಯಾಗುವವರೆಗೆ ಎಂದು ಹೇಳುತ್ತಾರೆ ಆದರೆ ಅವರಿಗೆ ಅರ್ಥವಾಗುವುದಿಲ್ಲ ಎಂಬುದನ್ನು ಮರೆತಾರೆ

ಯಾದವಾಸ್ಥೆಯನ್ನು ಎದುರಿಸುವವರೆಗೆ ಅಂತಿಮ ರಣಕಾಳಿ ಅವರು ಬಿಡುಗಡೆಯಾಗುವುದಿಲ್ಲ

ಜಪಾನಿಯರನ್ನು ಎದುರಿಸುವುದಕ್ಕೆ ಸಾಧ್ಯವಾಗುವಂತೆ ಅಮೆರಿಕಾದವರು ಯುದ್ಧವಿಮಾನಗಳನ್ನು ಕಳುಹಿಸಿದ್ದಾರೆ

ಇದನ್ನು ಪಾದುಂಬಿಗೆ ಕೈಗೆ ಬಾಣಾಗಿ (ಸಂಗಾತಿ) ಇವರು ದಮ್ಮ ಸ್ವಾರಕ್ಷಾ ಕೆಲಸ ನಲ್ಲಿ ಮಾಡುವ ಪ್ರಕಟಿಸಿದರು

Reg. No. B. 1270. Monday, 31st August, 1942.

ವರ್ಷ ೨೫

ಕಾನಡಾವೃತ್ತ.

THE KANARA NEWS.

ಸಂಜೆಕೆ ೯

ಪತ್ರದ ವರ್ಗಣಿ.

ಕುಮಟೆಯಲ್ಲಿ ಮುಂಗಡ ರೂಪಾಯಿ ೨-4-0.
ಮುನಿಯಾಡಾದರಿನಿಂತ ರೂ. ೩-1-0.
ಸ್ಟಿ ಪಿ. ಖಾಚೆಯೆ ಸೇರಿ ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ದರೀ ಸಂಚಿಕೆಗೆ 0-2-0

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಮೈಲಾ ಮ್ಯಾಸಿನ (೧೫ ಎಮ್ ಉದ್ದ) ೩ ಸಾಲುಗಳವರೆಗೆ ರೂ 1-8-0 ಅನಂತ್ಯ ಪ್ರತಿಸಾಲಿಗೆ 0 ೩-0. ಹತ್ತಿಂಗಿದ ಸಾಲು ಎಸ್ಟು ಹೊತ್ತಿರುವುದೋ ಆ ಮಾತ್ರ ಎಂದೆ ಆಷ್ಟು ಸಾಲುಗಳು ಬಿಡಿಯಲ್ಪಡುವವು
ಬಾಕಿ ಜಾಹೀರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಬಹುದು.

ಸರಸತಿಹಿತಕರ್ತಾ ಶ್ರೇಷ್ಠತಾ ಯಾತಿ ಲೋಕೆ ಜನಪದಹಿತಕರ್ತಾ ರಕ್ಷಕತೆ ಯಾಧಿಕೇಷ್ಟೇ ।
ಇತಿ ಸಹಜ ವಿರೋಧೆ ಕರ್ತಮಾಕೆ ಸಮಾನೆ ಭೂಪತಿಜನಪದಾನಾ ಭುಕ್ತಿಮ. ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—+(ಕುಮಟಾ— ಸೋಮವಾರ, ತಾರೀಖು ೩೧ ಮಾಹೆ ಅಗಸ್ಟ ಸನ್ ೧೯೪೨ನೇ ಇಸವಿ.)+—

ಹಿಂದೀ ರಾಜಕಾರಣ.

[ಪರೀಕ್ಷಕನು ಕಲಿಹಾಕಿದ್ದು]

ಮಹಾತ್ಮರಿಗೂ ಸರ್ವಾಧಿಪತಿ ಲಿನಲಿಥಗೋ ಮೊರೆಗಳಿಗೂ ಪತ್ರವ್ಯವಹಾರ ನಡಿದಿರುವಾಗಿ ಪ್ರಕಟವಾಗಿದೆ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದವರು ಮಹಾತ್ಮರ ಪತ್ರವನ್ನು ಸಮಾಲೋಚಿಸಿ ಉತ್ತರವನ್ನು ತಯಾರಿಸುತ್ತಿರುವರಂತೆ ಆ ಉತ್ತರ ಮಹಾತ್ಮರಿಗೆ ಸಮಾಧಾನಕರವಾಗಿರಲಿಕ್ಕೆ ಬ್ಲವಾಗಿ ವದಂತಿಯುಂಟು ಆದಾಗ್ಯೂ ಹಿಂದುಸ್ಥಾನ ಸರಕಾರವು ಕ್ರಿಯಾಹೀನವಾಗಲಾರದು ಲಂಡನ್ನಿನಲ್ಲಿ ಒಳ್ಳೇ ಗಡಿಬಿಡಿಯುಂಟಾಗಿದೆ ಮುಖ್ಯ ಪ್ರಧಾನರಾದ ಚರ್ಚಿಲ್ಲರವರನ್ನೂ ಭಾರತ ಮಂತ್ರಿಗಳಾದ ಮಿ॥ ಎಮೆರಿಯವರನ್ನೂ ಪದಚ್ಯುತ ಮಾಡುವ ಪ್ರಸಂಗ ಬಂದಾಗ್ಯೂ ಪರವಿಲ್ಲ, ಹಿಂದುಸ್ಥಾನದ ಸಮಸ್ಯೆಯನ್ನು ಬಿಡಿಸಿ ಲೋಕಸಂಗ್ರಹ ಮಾಡಿಕೊಳ್ಳಬೇಕು,ಎಂಬದೊಂದು ವಿಚಾರವ್ಯವಹಾರ ಘೋಷಣೆಗಳಿರುವುದು ಹಳ್ಳಿಯತೊಡಗಿದೆ ಲಂಡನ್ನಿನ 'ಪೀಪಲ್ಸ್ ವರ್ಡಿಯನ್ಸ್', 'ನ್ಯೂಸ ಕ್ರೊನಿಕಲ' ಪತ್ರಿಕೆಗಳು ಈ ವಿಷಯವನ್ನು ಬಲವಾಗಿ ಪ್ರತಿಪಾದಿಸ ತೊಡಗಿವೆ ಒದಗಿದಮ್ಮು, ಕೂಡಿದಮ್ಮು ಲೋಕಸಂಗ್ರಹವಮ್ಮು ಸಂಗ್ರಹಿಸುವ ಕಾಲ ಬ್ರಿಟಿಶರಿಗೀಗ ಪ್ರಾಪ್ತವಾಗಿದೆ, ಸಣ್ಣ ಇರಿವೆಯನ್ನು ಸಹ ಫೀಕರಿಸಬರದು, ಎಂಬಭಾಗಿ 'ಗಾರ್ಡಿಯನ್' ಕತೆರು ಬರೆದು, ಶಿಳ್ಳುವೇ ಹಿಂದುಸ್ಥಾನವನ್ನು ಸಂತೈಸಲು ಸಾಮ್ರಾಜ್ಯ ಸರಕಾರಕ್ಕೆ ಒತ್ತಾಯ ಮಾಡುತ್ತಾರೆ ನಾಮಾಂಕಿತ ಲೇಖಕರಾದ ಮಿ॥ ಒನಾರ್ಡ ಶಾರವರು ಲಂಡನಿನಲ್ಲಿ ಸೇರಿದ ಹಿಂದೀಸಂಘದ್ಕಿಸಭೆಗೆ ಕಳುಹಿದ ಸಂದೇಶದಲ್ಲಿ, ಸರ್ ಸ್ಟೆಫರ್ಡ ಕ್ರಿಪ್ಸರಿಗೆ ಹಿಂದುಸ್ಥಾನಕ್ಕೆ ವಿಷಯಿಗಾಗಿ ಕಳಿಸಿದ್ದೇ ತಪ್ಪಾಯಿತೆಂದೂ, ಉದಾರ ಮನಸ್ಸಿನಿಂದ ಈ ಸಮಸ್ಯೆಯನ್ನು ಬಿಡಿಸಬೇಕಾಗಿಯೂ ಬರೆದಿದ್ದಾರೆ ಚೀನದ ಜಾಂಗ-ಕೈ-ಶೇಕರೂ ಆಮೇರಿಕೆಯ ರೂಝುವೆಲ್ಟರೂ ಹಿಂದೀ ಸರಕಾರಕ್ಕೂ ಸಾಮ್ರಾಜ್ಯ ಸರಕಾರಕ್ಕೂ ರಾಜ್ಯೀಯ ಸಭೆಯನ್ನು ಸಂತೈಸಲು ಆಗ್ರಹಮಾಡುತ್ತಾರಂತೆ ಹಿಂದುಸ್ಥಾನ ಸರಕಾರದಲ್ಲಿ ಗೃಹ ಮತ್ತು ಅರ್ಥ ಇಲಾಖೆಗಳು ಈಗ ಬ್ರಿಟಿಶರ ಸ್ವಾಧೀನವಿವೆ ಅವನ್ನೆಲ್ಲ ಹಿಂದೀಯರಿಗೊಪ್ಪಿಸಿ ಇಡೀ ಹಿಂದುಸ್ಥಾನ ಸರಕಾರವನ್ನು ಹಿಂದೀಯರದನ್ನಾಗಿ ಸಂಘಟಿಸುವದೊಂದು ಯೋಜನೆಯನ್ನು ಹಿಂದುಸ್ಥಾನ ಸರಕಾರವು ಗಾಂಧೀಯರ್ಯಿಂದ ಪರ್ಯಾಲೋಚಿಸುತ್ತಿದಂತೆ. ಹಿಂದುಸ್ಥಾನ ಸರಕಾರವು ರಾಷ್ಟ್ರೀಯ ಸಭೆಯ ಮೇಲೆ ಯುದ್ಧಸೋವೆ ಮಾಡಿದ್ದೆ'ನೋ ನಿಜ, ರಾಷ್ಟ್ರೀಯ ಸಭೆಯನ್ನು ಕಾಯಿದೆಬಾಹ್ಯ ಸಂಸ್ಥೆಯೆಂದು ಘೋಷಣೆ ಹೊರಡಿಸಿದ್ದೂ ನಿಜ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭ್ಯಸದರಿಗೂ ಪ್ರಮುಖ ಕೊಂಗ್ರೆಸ ಕಾರ್ಯಕರ್ತರಿಗೂ ಕೈಸೆರೆ ಹಿಡಿದದ್ದೂ ನಿಜ! ಆವರೆ ಗಡಿನಾಡಿನಲ್ಲಿ ಈ ರಾಜಕಾರಣ ರೂಢವಾಗಿಲ್ಲ! ಖಾನ್ ಅಬ್ದುಲ್ ಗಫ್ಫಾರಖಾನ್ ಪ್ರಭೃತಿ ರಾಷ್ಟ್ರೀಯ ಸಭೆಯ ಲೋಕನಾಯಕರು ಸಭೆ, ಮೆರವಣಿಗೆ, ಪಿಕೆಟಿಂಗ್ ಮೊದಲಾದ ಚಟುವಟಿಕೆಗಳನ್ನು ನಿರ್ವಿಘ್ನೆಯಿಂದ ನಡಿಸುತ್ತಿದ್ದಾರೆ ಹಿಂದುಸ್ಥಾನಸರಕಾರವು ಅವರಮ್ಮೆಮೇಲೆ ಇನ್ನೂ ಕೈಹಾಕಲಿಲ್ಲ ಯುದ್ಧಕಾರಣದಲ್ಲಿ ಮುಸಲ್ಮಾನ್-ಲೀಗ್‌ರು ಸಬೆ ರಕ್ಕೆ ವಿಘ್ನವುಂಟಾಗುವದೆಂದು ಕೈ ತಡೆಮಾಲುಗಿದೆಂದು ಎಣಿಸಲಾಗುತ್ತಿದೆ ಹಿಂದುಸ್ಥಾನದೊಗಿನ ದಬ್ಬಾಳಿಕೆಯಿಂದ ಯುದ್ಧ-ಕಾರಣಕ್ಕೆ ವಿಘ್ನವುಂಟಾಗುತ್ತದಾಗಿ ಸರಕಾರವು ಮನೆಗಂಡರೆ, ದಬ್ಬಾಳಿಕೆಯನ್ನು ನಿಶ್ಚಿಸಿ ಸರಕಾರವು ರಾಷ್ಟ್ರೀಯ ಸಭೆಯು ಕಾರ್ಯಕರ್ತರೊಡನೆ ವಿಚಾರವಿನಿಮಯ ಮಾಡತೊಡಗುವ ಸಂಭವವುಂಟು ಮಹಾತ್ಮರ ಕೈಸೆರೆಯಿಂದ ಜೀರ್ಣದೊಳಗುಂಟಾವ ಅನಿಷ್ಟ ಘಟನೆಗಳಿಂದ ರಾಷ್ಟ್ರೀಯ ಸಭೆಯ ಪ್ರತಿಪತ್ತೆಯೆಷ್ಟುಂಟೆಂದು ಹಿಂದುಸ್ಥಾನ ಸರಕಾರಕ್ಕೆ ಈಗ ಮನದಟ್ಟಾಯ್ತಿಗರಬೇಕು ಅಖಿಲ ಭಾರತೀಯ ಪತ್ರಿಕರ ಸಭೆಯಲ್ಲಿ ಹಿಂದುಸ್ಥಾನ ಸರಕಾರದ ಮುಖ್ಯ ಸೂತ್ರಧಾಕರಾದ ಸರ್ ರೆಜಿನೊಲ್ಡ ಮೆಕ್ಸ್‌ವೆಲ್ಲರವರು ಸೇರಿಕೊಂಡು ವಿಚಾರ ವಿನಿಮಯ ಮಾಡಿದ್ದರೆ ಮೇಲಿಂದ, ಹಿಂದ-ಜನಾಂಗದ ಆಂಕರಂಗದ ಗ್ರಹಿಕೆ ಸರಕಾರಕ್ಕೆ ಆಗಿರಬೇಕು ಅದರಿಂದ ರಾಜ್ಯಭಾರದಲ್ಲಿ ಶಿಳ್ಳುವೇ ರಾಷ್ಟ್ರೀಯ ಸಭೆಯ ಘೋರಣದಂತೆ ಸುಧಾರಣೆಯಾಗಬಹುದೆಂದು ಒಂದು ಆರೆಯಿದೆ.

ಮಾರುವದಿದೆ!

1936ನೇ ಮೊಡೆಲ 26-33 ಹೊರ್ಸ ಪವರಿನ **ಬೆಡ್‌ಫೋರ್ಡ (Bedford)** ಗಾಡ್ಸ ಟೊಡಿಯ ಒಸ್ಸು ನಡೆಯುವ ಸ್ಥಿತಿಯಲ್ಲಿದ್ದದ್ದು ಯೋಗ್ಯ ಬೆಲೆಗೆ ಮಾರುವದಿದೆ! ಪ್ರಯಾಸ ಇದ್ದವರು ಸೀಲ ಮಾಡಿದ ತಮ್ಮ ಟೆಂಡರುಗಳನ್ನು ಕಳಸಬೇಕು ಮೋಟಾರು ಶಿರ್ ಮ್ಯು॥ ಗೆನೇಜಿನಲ್ಲಿ ನೋಡಲಿಕ್ಕೆ ಸಿಗುವದು ವಿಶ್ರಿ ಶರ್ತುಗಳು ಆಫೀಸ ವೇಳೆಯಲ್ಲಿ ನೋಡಲಿಕ್ಕೆ ಸಿಗುವವು ಹೆಚ್ಚಿನ ಮಾಹಿತಿ ಬಗ್ಗೆ ಸೆಕ್ರೆಟರಿ, ಶಿರ್ ಮ್ಯುನಿಸಿಪಾಲಿಟಿ ಇವರಿಗೆ ಬರೆಯಿರಿ

ಶಿರ್ ಮ್ಯು॥ ಆಫೀಸ,
ತಾ 28-8-1942

ಡಿ. ವ್ಹಿ. ಸೋಂದೆ,
ಸ್ಪೆಸಿಯೆಂಟ,
ಶಿರ್ ಮ್ಯುನಿಸಿಪಾಲಿಟಿ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ರಿಜಿಸ್ಟರ್ಡ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೆಂಚ ಆಫೀಸುಗಳು -- ಅಂಕೋಲಾ, ಬೆಳಗಾಂವ, ಕುಂದಾಪುರ, ಬೈಂಡೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ರೇವುಗಳು, ಸೇವಿಂಗ್ಸ ಬೇಂಕ್ ರೇವುಗಳು ಮತ್ತು ಚಾಲು ರೇವುಗಳು ಸಹ ಅಂಗೀಕರಿಸಲ್ಪಡುವವು

ಬಂಗಾರದ ದಾಗಿನೆಗಳ ಮತ್ತು ಇತರ ವ್ಯಾಪಾರದ ಮ್ಹಾಲುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚಕ್ಕುಗಟ್ಟುಸಹ್ಲೆಕೊಡಲ್ಪಡುವವು ಎಲ್ಲತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
11—8—1942

The Agricultural & Industrial Bank, Ltd

ಸ್ಥಳಿಕ ವಿಷಯಗಳು.

ಲೇಖಕ— ಸ್ಥಳಪಂತಿಕ.

ಈ ಹೊತ್ತು ಮಧ್ಯರಾತ್ರೆಯಿಂದ ಹಿಂದುಸ್ಥಾನ ಸರಕಾರದ ಆಪ್ತಕಛೇರಿಯಂತೆ ಗಡಿಯಾರದ ಮುಳ್ಳುಗಳು ೧ ತಾಸು ಮುಂದರಿಯುತ್ತವೆ ಅಂದರೆ ಈಗಿನ ಗಡಿಯಾರದಲ್ಲಿ ಬೆಳಿಗನ ೧೦ ಪೆಂಟಿಗೆ ೧೯ ಪೆಂಟಿ ಯೆಂದು ಹೇಳಹತ್ತುತ್ತಾರೆ. ಸೃಷ್ಟಿಕ್ರಮದಲ್ಲಿ ಅಥವಾ ಸೂರ್ಯ-ಚಂದ್ರ ಗ್ರಹ-ಗತಿಗಳಲ್ಲಿ ವ್ಯತ್ಯಾಸವಿಲ್ಲ ಅವುಗಳ ಋಜು-ಗತಿ, ದ್ರುತ ಗತಿ, ವಕ್ರ-ಗತಿಗಳಿಲ್ಲ ಖಗೋಲಶಾಸ್ತ್ರವಿಧಿಯಂತೆ ನಡೆಯುತ್ತವೆ ಗಡಿಯಾರದ ಮುಳ್ಳು ಸರಿದಂತೆ ಸೂರ್ಯ-ಚಂದ್ರ ಗತಿ ಹಿಂದೆ-ಮುಂದೆ ಸರಿಯುವದಿಲ್ಲ. ಹಿಂದುಸ್ಥಾನ ಸರಕಾರವು ಉಗಿಬಂಡಿ, ತಂತಿ-ಟಪಾಲು, ಗಿರಣಿ, ಬೇಂಕ ಮೊದಲಾದ ಸಂಸ್ಥೆಗಳ ವೇಳೆಯನ್ನು ಒಂದು ತಾಸು ಹಿಂದೆ ಸರಿಸಿ, ಜೇಷ್ಠ ಪತ್ರತವನ್ನು ತಿದ್ದುಪಡಿ ಮಾಡುವ ಬದಲಿಗೆ, ಗಡಿಯಾರದ ಮುಳ್ಳನ್ನು ಮುಂದರಿಸಬೇಕೆಂದು ವಿಧಿಸಿದೆ ಈಗಿನ ಗಡಿಯಾರಗಳು ಸ್ಟೆಂಡರ್ಡ ಟ್ಯಾಮನ್ನು ಅಂದರೆ ಒಂದು ಪ್ರಮಾಣ ಸಮಯವನ್ನು ತೋರಿಸುತ್ತವೆ ಸಾಮಾನ್ಯವಾಗಿ ಬೆಳಿಗನ ೬ ಪೆಂಟಿಯೆಂದರೆ ಸೂರ್ಯೋದಯ; ೧೪ ಘಂಟೆಯಂದರೆ ಮಧ್ಯಾನ್ನ, ಸಂಜೆ ೬ ಘಂಟೆಯೆಂದರೆ ಸೂರ್ಯಾಸ್ತ; ರಾತ್ರೆ ೧೨ ಘಂಟೆ ಯೆಂದರೆ ಮಧ್ಯ ರಾತ್ರೆ. ಹೀಗೆ ಸಮಯವನ್ನು ತಿಳಿಕೊಳ್ಳುವ ರೂಢಿಯುಂಟು. ಪ್ರತಿಯೊಂದೆಡೆಯಲ್ಲಿ ಇದೇ ಪ್ರಕಾರ ತಿಳಿಕೊಳ್ಳುತ್ತಾರೆ ಹಳ್ಳಿಗಳಲ್ಲಿ ಗಡಿಯಾರಗಳಿಲ್ಲ ಹಳ್ಳಿಗರಿಗೆ ಘಂಟೆಯ ಲೆಕ್ಕ ಗೊತ್ತಿಲ್ಲ ಸೂರ್ಯೋದಯವಾದ ೧ ತಾಸಿಗೆ ಅವರು ೧ ತಾಸು ಹೊತ್ತು ಹೇಳುತ್ತಾರೆ, ಸೂರ್ಯಾಸ್ತವಾದ ೧ ತಾಸಿಗೆ ೧ ತಾಸು ರಾತ್ರೆ ಹೇಳುತ್ತಾರೆ; ಸೂರ್ಯನಾರಾಯಣನು ನೆತ್ತಿಯ ಮೇಲೆ ಬಂದೊಡನೆ ಮಧ್ಯಾನ್ಹವಾಯಿತೆನ್ನುತ್ತಾರೆ, ಸೂರ್ಯಾಸ್ತದಿಂದ ೬ ತಾಸಿಗೆ ಮಧ್ಯರಾತ್ರೆ. ಈ ಜನರಿಗೆ ಗಡಿಯಾರದ ಮುಳ್ಳು ಮುಂದೆ ಸರಿದರೂ ಒಂದೇ, ಹಿಂದೆ ಸರಿದರೂ ಒಂದೇ! ತಾಸಿನ ಲೆಕ್ಕದಲ್ಲಿ ವ್ಯತ್ಯಾಸವಿಲ್ಲ ಬ್ರಿಟಿಶ ರಾಜ್ಯದಲ್ಲಿ ಸುಧಾರಿಸಿ ಘಂಟೆ ಲೆಕ್ಕ ಕರಿತವರಿಗೂ ಗಳಿಗೆ-ಗಳಿಗೆಗೆ ಮುಂಗ್ಯ ಗಡಿಯಾರ ನೋಡಿಕೊಂಡು ನಿರ್ಗಮ-ಪಟ್ಟನಿಗರ ಗೃಹಿಕೆ ತಪ್ಪಿಸಿಕೊಂಡವರಿಗೂ ಈಗ ಸ್ವಲ್ಪ ಗೊಂದಲವಾಗುವದು

ಸಾಮಾನ್ಯವಾಗಿ ೧೪ ತಾಸು ಹಗಲು, ೧೪ ತಾಸು ರಾತ್ರೆ ಹೀಗೆ ಲೆಕ್ಕವುಂಟು ಹಗಲಿನ ಲೆಕ್ಕ ಮಧ್ಯಾಹ್ನದ ಮೇಲೆ ಮಧ್ಯಾಹ್ನದ ವರೆಗೆ, ರಾತ್ರೆಯ ಲೆಕ್ಕ ಮಧ್ಯರಾತ್ರೆಯ ಮೇಲೆ ಮಧ್ಯರಾತ್ರೆಯ ವರೆಗೆ, ಹೀಗೆ ಲೆಕ್ಕ ಮಾಡಿ ಘಂಟೆಗಳು ಕಲ್ಪಿಸೋಣಾನೆ ಆದರೆ ದಿನಮಾನ ಸರಿಯಾಗಿ ಇರುವದಿಲ್ಲ. ಹಗಲು ದೊಡ್ಡದು, ರಾತ್ರೆ ಸಣ್ಣದು, ರಾತ್ರೆ ದೊಡ್ಡದು, ಹಗಲು ಸಣ್ಣದು, ಹೀಗೆ ಹೆಚ್ಚು-ಕಡಿಮೆಯಾಗುತ್ತದೆ. ಇಡೀ ವರ್ಷದಲ್ಲಿ ೧೪ ತಾಸು ಹಗಲು, ೧೪ ತಾಸು ರಾತ್ರೆ ಇರುವ ದಿನಗಳು ಎರಡೇ! ಇಂಥ ಸ್ಪಷ್ಟೀಕರಣ ಸಹ ನಿರ್ದಿಷ್ಟವಿದೆ ಭೂಮಧ್ಯರೇಖೆಯಿಂದ ಭೂಭಾಗದ ಅಂತರ ನ್ಯೂನ್ಯಾಧಿಕವಾದಂತೆ ದಿನಮಾನದಲ್ಲಾ ಏರು-ಮಾನದಲ್ಲೂ ವ್ಯತ್ಯಾಸವುಂಟಾಗುತ್ತದೆ ಅದಂದ ಒಂದು ಮಾದರಿಯ ಗಡಿಯಾರದೆಲ್ಲರುವ ಘಂಟೆಗಳು ಸಮಸ್ತ ಕ್ಷೇಳಗಳ ನೇಳೆ ವಸ್ತುಸ್ಥಿತಿಯಂತೆ ತೋರಿಸುವವಲ್ಲ ಇಡೀ ಹಿಂದುಸ್ಥಾನ ದೇಶ ಅಖಂಡ ಇಸಾಂಗವಾವ್ಯವಹಾರವನ್ನು ಸುಸೂತ್ರವಾಗಿ ನಡಿಸಲಿಕ್ಕೆ ಯಾವದೊಂದು ಸಮಯವನ್ನು ಸಾಮಾನ್ಯವಾಗಿ ಪ್ರಮಾಣವೆಂದು ಕಲ್ಪಿಸಿ ಲೆಕ್ಕಮಾಡಬೇಕಾಗುತ್ತದೆ. ಸ್ಥಳಿಕ ಸಮಯಕ್ಕೆ ಒಹು ದೂರ ಹೋಗದಂತೆ, ಇಡೀ ಹಿಂದುಸ್ಥಾನಕ್ಕೆ ಸಾಮಾನ್ಯವಾಗಿ ತಿಳುವಳಿಕೆಯಾಗುವಂತೆ ಸಮಯ ನಿರ್ದೇಶಿಸುವದೊಂದು ಸ್ತುತಾರ್ಹವೆಂಟು. ಇದೊಂದು ವ್ಯವಹಾರದ ಅನುಕೂಲತೆ. ಈಗಿನ ಸ್ಟೆಂಡರ್ಡ ಟ್ಯಾಮು ಲಂಡನ್ ರೇಶಾಂತರದಲ್ಲಿರುವ ಶ್ರೀಯಾಗದ ಒಳಿಯಲ್ಲಿರುವ ಒಂದು ಚಿಕ್ಕ ಗ್ರಾಮದ್ದು. ಈಗಿನ ಗಡಿಯಾರದಲ್ಲಿ ೬ ಘಂಟೆ ಯಾದೊಡನೆ ಅಲ್ಲಿ ಸೂರ್ಯೋದಯವಾಗುತ್ತದೆ ಈ ರೀತಿಯಾಂತದಿಂದ ಪೂರ್ವ-ಪಶ್ಚಿಮ ಸದಂತೆ ಸೂರ್ಯೋದಯದ ಸಮಯ ದರ್ಶನದಲ್ಲಿ ವ್ಯತ್ಯಾಸ ವುಂಟಾಗುತ್ತದೆ ಪೂರ್ವ ಪಾಶ್ಚ್ಯದಲ್ಲೂಕ್ಕೂ ಮುಂಬಯಿ ಪಟ್ಟಿಮದಲ್ಲಿ ೬೫ ನಂತರ ಬೆಳಗಾಗುತ್ತದೆ ಈ ಸ್ಟೆಂಡರ್ಡ ಟ್ಯಾಮು ಅಂದರೆ ಕಾಲ ಪ್ರಮಾಣದಂತೆ ಸರಕಾರವು ಜಲ್ಲರೂ ನಡಕೊಂಡು ಬಂದಿದ್ದಾರೆ

ಈಗ ಯುದ್ಧಕಾರ್ಯಾರ್ಥಿ ಮಿತವ್ಯಯ ಮಾಡುವ ಸಂಧ್ಯಮ ನಡೆದಿದೆ ಕಛೇರಿ, ಗಿರಣಿ ಮೊದಲಾದ ವುಗಳ ಸಮಯ ಬೆಳಿಗನ ೧೦ ಘಂಟೆಯಿಂದ ೬ ಘಂಟೆಯ ವರೆಗೆ ಇರುತ್ತದೆ. ಸಂಜೆ ೬ ಘಂಟೆಯ ತನಕ ಕೆಲಸ ಮಾಡಬೇಕಾದರೆ ದೀಪ ಹಚ್ಚಬೇಕಾಗುತ್ತದೆ ದೀಪದ ಖರ್ಚನ್ನು ಉಳಿಸುವದಕ್ಕಾಗಿ ಸರಕಾರ ಪ್ರಕಾರವಿರುವಾಗಲೇ ಹಚ್ಚಿನ ಕೆಲಸ ಸಾಗಿಸುವದಕ್ಕಾಗಿ ಗಡಿಯಾರದ ಮುಳ್ಳುಗಳನ್ನು ೧ ತಾಸು ಮುಂದರಿಸಬೇಕೆಂದು ವಿಧಿಸಲಾಗಿದೆ ಈಗಿನ ಗಡಿಯಾರದಂತೆ ಸಂಜೆ ೬ ಘಂಟೆಗೆ ಹೊತ್ತು ಕಾಲುತ್ತಿದ್ದರೆ ಹೊಸ ಗಡಿಯಾರದಂತೆ ೭ ಘಂಟೆಗೆ ಹೊತ್ತುಕಾಲುವದು ಈಗಿನ ಗಡಿಯಾರದಂತೆ ೧೦ ಘಂಟೆಗೆ ಕಛೇರಿಗೆ ಹೋಗಬೇಕಾದರೆ, ಗಡಿಯಾರ ಮುಂದರಿದ ಒಳಿಕ ಸಹ ಇದೇ ಅಂಕಿ ಫಡಿಯಾರದ್ದಲ್ಲಿ ತೋರಿದಾಗ ಕಛೇರಿಗೆ ಮುಟ್ಟಬೇಕಾದರೆ, ಈಗಿನ ಗಡಿಯಾರವನ್ನು ಊರ್ಜಿತ ಇಟ್ಟುಕೊಳ್ಳುವವರು ೧೦ ಘಂಟೆಗೆ ಕಛೇರಿಗೆ ಹೋಗಿ ತಲ್ಲಬೇಕು. ಕಛೇರಿ ೧೦ ಘಂಟೆಗೆ ಪ್ರಾರಂಭವಾಗುತ್ತದೆಂದು ಸ್ಟೆಯಾಂಡರು ೧೦ ಘಂಟೆಯೆಂದು ಬೇಸರಪಡಬಾರದೆಂದು ಗಡಿಯಾರವು ೧ ತಾಸು ಮುಂದರಿಸಲಾಗಿದೆ. ನೇಳಾ ಶಕ್ತಿಕವನ್ನು ಹಿಂದೆ ಸರಿಸುವದಕ್ಕಿಂತ ಗಡಿಯಾರದ ಮುಳ್ಳನ್ನು ಮುಂದೆ ಸರಿಸಿದರೆ ಜನರೂಢಿಗೆ ಅತಂಕವಾಗಲಿಕ್ಕಿಲ್ಲೆಂದು ಸರಕಾರದ ಅಭಿಪ್ರಾಯವಾಗಿ ಹೊಸ ಶಾಸನ ಹೊಡಿಸೋಣಾಗಿದೆ ಕ್ಲಪ್ತ ಸಮಯದಲ್ಲಿ ಕ್ಲಪ್ತ ಕೆಲಸ ಮಾಡುವ ಕ್ಲಪ್ತ ಜನರಿಗೆ ಮಾತ್ರ ಗಡಿಯಾರದ ಮುಳ್ಳನ್ನಿಂದ ಕೊಂಚ ಕಾಲ ಕೊಂಚ ಆನಾಪುಕೂಲತೆಯಾಗುವದು. ಮುಂಗ್ಯೆ-ಗಡಿಯಾರಗಳನ್ನು ಕೋಭೆಯೆಂದು ಇಲ್ಲವೆ ಭೂಷಣವೆಂದು ತೊಡುವವರಿಗೆ ಗಡಿಯಾರದ ಮುಳ್ಳು ಹಿಂದೆ-ಮುಂದಾದ್ದರಿಂದ ಲಾಭ-ಹಾನಿಗಳೇನಿಲ್ಲ! ಈ ಹೊಸ ಸಮಯ ಬ್ರಹ್ಮದೇಶದ ಸ್ಟೆಂಡರ್ಡ ಟ್ಯಾಮು! ಹಿಂದುಸ್ಥಾನದಿಂದ ಬ್ರಹ್ಮದೇಶವನ್ನು ಸಾಮ್ರಾಜ್ಯ ಸರಕಾರವು ತುಂಡರಿಸಿ, ಆ ದೇಶ ಶತ್ರುವತವಾದ ಒಳಿಕ ಆ ದೇಶದ ಕಾಲಗಣತಿ ಬ್ರಹ್ಮದೇಶಕ್ಕೆ ಅಖಿಲ ಹಿಂದುಸ್ಥಾನಕ್ಕೆ ವ್ಯಾಪ್ತವಾಗುವದೊಂದು ಹಿಟ್ಲರ-ಯದ್ಧ ವಿಕಾಜ-ಚೇಸ್ಟೆ!!

***

ನಮ್ಮ ಜಿಲ್ಲೆಯ ಗ್ರಾಮೋದ್ಧಾರ ಮಂಡಳದವರು ಗ್ರಾಮಗಳನ್ನು ಉದ್ಧರಿಸಲಿಕ್ಕೆ ಭಕ್ತಿ ಪುರಸ್ಸರ ದುಡಿಯುವದಿಲ್ಲವೆಂದು ಜನರು ಹೇಳುವ ಮಾತು ಸಟೆಯಲ್ಲ ಸಂಬಳವನ್ನೆಳೆಯಲು ಕಾಗದದ ಕುದುರೆಗಳನ್ನು ಓಡಾಡಿಸುವದಷ್ಟೇ ಇವರ ಕೆಲಸ ಗ್ರಾಮ-ಸುಧಾರಣೆ, ಗ್ರಾಮೋನ್ನತಿ, ಗ್ರಾಮೋದ್ಧಾರ ಮೊದಲಾದ ಬೇರೆ ಬೇರೆ ಎಜ್ಯೇ ಯೋಜನೆಗಳು ಆಗಿಹೋದವು. ಆದಾಗ್ಯೂ ಗ್ರಾಮದವರ ಪಾಡೇನು ಸುಧಾರಿಸಲೊಲ್ಲದು ಇದಕ್ಕೊಂದು ಉದಾಹರಣೆಯನ್ನು ಉಲ್ಲೇಖಿಸಬಹುದು— ಕುಮಟಾ ತಾಲೂಕಿನಲ್ಲಿ ಕಲವೆ, ಮೊಸ್ಸೆ, ಬಂಗಣೆ, ಅತ್ತಿಹಳ್ಳ, ಉಳೂರು, ಬಡಾರ, ಹಿಂಡುಬೈಲ, ನಂತೆಗೋಳಿ, ಕೈಲೋಡಿ, ದೀವಳ್ಳಿ, ಬಸ್ತಿಕೇರಿ, ಚುಮ್ಮೊಳ್ಳಿ ಹೀಗೆ ಗ್ರಾಮಗಳೆದ್ದು ಇವುಗಳೆಲ್ಲ ಕುಟ್ಟನಾಡ ಸೀಮೆಯೆನ್ನುತ್ತಾರೆ ಈ ಸೀಮೆಯಲ್ಲಿ ಯಾವಾಗಲೂ ದನಗಳ ಬೇನೆಯಿದೆ. ಪ್ರತಿ ವರ್ಷ ನೂರಾರು ದನಗಳು ಇಲ್ಲಿ ಸಾಯುತ್ತವೆ. ಈ ಘಟನೆಯ ಕಾರ್ಯ-ಕಾರಣವನ್ನು ಯಾರೂ ಚಾಕಶಿ ಮಾಡಿದ್ದು ತೋರುವದಿಲ್ಲ ಈ ವರ್ಷ ಮಾತ್ರ ಈ ದನಗಳ ಬೇನೆಯಿಂದ ೧೧೦೦ಕ್ಕೂ ಮಿಕ್ಕಿ ದನಗಳು ಭಯಭರಿತೆ ತೀರಿಕೊಂಡವು. ಅನೇಕ ದನವಿನ ವೈದ್ಯರಿಗೆ ಕೊಟ್ಟಿಗೆಗಳಿಗೆ ಮುಳ್ಳು ಹೊಡೆಯುವ ಸ್ವಸಂಗ ಬಂದಿದೆ. ದನವಿನ ಡಾಕ್ಟರರು ಸಾಂತಿಗಲ್ಲು ತನಕ ಹೋಗಿ ಪಟೆಲರ ಹತ್ತರ ಮಾತನಾಡಿ ಹಿಂತಿರುಗಿ ಬರುತ್ತಾರೆ, ಅಷ್ಟು ಒತ್ತಾಯವಿದ್ದರೆ ಸಂತೆಗೋಳಿಗೆ ಹೋಗುವರೇ ಒಬ್ಬಿಂದ ಮುಂದೆ ದನವಿನ ಡಾಕ್ಟರರು ಕಾಲಿಟ್ಟಿಲ್ಲ ಬಹುತರವಾಗಿ ಜವರು ಒಪ್ಪತ್ತು ಉಂಡಿಯವ ಸಂಪ್ರದಾಯ, ಬೆಳಿಗ್ಗೆ ೧೦ ಘಂಟೆಗೆ ಹೋಗಿ ತಲ್ಲುವದು, ಹೊತ್ತು ಕಂತುವಷ್ಟರಲ್ಲಿ ಹಿಂತಿರುಗಿ ಬರುವದು, ಹೆಚ್ಚೆಂದರೆ ೧೧ನಿನ ಉಳಿಯುತ್ತಾರೆ ದನಗಳಿಗೆ ಹಚ್ಚಲು ಎಣ್ಣೆ ಕಳಿಸಿಕೊಡುತ್ತೀನೆಂದು ಹೇಳಿ ಹಿಂತಿರುಗುತ್ತಾರೆ ಪ್ರತ್ಯಕ್ಷ ಎಣ್ಣೆ ಮುಟ್ಟುವ ತನಕ ದನಗಳು ಬಾಳಿಕೊಂಡಿರುವದು ಕಡಿಮೆ. ಎಣ್ಣೆಯ ಬಗ್ಗೆ ಕುಮಟೆಯ ತನಕ ಬರುವ ತಾಪತ್ರಯ ಸಸ ಜನರಿಗೆ ಒಡಗುವದಿಲ್ಲ.

ದನಗಳಿಗೆ ಕಾಲು-ಬಾಯಿ ಬೇನೆ ಬರುವ ಶ್ರಾಯ ಸಾಮಾನ್ಯವಾಗಿ ಆರ್ದ್ರಾ ಮಳೆಗೆ ತೆರಪಿಲ್ಲದೆ ಮಳೆ ಸುರಿದ ಬಳಿಕ, ರಾಗಿ-ಕಾಳಿನಷ್ಟು ಚಿಕ್ಕ ಕೀಟಕಗಳು ಗುಂಪು ಗುಂಪಾಗಿ ಹುಲ್ಲುಬರುತ್ತವೆ ಅವು ದನವಿಗೆ ಕಚ್ಚಿದೊಡನೆ ದನಗಳು ಹುಲ್ಲು-ನೀರು ಬಿಟ್ಟು ೧-೨ ದಿನಗಳಲ್ಲೇ ತೀರಿಕೊಳ್ಳುತ್ತವೆ. ಸಾಮಾನ್ಯವಾಗಿ ಒಂದೇ ದಿವಸದಲ್ಲಿ ತೀರಿಕೊಳ್ಳುವ ಕ್ರಮ, ಗಟ್ಟಿ ದನವಿದ್ದರೆ ಮಾತ್ರ ೨ ದಿನ ತೆಗೆಯುತ್ತದೆ ಮೇಯಬಿಟ್ಟ ದನಗಳಿಗೆ ಇವು ಕಚ್ಚಿದರೆ ಈ ದನ ಪುನಃ ಕೊಟ್ಟಗೆ ಕಾಣುವದಿಲ್ಲ. ಈ ಕೀಟಕ ಈ ಸೀಮೆಯಲ್ಲಿ ಬಹುತರವಾಗಿ ೮-೧೦ ದಿನ ಉಳಿಯುವ ಸಂಪ್ರದಾಯ. ಆದರೆ ಈ ವರ್ಷ ಮೃಗಶಿರಾ ಮಳೆಗೇ ಈ ಕೀಟಕ ಬಂದು ಆರ್ದ್ರೆಷಾ ಮಳೆಯ ತನಕ ಉಳಿಯಿತು. ಸಾಧಾರಣ ೨-೩॥ ತಿಂಗಳ ಕನಕ ಈ ಕೀಟಕಗಳು ಉಪದ್ರವ ಕೊಟ್ಟವು. ಈ ಕೀಟಕಕ್ಕೆ ಯಾವದೂ ಈಡಲ್ಲ. ಪ್ರಾಣಿ-ಮಾತ್ರಕ್ಕೆಲ್ಲ ಈ ಕೀಟಕ ದಂಶ ಮಾಡುತ್ತದೆ ಆನೆ ಸಹ ಈ ಕೀಟಕಕ್ಕೆ ಹೆದರುತ್ತದೆ ಈ ಕೀಟಕದ ಹಾವಳಿಯಿರುವಾಗ ಜಂಗಲ ಕಂಟ್ರಾಕ್ಟರರು ಆನೆಯ ಕೆಲಸವನ್ನು ವ್ಯಾರಂಭಿಸುವದಿಲ್ಲ ಮನುಷ್ಯರಿಗೆ ಈ ಕೀಟಕ ಕಚ್ಚಿದರೆ ರಕ್ತ ಸುರಿಯುತ್ತದೆ ಅದರಿಂದ ಒಬ್ಬಿಲಿಗರು ಈ ಕೀಟಕದ ಹಾವಳಿ ಹಬ್ಬಿದಾಗ, ಗದ್ದೆ ಹೂಡುವ ಸಮಯ ಎರಡೂ ಕೈಗಳನ್ನು ಕಂಬಳಿಯ ಒಳಗೆ ಹಿಡಿದು, ಕೆಳೆಯಿಂದ ಎತ್ತುಗಳನ್ನು ತಬಿ ಹೂಡುತ್ತಾರೆ ಹೊನ್ನೆಳ್ಳೆ ಹಚ್ಚಿದರೆ ಈ ನುಸಿ ಸುಳಿಯುವದಿಲ್ಲ ಆದರೆ ಹೊನ್ನೆಳ್ಳೆ ಅರಿದೊಡನೆ ನುಸಿ ಕಚ್ಚುತ್ತೆಂದು ತಿಳಿಯುವದೇ! ಆದಾಗ್ಯೂ ಈ ಕೀಟಕಗಳಿಗೆ

ದನವಿನ ರಕ್ಷಣ್ಣೇ ಹೆಚ್ಚಿನ ದುಡಿ! ಕೂಟ್ಟಗೆಗಳಿಗೆ ಕಟ್ಟಿದ ಮತ್ತು-ತಪ್ಪಿಗಳೊಳಗಿಂದ ಈ ಕೀಟಕಗಳು ಒಳಸೇರಿ ದನಗಳಿಗೆ ಕಚ್ಚಿ ಘಾತ ಮಾಡುವದೂ ಉಂಟು. ಈ ಸೀಮೆಯಲ್ಲಿ ಮಣ್ಣಿನ ಗೋಡೆಗಳುಳ್ಳ ಕೂಟ್ಟಿಗೆಗಳು ಅಪರೂಪ. ಈ ಗುಬಿ ಎಲ್ಲಿ ಹುಟ್ಟುತ್ತವೆ, ಹೇಗೆ ಹುಟ್ಟುತ್ತವೆ, ಇದರ ಆಯುರ್ಮಾನವೆಷ್ಟು, ಘಾತಕ ಸಾಮರ್ಥ್ಯವೆಷ್ಟು, ಇದಕ್ಕೆ ಏರಿಹಾರವೇನು? ಎಂಬ ಯಾವದೇ ಸಂಗತಿಗಳ ಚಾಕಶಿಯಾದದ್ದು ತೋರುವದಿಲ್ಲ. ದನಗಳ ಚಿಕಿತ್ಸೆಗಾಗಿ ಕುನಬಿಯಂದ ಸಾಂತಗಲ್ಲ-ಸಂತೆಗೋಲ ತನಕ ಪ್ರವಾಸ ಕೈಕೊಂಡ ಚಿಕಿತ್ಸಕರು ರೋಗ-ಮೂಲವನ್ನು ಪರಿಶೋಧಿಸಿದ್ದು ತೋರುವದಿಲ್ಲ. ಕಾಲು-ಬಾಯಿ ಬೇನೆ ಎಂಬ ಶಬ್ದ ಕೇಳಿದೊಡನೆ ಲೇಪ ಮಾಡಲು ಎಣ್ಣೆ ಕೊಡುವ ದಿಸ್ಟೇ ಡಾಕ್ಟರರ ಕೆಲಸ. ದನ ಬದುಕಬೇಕು, ದನಗಳ ಸಂಖ್ಯೆ ನಿನ್ನಾರನೆಯಗಾಗಬೇಕು, ಆ ಬಗ್ಗೆ ತಮ್ಮ ಬುದ್ಧಿ-ಶಕ್ತಿಗಳನ್ನು ಪ್ರಯೋಗಿಸಬೇಕು ಎಂಬ ಹಂಬಲ ಡಾಕ್ಟರರಿಗಿದ್ದದ್ದು ಕಡಿಮೆ ಈ ಸಂಶೋಧನೆ ಅವರ ಕರ್ತವ್ಯ-ಕಕ್ಷೆ (duty) ಯಲ್ಲಿ ಸೇರ್ಪಡೆಯಾಗುವದಿಲ್ಲ. ಈ ಕೀಟಕಗಳ ಕುರಿತು ಒಂದು ಅಭ್ಯಾಯ ಬರೆಯುಂಟು. ಮೊನ್ನೆಯ ಆಚೆಗೆ ೨-೩ ಮೈಲು ದೂರ ಈ ನುಶಿಗಳ ಬಹು ದೊಡ್ಡದೊಂದು ಹುತ್ತು ಉಂಟಂತೆ. ಅಲ್ಲಿ ಇವು ವಾಸವಾಗಿರುತ್ತವಂತೆ. ಮಳೆ ಬಿದ್ದ ಬಳಿಕ ಇವು ಕೊಯ್ಯುತ್ತವೆ, ಬೆಳೆಯುತ್ತವೆ ಮತ್ತು ಹಾರಿ ಹಾವಳಿ ಹಾಕಸಂಚರಿಸುತ್ತವೆ. ಈ ಹುತ್ತು ಇದ್ದದ್ದು ಘೋರ ಅರಣ್ಯವಲ್ಲಿ! ಈ ಹುತ್ತಿಗೆ ದಿನ ಬೆಳಗಾಗುವದರೊಳಗೆ ಮೇಲ್ಕಾಷ್ಟು ಕಟ್ಟಿ ನೀರು ಬೀಳದಂತೆ ವಿವಾರ್ಟು ಮಾಡಿದ್ದಲ್ಲಿ ಈ ನುಶಿಗಳು ಮಳೆಗಾಲವಲ್ಲಿ ಹೊರಬೀಳುವದಿಲ್ಲವಂತೆ! ಈ ಕಥೆ ನಟೆಯೋ, ದಿಟವೋ ಇದನ್ನು ಯಾರೂ ಇನ್ನೂ ಅರಿಯಲಾರರು. ಕಣ್ಣಿನಿಂದ[ಪ್ರತ್ಯಕ್ಷ]ಕ್ಕೆ ಹುಕ್ಕನ್ನು ನೋಡಿದವರ್ಯಾರಿಲ್ಲ ಪರಂಪರೆಯಿಂದ ಈ ಅಭ್ಯಾಯಕೆ ಕೇಳಿಬರುತ್ತದೆ. ಧಾರೆಯಾಗಿ ಬಿದ್ದ ಮಳೆಯಂದ ಬೆಟ್ಟದಲ್ಲಿ ವಿಲಕ್ಷಣವಾದ ತಂಪು ಹುಟ್ಟಿದ ಬಳಿಕ ನಿಸರ್ಗದಂತೆ ಈ ಕೀಟಕ ಹುಟ್ಟು ತ್ತಿರಬೇಕೆಂದು ವೈದ್ಯಾಧಾರಜ್ಞರ ಅಭಿಪ್ರಾಯವುಂಟು. ಈ ವರ್ಷ ಮೃಗಶಿರದಿಂದ ಆರ್ದ್ರೇಷಾ ನಕ್ಷತ್ರದವರೆಗೆ ತೆರಪಿಲ್ಲದೆ ಮಳೆ ಸುರಿದು ಲೋಕವೆಲ್ಲ ತಂಪಾಗಿ ತೇವೆದ್ದರಿಂದ ಈ ಕೀಟಕ ೨ ತಿಂಗಳ ತಡಿಕೆ ಈ ಸೀಮೆಯವರಿಗೆ ಬಾಧಿಸಿತು ಪ್ರಾಣಿ ಶಾಸ್ತ್ರಜ್ಞರು ಸಂಶೋಧನ ಮಾಡುವಡೊಳಿತು

ದನಗಳ ಬೇನೆಯಿಂದ ಈ ಸೀಮೆಯ ಒಕ್ಕಲಿತನ ಘೋರವಾಗಿ ಕಂಗೆಟ್ಟಿದೆ. ಹೊಡಲು ಉಸಾಯನೇ ಗುಳಿಯಲಿಲ್ಲ. ಉಳೂರು ಗ್ರಾಮದಲ್ಲಂತು ಒಕ್ಕಲಿಗ ಸ ೧೨-೧೩ ಕೊಳಗ ಬೀಜವನ್ನು ಹೇಗೂ ಮಾಡಿ ನಿತ್ತಿದರು ಇವ್ವು ಹೊಲವನ್ನು ಸಹ ಒಕ್ಕಲಿಗರು ತಿಲ ಕಡಿದು ಆಶೆಗೆ ಬಿತ್ತಿದ್ದಾರೆ; ಉಳಿದ ಭೂಮಿ ಬಂಜರು ಬಿದ್ದಿದೆ ಉಳಿದ ಗ್ರಾಮಗಳಲ್ಲಿ ಹೆಚ್ಚು-ಕಿಮೆ ಇದೇ ಆವಸ್ಥೆ! ಕೀಟಕಗಳ ಬಾಧೆ ಕಡಿಮೆ ಬಿದ್ದ ಊರುಗಳಲ್ಲಿ ಮಾತ್ರ ಹೆಚ್ಚಿನ ಭೂಮಿ ಸಾಗು ಳಿಯಾಗಿದೆ ಗ್ರಾಮೋದ್ಯಾರ ಮಂಡಳದ ಕಾರ್ಯ ರ್ನಿಗಳು ಈ ಸೀಮೆ ಸಂಚರಿಸಿ ೮ ದಿನ ಈ ಸೀಮೆ ಯಲ್ಲುಳಿದು ವಸ್ತುಸ್ಥಿತಿಯ ಚಾಕಶಿ ಮಾಡುವಂತೆ ಲ್ಲಾಧಿಪರ ಉದಕಾರಗಳನ್ನು ಸ್ಮರಿಸುವರು.

***

ಹೊನ್ನಾವರದಲ್ಲಿ ಬರ್ಮಾ-ಶೆಲ್ ಕಂಪನಿಯ ಜಂಟರೂ ರಾ। ಹೆನ್ಸಾರ ನರಸಿಂಹ ಸಾಂಡುರಂಗ ಇವರೂ ಕೂಡಿ ಅಕ್ಕಿ, ತೆಂಗಿನ ಎಣ್ಣಿ, ಚಿಮಣಿ ಶೈಗಳನ್ನು ಜಲ್ಲಾಧಿಪರು ವಿಧಿಸಿದ ದರಗಳಿಂದ ಇತ್ತ ೩-೪ ವಾರಗಳಿಂದ ಮಾರತೊಡಗಿದ್ದಾರೆ. ಅದೇ ಪ್ರಕಾರ ಕುಮಟೆಯ ರಾ। ವೆಂಕಟರಮಣ ಸಾಂತಪ್ಪ ನಾಯಕರೆ, ರಾ। ಸುಬ್ರಾಯ ವಿಠ್ಠಲ ಕಾಮತ ಇವರು ತೆಂಗಿನ ಎಣ್ಣೆಯನ್ನು ನಿಯಂತ್ರಿತ ದರ ದಿಂದ ಮಾರುತ್ತಿದ್ದಾರೆ; ಇವರು ಎಣ್ಣೆಯನ್ನು ಬೇರು, ಅರ್ಧ ಶೀರು, ಪಾವ ಶೀರುಗಳಂತೆ ಗಿರಾಕಿ ನೋಡಿ ಮಾರುತ್ತಾರೆ. ಆದರೆ ಇತ್ತ ೨-೩ ದಿನಗಳಿಂದ ಕುಮಟಾ-ಹೊನ್ನಾವರಗಳಲ್ಲಿ ತೆಂಗಿನ ಎಣ್ಣೆಯ ಮಾರಾಟ ನಿಂತಿದೆ. ತೆಂಗಿನ ಎಣ್ಣೆ ಶಿಲ್ಕು ಇಲ್ಲವಂತೆ ಕೊಟ್ಟಯ್ಲಿ ಪೊಬ್ರಿ ಎಣ್ಣೆ ಖಿಂಡಿಗೆ ರೂ. ೧೫.೦ ದರವಾಗಿದೆಯಂ. ಹೆಚ್ಚಿದ ಸುದ್ದಿ ಸುಳ್ಳು; ಕೊಬ್ಬರಿ ಯಷ್ಟೆ ಈಗ ರೂ. ೧೬ಕ್ಕಾರ ಮಾವುಂಟು. ಅಂದರೆ ಡಬ್ಬೆಗೆ ಸರಾಸರಿ ರೂ. ೧೧-೧೨ ಬೀಳುತ್ತವೆ. ವರ್ತಕರು ತಮ್ಮ ಕಡಿಗಿದ್ದ ಶಿಲ್ಕು ಎಣ್ಣೆಯನ್ನು ಬೇರೆ ಬೇರೆ ನೆವ ಹೇಳಿ ಘಟ್ಟಕ್ಕೆ ರವಾನಿಸುತ್ತಾರೆ, ಹೊರತು ಊರಲ್ಲಿ ಮಾರಾಟ ಮಾಡುವದಿಲ್ಲ. ಕೆಲವರು ತೆಂಗಿನ ಎಣ್ಣೆ ಡಬ್ಬೆಗಳಿಗೆ ಎಳ್ಳೆಣ್ಣಿ, ನೆಲಗಡ್ಲೆ ಎಣ್ಣೆ, ಕುಸುಬಿ ಎಣ್ಣೆ ಹೀಗೆ ಹೆಸರು ಕೊಟ್ಟು ಪೇಟೆಯ ಧಾರಣೆ ಕೊಡುವವರಿಗೆ ಮಾತ್ರ ತೆಂಗಿನ ಎಣ್ಣೆಯನ್ನು ಸೌಸ್ಯದಿಂದ ಕೊಡುತ್ತಾರೆ. ತುಂಬಿದ ಪೇಟೆಯೊಳಗೆ ಈ ಸ್ಥಕಾರ ಕಳ್ಳತನ ನಡೆಯಗೊಡುವದು ವಿಶಿತ ವಲ್ಲ. ವರ್ತಕರೂ ಗಿರಾಕಿಗಳೂ ಎಲ್ಲರೂ ಸುಳ್ಳರಾಗಿ ಸಮಾಜದ ಸಭ್ಯತನಕ್ಕೆ ಕುಂದು ಬರುತ್ತದೆ. ಪ್ರಪಂಚಕ್ಕೆ ಎಣ್ಣೆ ಬೇಕಾದಾಗ, ಅದು ನಿಯಂತ್ರಿತ ಧಾರಣೆಗೆ ಸಿಗದಾಗ ಗಿರಾಕಿಗಳು ವರ್ತಕರಿಂದಿನ ಒಳಸಂಚು ಮಾಡುವದು ಸ್ವಾಭಾವಿಕ ಸರಕಾರವು ನಿಯಂತ್ರಿತ ಧಾರಣೆಯಂದ ತೆಂಗಿನ ಎಣ್ಣೆಯ ಡಬ್ಬೆಗಳನ್ನು ತರಿಸಿ ಮಾರಾಟ ಮಾಡಲು ಹೆಚ್ಚಿದನಕೆ ಈ ಹೊಲು ಗಸ್ಥತನ ನಿಲ್ಲಲಿಕ್ಕಿಲ್ಲ. ಸಕ್ಕರೆ ಸಹ ಪೇಟೆಯಲ್ಲಿ ಕಾಣಿ! ನಿಯಂತ್ರಿತ ಸರಕುಗಳು ಸಭ್ಯರಿಗೆ ಯಾವ ಜೇ ದರದಿಂದ ದೊರಕುವದಿಲ್ಲ. ಜಿಲ್ಲಾಧಿಪರು ವರ್ತಕರೊಡನೆ ಆಲೋಚನೆ ಮಾಡಿ ದರಗಳನ್ನು ನಿರಿಸಿ ಕೊಟ್ಟರೂ ಜನರ ಸಂತೋಷವಿದೆ ಅಂತು ಪ್ರಜಾಸಿರ್ವಾಹ ಯೆರ್ಯಾದೆಯಿಂದ ಸಾಗಿಸುವಂತೆ ವಿವಾರ್ಟಾಗುವದು ಅವಶ್ಯ. ಕುಮಟಾ-ಹೊನ್ನಾವರಗಳೊಳಗಿನ ಉಭಯ ವರ್ತಕರ ಚಿಕ್ಕ ಉಸಕ್ರಮವನ್ನು ದೊಡ್ಡ ದೊಡ್ಡ ವರ್ತಕರು ಅನುಸರಿಸಬಹುದಾಗಿದೆ.

ಆ। ರ ಕಿರಕೋಳ ಅಂಗಡಿಕಾರರು ಈ ನಿಯಂತ್ರಣ ಮನ್ವಂತರದಲ್ಲಿ ತೀರ ಕಂಗೆಟ್ಟಿದ್ದಾರೆ ರೋಕ ವರ್ತಕರು ನಿಯಂತ್ರಿತ ದರಕ್ಕೆ ಮಿಕ್ಕಿ ದರ ಪಡೆಯುವಯ ಸವಾಗ, ಕಿರಕೋಳ ವರ್ತಕರು ಈ ಸರಕುಗಳನ್ನು ತಂದು, ಕೆಟ್ಟ ಬಿದ್ದನ್ನು ಗಳಿಸುವ ಬಗೆ ಇಲ್ಲದಂತಾಗಿದೆ. ಅವರಿಂದ ನಿಯಂತ್ರಿತ ಸಾಮಗ್ರಿಗಳು ಕಿರಕೋಳ ಅಂಗಡಿಕಾರರಿಗೆ ಈವಾಗ ಸಿಗಲೊಲ್ಲವು. ಕಿರಕೋಳ ಅಂಗಡಿಯಾಗಿ ಸರಕು ತರಪೋದ ಹುಡುಗನೊಬ್ಬನು ಸರಕು ಸಿಗದ ಬಳಿಕ, "ಈಗ ಬೇಕಾದರೆ ಕಲಸವಾಯಿತು, ಅಂಗಡಿ ಮುಚ್ಚುವ ಕಾಲ ಬಂತು!" ಎಂಬದಾಗಿ ಚೀರುತ್ತ ಹಿಡುಕ್ಕಿರುವ ಹೃದಯವ್ಯಾವಕ ವ್ಯಥೆಯನ್ನು ಒಬ್ಬರು ತಿಳಿಸಿ ವೈಸಲ ಪಡುತ್ತಾರೆ. ಕಿರಕೋಳ ವರ್ತಕರು ಎಲ್ಲ ತರದ ಸರಕುಗಳನ್ನೂ ಬಹುವಾಗಿ ಸಂಗ್ರಹಿಸಿಡಲಾರರು. ಆಗಿಂದಾಗ, ಒಮ್ಮೊಮ್ಮೆ ಹೊತ್ತು ಹೊತ್ತಿಗೆ ಗಿರಾಕಿ ನೋಡಿ ರೋಕ ವರ್ತಕರಿಂದ ಜೀನಸು ತಂದು ಕಿರಕೋಳ ಮಾರಾಟ ಮಾಡಿ ಉಳಿದ ದುಡ್ಡು-ಕಾಸು ಲಾಭಾಂಕದಿಂದ ಜೀರಿತಾರ್ಹ ಸಾಗಿಸುವವರವರು. ರೋಕ ವರ್ತಕರಿಗೆ ನಿಯಂತ್ರಣ-ಯುಗದಲ್ಲಿ ಕಿರಕೋಳ ವರ್ತಕರಾಗುವ ಬಯಕೆಯುಂಟಾಗಿದೆ! ಜಿಲ್ಲಾಧಿಪರು ಕಿರಕೋಳ ವರ್ತಕರಿಗೆ ಕಾಮಾ ಬೇಕು. ಕಿರಕೋಳ ವರ್ತಕರ ಅಭಾವವಲ್ಲಿ ಅಲ್ಲಿಲ್ಲಿ ಯ ಜನರಿಗೆ ಪ್ರಾಪಂಚಿಕ ಜೀನಸುಗಳನ್ನು ತಲ್ಪಿಸುವದು ದುರ್ಘಟವಾದ ಕೆಲಸ ಪೆಚ್ಚೆಂದರೆ ತಾಲೂಕುಗಳ ಮುಖ್ಯಮೆಜ್ಜೆ ಸ್ಥಳಗಳಲ್ಲಿ ಸರಕಾರವು ಒಂದೊಂದು ಅಂಗಡಿಯನ್ನು ತೆರೆಯಬಹುದು

ತೆಂಗಿನ ಎಣ್ಣೆಯ ವಿಷಯ ಹೇಗಿದ್ದರೂ ಚಿಮಣಿ ಎಣ್ಣೆಯ ಮಾರಾಟಕ್ಕೆ ಯಾವಮೊಂದು ನೆವ ಇರ ಕೂಡದು ತೆಂಗಿನ ಎಣ್ಣೆಯ ವರ್ತಕರಿಗೆ ಲಾಭ ಹಾನಿಗಳ ಹೊಣೆಗಾರಿಕೆ ಇರುತ್ತದೆ ಚಿಮಣಿ ಎಣ್ಣೆಯ ವಿಜಯರಿಗೆ ಅಂಥ ಹೊಣೆಗಾರಿಕೆಯಿರುವದಿಲ್ಲ ಈ ವಿಜಯರು ಎಣ್ಣೆ-ಡಬ್ಬೆಗಳನ್ನು ಊರೊಳಗಿನ ವರ್ತಕರಿಗೆ ಮಾರಾಟ ಮಾಡಲೊಪ್ಪಂಬಡುವದಿಲ್ಲ ಹಚ್ಚೆಂದರೆ ತಾವೇ ಬಾಟ್ಲುಯಿಂದ ಎಣ್ಣೆ ಮಾರುತ್ತಾರೆ. ಆಮ ಸಹ ಮರ್ಜಿಯಿದ್ದವರಿಗೆ ಸಿಗುತ್ತದೆ, ಇಲ್ಲದಿದ್ದವರಿಗೆ ಸಿಗುವದಿಲ್ಲ' ಜಿಲ್ಲಾಧಿಪರು ಈ ಕುರಿತು ಒಂದು ವ್ಯವಸ್ಥೆಯನ್ನು ಮಾಡಬಹುದು. ಮ್ಯುನಿಸಿಪಾಲಿಟ್/ಗ್ರಾಮ-ಪಂಚಾಯತು ಇವುಗಳ ವಿದ್ಯಮಾನ ಬಾಟ್ಲಿಯಿಂದ ಎಣ್ಣೆ ಮಾರಾಟ ಮಾಡಪಚ್ಚತ್ತಬೇಕು. ವಿಜಯರು ಹಚ್ಚಿ-ಎಣ್ಣೆಯನ್ನು ಮಾಮುಲೇಧಾರಂದ ಕೂಪನು ಪಡೆವವರಿಗೆ ಮಾತ್ರ ಮಾರಾಟ ಮಾಡುವಂತೆ ವಿಧಿಸಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಿಮಣಿ ಎಣ್ಣೆಯ ದರ ಆಕಾಶಕ್ಕೆ ಏಲ್ಪಿದೆ! ಡಬ್ಬೆಗಿಕ್ಕೆ ರೂ ೭ ಆಗಿದೆ! ಇನ್ನೂ ಈ ದರ ಏರಬಹುದು ಇಮೊಂದು ಕಲ್ಲೆಣ್ಣೆಯ ವಿಜಯರಿಗೆ ಉಲ್ಲಾಸದ ಕಾಲ! ಊರಲ್ಲಿ ಚಿನುಣಿ ಎಣ್ಣೆ ಇಲ್ಲ, ಕಂಪನಿಯವರು ಕೊಟ್ಟೆ ಲಿಮಿಟ್ಟಿಕ್ಕೋಟಾ ಅಂದರೆ ತಿಂಗಳಪಾಲು ಖರ್ಚಾಗಿದೆಂದು ವಿಜಯರು ಪ್ರತಿಯೊಬ್ಬರಿಗೆ ಹೇಳುತ್ತಾರೆ. ಯಾರಿಗೆ ಕೊಟ್ಟೆವೆಂದು ಯಾರಿಗೂ ಗೊತ್ತಾಗುವದಿಲ್ಲ! ಕಂಪನಿಯಿಂದ ತಿಂಗಳ ಪಾಲು ನಿರ್ದೇಶವಾಗಿ ಕಾಗದ ಬರುವದೇ ಪಡ; ಅದು ಖರ್ಚಾಯಿತೆಂದು ವಿಜಯರು ಗಳಿಸಾರ ಕೇಳುತ್ತಾರೆ. ಯಾವದೇ ಕಾರಣದಿಂದ ಕಲ್ಲೆಣ್ಣೆ ಜೋರಿಯೋಗದಂತೆ ಜಿಲ್ಲಾಧಿಪರು ಕೆಟ್ಟುಬ್ಜೆ ವಿಧಿಸಬೇಕು ಪೋಲೀಸರ ಅಲ್ಪತ್ವದಿಂದ ಡಬ್ಬೆಗಳು ಸ್ಥಳಾಂತರವಾಪ್ಪದ್ದಲ್ಲಿ ಪೋಲೀಸರು ಭ್ರಷ್ಟರಾದೆಂದು ತೀರ್ಮಾನಿಸಿ, ಅಂಥ ಪೋಲೀಸರಿಗೆ ಘೋರ ಶಾಸನ ವಿಧಿಸಬೇಕು. ಕಂಪನಿ ದರಕ್ಕೂ ವಕ್ಷಿಣ ಕನ್ನಡ ಜಿಲ್ಲೆಯೊಳಗಿನ ದರಕ್ಕೂ ಪ್ರತಿ ಡಬ್ಬೆಗೆ ರೂ. ೨ರಷ್ಟು ಅಂತರವಿರುವದರಿಂದ ಪೋಲೀಸರಿಗೆ ಒಂಚ ಕೊಡಲು ಸಹ ವರ್ತಕರಿಗೆ ತವುಕೂಲವೆಂಟು; ರಕ್ಕು ನಿಸ್ಥವಾದ ಸಂಗತಿಯಲ್ಲಿ ವಿಜಯರಿಗೂ ಸಂಬಂಧ ಪಟ್ಟ ವರ್ತಕರಿಗೂ ನಿಸ್ಸರತಪ್ಪದಂದೆ ದಂಡಿಸಬೇಕು.

ಕಂಬನಿ.

ಸಿಡಿದರಿಗಿದಂದಿದರಿ ಸುಡಿಯದಗಿನ್ತಂದದರಿ !
ಕಡುಕೋಕಕೆಡೆಮಾಪ್ತ ನಾವೆಲ್ಲರಂದು ॥
ಪೊಡವಿಯಂ ಕಾದೊಡೆದೆ ಕೀರ್ತಿಯಂತಿರಿಯೊಂದೆ ।
ಕಡಿದೇ ಕಾಲದುನು ? ದುಗುಡ ಯುಷಪವು ॥ ೧ ॥
ದೇಸಾಯಿ ವಾಡೆಯಭಾಯಿಯರ ನಿಧನಕಂ ।
ಆಸೇತು ಹಿಮಗಿರಿಯ ಜನಪದದ ಜನರಲ್ಲಿ ॥
ರಾಜಕಾರಣಜಕ್ಷು, ಗಾಂಧೀವಾಪರಮ ।
ರಾಜಋಷ ಮೇಧಾವಿಯೆಂಬು ಮರಗುವರು ॥ ೨ ॥
ನೂಲು ಮರವಕ್ಕಾಗಿ ಮಾತು ಮರಕ್ಕೆಯಾಗಿ ।
ಮೂಸುಮರ ಮುಂತ್ತನ ಮಹಾನಿಧಿಯೆ ಆದೆ ! ॥
ಜತೆಯಂತೆ ಮತ್ತಯೆಂಬ ತಾತ್ಪಾಸನಿರಿಬಿಟ್ಟು ।
ಕ್ಷಿತಿಗೊಯ್ದು ಕರ್ತಾರಲೆ ಕುರುಡಾಗಿಯೊಳೆದೆ ! ॥ ೩ ॥
ಖಂಡಿಸಾರದ ಹಾಸ ಬಂಡಿಯುರು ಭಾರತಕೆ !
ಕಂಬನಿಗೆ ಇಂದಿಲ್ಲ, ಸಮರ ಸಮಯವಿದು ! ॥
ಗಂಭೀರ ವಾಯುಮಂಡಲವಂದು ಭಾರತಿಂ ।
ಖಂಡಿರಿಲು ಮುಂಬರುವ ಭಾಗ್ಯ ಸಾನಿಯೆ ! ॥ ೪ ॥
ಕ್ಷಣ ಕಾಲ ಕಲ್ಲಾಗಿ ಮೈಯೆಲ್ಲ ಮುಳ್ಳಾಗಿ ।
ಮಜವೆನ್ನೆ ಮೃದಿಗಿದು ನೂಕ ಮರ್ತಿಕಾಂ ॥
ನಶುನಡುವಿ ಅಳಟಳಿದು ಮಾಡೀದ ದೀಸಮು ।
ಮಡಿದನೇ ? ದುರ್ವ್ಯವಿ ಧಾರಕವಿವೆಂದೆ ! ॥ ೫ ॥

* ಪ. ಗಾಂವಕಾರ.

ಕಾನಡಾವೃತ್ತ.

ಮತ್ತ ಚಿತ್ರಭಾನು ಸಂವತ್ಸರ ಪ್ರವರ್ತಕ ಕೃಷ್ಣ ೫೩, ಸೋಮವಾರ.

ತಾಳ್ಮೆ! ತಾಳ್ಮೆ!! ತಾಳ್ಮೆ!!!

ಸಮಸ್ತ ದೇಶಬಾಂಧವರಿಗೆ ತಾಳ್ಮೆಯ ಉಪದೇಶ ಮಾಡುವ ಪ್ರಸಂಗ ಈವಾಗ ಪ್ರಾಪ್ತವಾಗಿದೆ. ಮಹಾತ್ಮರನ್ನು ಕೈಸೆರೆ ಮಾಡಿ ರಾಜ್ಯಕರ್ತರು ಅನ್ಯಾಯ ಮಾಡಿದರೆಂದು ಈಗ ಪ್ರತಿಪಾದಿಸುವದನ್ನವಶ್ಯಕ ಆದರೆ ಮಹಾತ್ಮರ ಕೈಸೆರೆಯಿನ್ನೇಪ್ಪತ್ತೆವಾದುವಲ್ಲಾ ಬ್ರಿಟಿಶರಿಗೆ ರಾಜ್ಯಭಾರವನ್ನು ಶ್ವಾಜಿಸಚ್ಚುವ ಮಹಾತ್ಮಾ ರಾದಿ ರಾಷ್ಟ್ರೀಯ ಸಭೆಯವರಿಗೆ ರಾಜ್ಯಕರ್ತರು ಕೈಸೆರೆ ಹಿಡಿಯಲಿಕ್ಕಿಲ್ಲವೆಂದು ವ್ಯವಹಾರಜ್ಞರಾರೂ ತಿಳಿದಿರಲಿಲ್ಲ. ಕ್ರಾಂತಿ-ಕಾಲದಲ್ಲಿ ಸವಿಚಾರ ತಳೆದು ಯುಗಧರ್ಮಕ್ಕನುಗುಣವಾಗಿ ತಮ್ಮ ನಡತ ಳಿಕೆಯನ್ನು ಸರಿಪಡಿಸಿಕೊಳ್ಳುವವರು ಲೋಕದಲ್ಲಿ ಯಾವಾಗಲೂ ವಿರಳರೇ! ಜನರು ಕೆಲ ಮಟ್ಟಿಗೆ ಗಾಬರಿಗೊಳ್ಳುವರೆಂದೂ ಅಸಮಾಧಾನ-ಕಿಂತೋಪಪಡುವರೆಂದೂ ಎಣಿಸಲಾಗಿತ್ತು, ಆದರೆ ಈ ರೀತಿ ದೇಶ ತುಂಬ ಜನಾಜಾರ-ಆತ್ಯಾಚಾರ ದುರಾಚಾರಗಳು ಸತತ ನಡೆಯುತಿವೆಂದು ಸಾವೆಗಿರಲಿಲ್ಲ ಲೋಕ ವಿಚಾರ ಇಷ್ಟರ ಮಟ್ಟಿಗೆ ಕೆಲ್ಲವದೆಂದೂ ನಾವು ಕಲ್ಪಿಸಿರಲಿಲ್ಲ ಮದ್ರಾಸ, ಮುಂಬಯಿ, ಮಧ್ಯ-ಪ್ರಾಂತ, ಬಿಹಾರ, ಒಡಿಸಾ, ಬಂಗಾಲ, ಸಂಯುಕ್ತ ಪ್ರಾಂತಗಳಲ್ಲಿ ನಡೆದ ಯಾವಪಯ ವಾರ್ತೆಗಳನ್ನು ಓದಿ ಅನೇಕ ವಿಚಾರವಂತರು ಮರಗುತ್ತಾರೆ ಸನಾತನ ಧರ್ಮಾಮರುಡಿಯಾದ ಸಂ॥ ಮದನಮೋಹನ ಮಾಲವೀಯರವರು ಒಂದು ಪ್ರಕಟನೆಯನ್ನು ಹೊರಡಿಸಿ ಜನರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯವರಿಗೆ ಜರ್ಜಿರಿಯನ್ನು ಮುಗಿಸುವಾಗ ಜನರಿಗೆ ಅಹಿಂಸೆಯನ್ನು ಪಾಲಿಸಬೇಕೆಂದೂ ಹಿಂಸಾಚಾರಿಗಳಾಗಿ ಮಾತೃಭೂಮಿಗೆ ಕಲಂಕ ತರಬಾರದೆಂದೂ ಮಹಾತ್ಮರು ಸಾರಿ ಹೇಳಿದ್ದುಂಟು. ಹಿಂಸೆಯಿಂದ ಯಾವದೇ ಕಾರ್ಯಭಾಗ ಸಾಧಿಸುವದಿಲ್ಲ. ಬ್ರಿಟಿಶರಿಗೆ ಹೊರಕಳಿಸುವ ಉಪಕ್ರಮವನ್ನು ಅಹಿಂಸೆಯಿಂದಲೇ ಕೈಕೊಳ್ಳತಕ್ಕತ್ತದಂದು ಮಹಾತ್ಮರ ಅಂಬೋಣ. ಹಿಂಸೆಗೆ ಪ್ರತಿ-ಹಿಂಸೆ, ಅಸ್ತ್ರಕ್ಕೆ ಪ್ರತ್ಯಸ್ತ್ರ ಉಂಟೇ ಉಂಟು ಜನಸಾಮಾನ್ಯರು ವಿಚಾರಶೂನ್ಯರಾಗದೆ ಸಮಾಧಾನವನ್ನು ತಾಳಿ ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಧೈರ್ಯದಿಂದಲೂ ಸಹನಶೀಲತೆಯಿಂದಲೂ ಪ್ರಯತ್ನಿಸಿದ್ದರೆ ರಾಜ್ಯಕರ್ತರನ್ನು ದೂರಲು ಒಲ್ಲೇ ಆಸ್ಪದ ದೊರೆಯುತ್ತಿತ್ತು. ರಾಜ್ಯಕರ್ತರಾದರೂ ಅಹಿಂಸೆಯ ಸಂಗ್ರಾಮವನ್ನು ಪ್ರತಿಘಟಿಸಲು ದಿಕ್ಕು ಕಾಣದಾಗುತ್ತಿದ್ದರು. ಜನರು ಈ ವಿಚಾರ ಹಿಡಿಯದೆ ಒಮ್ಮಿಲೇ ಆಕಾಂತರಾಗಿ ದೊಂಬಿಯನ್ನೆಬ್ಬಿಸಿ ಬಹು ಕರಿಣ ಪರಿಸ್ಥಿತಿಯನ್ನುಂಟುಮಾಡಿದ್ದಾರೆ. ಲೋಕವಿಕಾಂಕ್ಷೆ ಪ್ರತಿಯಾಗಿ ರಾಜ್ಯಕರ್ತರು ವಿಕಾರವಶರಾಗಿ ಬೇರೆ ಬೇರೆ ರಾಜ್ಯಾಪನಗಳನ್ನು ಹೊರಡಿಸಿ ವಿಕಾರಗಳನ್ನು ಉತ್ಪ್ರೇಕಗೊಳಿಸಿದರು. ಶಿಕ್ಷೆ, ದಂಡ ಮೊದಲಾದ ಸಂಕಟಗಳನ್ನು ದೊಂಬಿಗಾರರು ಅನೇಕರ ಬರದಲ್ಲಿ ಲೆಕ್ಕಿಸದಿರುವದು ಮನುಷ್ಯಸ್ವಭಾವ. ಆದರಿಂದ ರಾಜಶಾಸನಗಳ ಹಗೆ ಹಿಡಿಯದೆ ಜನರು ಮತ್ತೆ ಸ್ವಲ್ಪ ಕ್ಷೋಬೆಗೊಂಡದ್ದು ಸಹಜ. ಸ್ವತಂತ್ರ ವಿಚಾರದ ವ್ಯವಹಾರಕ್ಕೆ ಸರಕಾರವು ಫರ್ಮಂಧಗಳನ್ನುಂಟು ಮಾಡಿದ್ದರಿಂದ ದೊಂಬಿಗಾರರಿಗೆ ಬುದ್ಧಿ ಹೇಳು ವವರು ವಿರಳರಾದರು ಈಗೇನೋ ದೇಶ-ಪರಿಸ್ಥಿತಿ ಶಾಂತವಾಗಿರುವವಾಗಿ ಕಲಕತ್ತೆಯ 'ಸ್ಟೇಟ್ಸಮನ್' ಪತ್ರಿಕೆಯ ವಿಲ್ಲಿಯ ಸುದ್ದಿಗಾರರು ತಿಳಿಸುತ್ತಾರೆ. ಸರ ಕಾರವೂ ತುಸು ಪ್ರಶಾಂತ ಚಿತ್ತದ್ದಾಗಿರವದೆಂದು ನಾವು ಎನಿಸುತ್ತೇವೆ. ಗೃಹ ಇಲಾಖೆಯ ಮುಖ್ಯಾ ಧಿಕಾರಿಗಳಾದ ಸರ್ ರೆಜಿನೊಲ್ಡ ಮೆಕ್ಸವೆಲ್ಲರವರು ಕಳೆದ ಗುರುವಾರ ಅಖಿಲ ಭಾರತೀಯ ಸತ್ಯಕರ್ತ ರೊಡನೆ ವಿಚಾರವಿನಿಮಯ ಮಾಡಿದರೆಂದೂ ನಿಬರ್ಂ ಧಗಳನ್ನು ಸಡಿಲುಗೊಳಿಸಲು ಒತ್ತಂಬಟ್ಟರುವರೆಂ ದೂ ತಿಳಿದು ನಾವು ಸಂತೋಷಪಟ್ಟಿದ್ದೇವೆ. ರಾಜ-ಪ್ರಜೆಗಳೊಳಗೆ ಸಮಾಧಾನ ನೆಲಿಬದನಕ್ಕೆ ಯಾವದೇ ವಿಧಾಯಕ ಕಾರ್ಯಕ್ರಸುದಿ ವಿಚಾರ ನಿರ್ಮಲ ಚಿತ್ತ ದಿಂದ ನಡೆಯಲೊಲ್ಲದು

ಜನರಿಗೆ ದಬ್ಬಿ ಶಾಂತತೆಯನ್ನು ನೆಲಿಸಿದ್ದರಿಂದ ಜನಾಂಗ ಸಮಾಧಾನ ಹೊಂದಿತೆಂದು ತಿಳಿಯಲಾಗದು ಶಾಂತಿಗಳಲ್ಲಿ ವಿಧ ಸ್ವಶಾನದಲ್ಲೂ ಶಾಂತಿಯುಂಟು, ಪ್ರಪಂಚದಲ್ಲೂ ಶಾಂತಿಯುಂಟು. ಸ್ವಶಾನ-ಶಾಂತಿ ಲೋಕಾಭ್ಯುದಯಕ್ಕೆ ಪೋಷಕವಲ್ಲ; ಸಾತಕವಾದುದು. ಪ್ರಪಂಚಿಕ ಶಾಂತಿ-ಸಮಾಧಾನ ಗಳನ್ನು ಸಮರ್ಥಸೂ ಕಿಂಚಿತ್ಪತಕ್ಕದ್ದು ಬಲಾತ್ಕಾರ ದಿಂದ ಸಾಧಿಸಿದ ಈಗಿನ ಶಾಂತಿ-ಕಾಲದಲ್ಲಿ ರಾಜ್ಯ ಕರ್ತರು ಕೈ ಮುದುಡಿಕೊಂದು ನಿಷ್ಕ್ರಿಯರಾಗಿ ಕೂತುಕೊಳ್ಳಲಾಗದು ' ಸ್ಟೇಟ್ಸಮನ್ ' ಪತ್ರಿಕೆಯ ವಿಲ್ಲಿಯ ಸುದ್ದಿಗಾರರು ಬರದಂತೆ ರಾಜ-ಪ್ರಜೆ ಗಳೊಳಗಿನ ವಿಶ್ವಾಸವನ್ನು ಜನಸಂತೋಷವಾಗುವಂ ತೆ ಬಗೆಹರಿಸಲು ಪ್ರಯತ್ನಿಸತಕ್ಕದ್ದು. ಜನಾಂಗದೊ ಳಗಿನ ವಿಚಾರವಂತರು ಸಮಾಧಾನದಿಂದಿದ್ದರೆ ಹುಂಬ ರಿಗೆ ಹುಂಬತನ ನಡಿಸಲು ಎಮ್ಮೋ ಪ್ರತಿಕೂಲ. ಆವಾಗ ರಾಜ್ಯಕರ್ತರ ದುರಾಗ್ರಹದಿಂದ ವಿಚಾರ ವಂತರು ಬೇಸತ್ತಿದ್ದಾರೆ. ಯುದ್ಧಯತ್ನ ಭರದಿಂದ ನಾಗಬೇಕೆಂಬಬಿಳಿಪಾರಿಎಲ್ಲಿಲ್ಲಿ ಜೇಳ್ಳಲ್ಲುತ್ತುದ್ದೇ. ಹೊರತು, ಆ ಯುದ್ಧಯತ್ನವನ್ನು ನವಿಸಿ ಜನಾಂಗ ದೊಳಗಿನ ವಿಚಾರವಂತರ ಸಹಕಾರದಿಂದ ಸಾಧಿಸ ಬೇಕೆಂಬ ಲವಲವಿಕೆ ರಾಜ್ಯಕರ್ತರಿಗಿಲ್ಲ. ಯುದ್ಧ ಯತ್ನಮಂಡಳ ಜೇಳಿರಿ, ರಾಷ್ಟ್ರೀಯ ರಣರಂಗ ಹೇಳಿರಿ, ಯಾವದೇ ನಾಮಾಭಿಧಾನವಿದ್ದಿಗ್ಯೂ ಎಲ್ಲ ಯುದ್ಧಯತ್ನ ರಾಜ್ಯಕರ್ತರ ಆಚಾರ-ವಿಚಾರ ಗಳಿಗೆ ಅಂಕಿತವಾಗಿ ರಾಷ್ಟ್ರೀಯ ಸಭೆಯ ವ್ಯವಹಾರ ಕ್ಕೆ ವಿರೋಧವಾಗಿ ನಡೆಯಬೇಕೆಂಬದೇ ಸರಕಾರದ ಉದ್ದೇಶ. ರಾಷ್ಟ್ರೀಯ ರಣರಂಗಕ್ಕೆ ಪಕ್ಷಾಭಿಮಾನ ವಿಲ್ಲ, ಅದಕ್ಕೆ ಸಕಲ ಪಕ್ಷ-ಪಂಗಡಗಳ ಸಹಕಾರ ಅವ ಶ್ಯ, ಹೀಗೊಂದು ರಾಷ್ಟ್ರೀಯ ರಣರಂಗದ ಪರವಾಗಿ ಪ್ರತಿಪಾದನೆಯುಂಟು ಕೊಂಗ್ರೆಸ ಕಾರ್ಯಕಾರಿ ಮಂಡಳದ ತೀರ್ಮಾನವನ್ನು ಸರಕಾರವು ಮನ್ನಿಸಿ ನಡಕೊಂಡರೆ ಶತ್ರು-ಜಪಾನಿಯರಿಗೆ ನಿಮಂತ್ರಣೆ ಕೊಟ್ಟಂತಾಗುವದೆಂದು ರಾಷ್ಟ್ರೀಯ ರಣರಂಗದ ಪರವಾಗಿ ಚಿಕ್ಕ-ದೊಡ್ಡ ಜಾಹೀರಾತುಗಳು ಪತ್ರಿಕೆ ಗಳಲ್ಲಿ ಪ್ರಕಟವಾದದ್ದನ್ನು ಅನೇಕರು ಓದಿ ವಿಸ್ಮಿತ ಮನ ಸ್ಕರಾದದ್ದುಂಟು; ರಾಷ್ಟ್ರೀಯ ರಣರಂಗದ ನಿಜ-ವೇಷ ಬಯಲಾಯಿತೆಂದು ಎಣಿಸಿ ಸಮಾಧಾನಪಟ್ಟವರೂ ಅನೇಕರಿದ್ದಾರೆ. ರಾಷ್ಟ್ರೀಯ ರಣರಂಗದವರಿಗಾ ದರೂ ರಾಷ್ಟ್ರೀಯ ಸಭೆಯ 'ಲೋಕಪ್ರತಿಷ್ಠೆ ವರ್ಚಸ್ಸುಗಳ ಗ್ರಹಿಕೆಯುಂಟು. ತಮ್ಮ ರಣರಂಗದ "ಪರವಾಗಿ ಹೊರಡುವ ಜಾಹೀರಾತುಗಳಲ್ಲಿ ಸಂ॥ ಜವಾಹರಲಾಲರ ಚಿತ್ರವನ್ನೂ ವಾಕ್ಯಗಳನ್ನೂ ಅವರು ಪ್ರಕಟಿಸುತ್ತಾರೆ. ರಾಷ್ಟ್ರೀಯ ಸಭೆಯವರು ಶತ್ರು-ಪಕ್ಷದವರೆಂದು ಹೇಳಲಿಕ್ಕೆ ಎಂದಿಗೂ ಯಾರಿಗೂ ಸಾಧ್ಯ ವಿಲ್ಲವೆಂದು ನಾವು ಮನೋನಿಶ್ಚಯದಿಂದ ಹೇಳ ಬಲ್ಲೆವು. "ಮೆಂಚೆಸ್ಟರ ಗಾರ್ಡಿಯನ್" ಕರ್ತರು ತಮ್ಮ ಬುಧವಾರದ ಸಂಚಿಕೆಯಲ್ಲಿ ಬರೆದಂತೆ, " ..... among our friends we should like to reckon many of those who have been interned"(ನಮ್ಮ ಮಿತ್ರ ಮಂಡಳಿಯಲ್ಲಿ ಸೆರೆಹಿಡಿಯಲ್ಪಟ್ಟ ಅನೇಕ ವ್ಯಕ್ತಿಗಳು ಸೇರ್ಪಡೆಯಾಗುತ್ತಾರೆ). ಇಂಥ ಸ್ನೇಹಿತರು ಶತ್ರು-ಪಕ್ಷಕ್ಕೆ ಸೇರಿದವರೆಂಬ ಆರೋಪಗಳನ್ನು ರಾಜ್ಯಕರ್ತರು ಹೊರಿಸಿ ರಾಜ್ಯಶುಧಾರಣೆಯನ್ನು ಕೈಕೊಳ್ಳದಿದ್ದರೆ ಪ್ರಶ್ನತ ಪ್ರಶಾಂತತೆಯಿಂದ ರಾಜ್ಯಕರ್ತರು ಪ್ರಯೋ ಜನ ಪಡೆಯಲಿಲ್ಲವೆಂದು ತ್ರಯಸ್ಟರು ಸಹ ಸರಕಾರ ನನ್ನು ದೂರುವೆರು ಲಂಡನಿನ "ನ್ಯೂಸ ಕ್ರೊನಿಕಲ್" ಪತ್ರಿಕೆಯು ಇದೇ ಪ್ರಶ್ನೆಯನ್ನೆತ್ತಿ ಬುಧವಾರ ಬರೆದ ತನ್ನ ಪ್ರಧಾನ ಲೇಖನದಲ್ಲಿ "Is it quite beyond our powers of our statesmanship to secure to Indians a Government of their own to which we can hand over the full conduct of their affairs?" (ಸ್ವತಂತ್ರವಾಗಿ ಜನಾಂಗದ ರಾಜ್ಯಭಾರವನ್ನು ಒಪ್ಪಿಸಿಕೊಂಡು ನಡಿಸುವಂದ ಸರಕಾರವನ್ನು ಹಿಂದೀಯರಿಗೆ ನಿರ್ಮಿಸಿಕೊಡುವೆಷ್ಟು ರಾಜಕಾರಣಧುರಂಧರರು ನಮ್ಮಲ್ಲಿರುವದಿಲ್ಲವೇ?) ಎಂಬದಾಗಿ ಉದ್ಗರಿಸುತ್ತದೆ. ಸರಕಾರವು ಅವಿಚಾರಕ್ಕೇಡಾದರೆ ಆಳವಾದ ದರಿಯಲ್ಲಿ ಒಮ್ಮಿಲೇ ಕಡಕೊಂಡು ಬೀಳುವ ಪ್ರಸಂಗ ಉಂಟೆಂದು "ಗಾರ್ಡಿಯನ್" ಪತ್ರಕರ್ತರು ಸಾಮ್ರಾಜ್ಯ ಸರಕಾರಕ್ಕೆ ಬುದ್ಧಿ ಹೇಳುತ್ತಾರೆ. ಕಾಲಹರಣವಾದರೆಮುಂದೆ ಪರಿಸ್ಥಿತಿ ಮತ್ತೂ ಉಗ್ರವಾಗಿ ಅನರ್ಥವಾಗುವ ಭೀತಿಯುಂಟೆಂದೂ 'ಗಾರ್ಡಿಯನ್' ಪತ್ರಕರ್ತರಿ ಹೂಬರಿಗೆ ಹಿಂದಿಲ್ಲ, ಮುಂದಿಲ್ಲ. ವಿಚಾರವಂತರು ನಿಃಶಕ್ತರಾದಾಗ ಹುಂಬರಿಗೆ ಅವೇಶ ತುಂಬುವದು ಲೋಕಾನುಭವದ ಸಂಗತಿ. ಜನಾಂಗ ದೊಳಗಿನ ವಿಚಾರವಂತ ಪ್ರಮುಖರನ್ನು ಸರ್ ರೆಜಿನೊಲ್ಡ ಮೆಕ್ಸವೆಲ್ಲ ಪ್ರಭೃತಿ ಹಿಂದುಸ್ಥಾನ ಸರಕಾರದ ಪ್ರಮುಖರು ಕರೆಸಿಕೊಂಡು ಕೂಡಲೆ ಆರೋಚಿಸ ಬೇಕಾಗಿ ನೆಮ್ಮ ಅಂಬೋಣವಿದೆ. ರಾಷ್ಟ್ರೀಯ ಸಭೆ ಯವರನ್ನು ನಿರ್ಬಂಧದಲ್ಲಿಟ್ಟು ಯುದ್ಧಯತ್ನವನ್ನು ಗಲಿ ರಾಜ್ಯಭಾರವನ್ನಾಗಲಿ ಸುಸೂತ್ರದಿಂದ ನಡಿಸು ದದು ಅಸಾಧ್ಯವಾದ ಮಾತು. ಆಮೇಕೆಯ ಅಧ್ಯಕ್ಷತ್ವ ರಾವ ರಾಯಿಸೆಲ್ಬರವರಿಗೆ ಹಿಂದುಸ್ಥಾನದ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಅಭಿಲಾಷೆಯುಂಟಾದ ದ್ದು ಸಂತೋಷದ ಸಂಗತಿ. ಅವೀಂರಿಕೆಯೊಳಗಿ ಬ್ರಿಟಿಶ ರಾಯಭಾರಿಗಳಾಗಿದ್ದ ಹೆಲಿಫೆಕ್ಸ (ನಮ್ಮ ಇರ್ವಿನ್ಸ್)

ದೊರೆಗಳು ಸದ್ಯಕ್ಕೇ ಇಂಗ್ಲಂಡಕ್ಕೆ ಬಂದು ಸಾಮ್ರಾಜ್ಯ ಸರಕಾರದೊಡನೆ ಆಲೋಚನೆ ಮಾಡಿ ಅಮೇರಿಕೆಗೆ ಮರಳಿದ್ದಾರೆ. ಕಳೆದ ಮಂಗಳವಾರ ಹೆಲಿಫೆಕ್ಸ ದೊರೆಗಳಿಗೂ ರೂಝುವೆಲ್ಟರಿಗೂ ಪೊಕಿಂಗ್ಹನಿನಿತ 'ಶ್ವೇತಭವನ' ದಲ್ಲಿ ವಿಜಾರವಿನಿಮಯವಾಯಿತು. ದೀರ್ಘ ಕಾಲದ ತನಕ ಉಭಯತರೂ ವಿಶಾಲ ಭೂಮಂಡಲದ ಪರಿಸ್ಥಿತಿಯನ್ನು ಚರ್ಚಿಸಿದರೆಂದು ಹೆಲಿಫೆಕ್ಸ ದೊರೆಗಳು ಪತ್ರಿಕೆಗಳಿಗೆ ತಿಳಿಸುತ್ತಾರೆ ದೀರ್ಘ ಕಾಲದ ತನಕ ಈ ಸಂಭಾಷಣ ನಡೆದಾಗ್ಯೂ ಹಿಂದೀ ಸಮಸ್ಯೆಯ ಕುರಿತು ಸಮಯಾಭಾವದ ಮೂಲಕ ವಿಜಾರ ನಡೆಯಲಿಲ್ಲೆಂದು ಹೆಲಿಫೆಕ್ಸ ದೊರೆಗಳು ನುಡಿಯುತ್ತಾರೆ. ಈ ಕುರಿತು ಸದ್ಯಕ್ಕೆ ಪುನ: ರೂಝುವೆಲ್ಟರೊಡನೆ ಮಾತುಕತೆ ನಡಿಸುವೆವಾಗಿ ಹೆಲಿಫೆಕ್ಸ ದೊರೆಗಳು ಹೇಳುತ್ತಾರೆ. ಅಮೇರಿಕೆಯ ರೂಝುವೆಲ್ಟರು ಹಿಂದೀ ಸಮಸ್ಯೆಯನ್ನು ಬಗೆಹರಿಸಿ ಯುದ್ಧಯತ್ನ ಸಾಧಿಸಲು ಅಸಕ್ತಿ ತೋರಿಸುವ ಸಂಗತಿ ಹಿಂದೀ ರಾಜಕಾರಣದೊಳಗಿನ ಒಂದು ಆಶಾತಂತು ವೆಂದು ಎಣಿಸಿ ನಾವು ಸಂತೋಷಪಡುತ್ತೇವೆ. ಆದರೆ ದೇಶದೊಳಗೆ ಶಾಂತತೆ ನೆಲಿಸಿದನಕ ಯಾವದೇ ವಿಜಾರಪ್ರವಾಹ ಸುಸೂತ್ರ ಹರಿಯಲನುಕೂಲವಿಲ್ಲ ಅದರಿಂದಲೇ ನಾವು ಇಂದಿಗೆ ತಾತ್ಕಾಲಿಕ ಸಲಹೆಯನ್ನು ರಾಜ-ಪ್ರಜೆಗಳಿಗೆ ಕೊಡಬಯಸುತ್ತೇವೆ.

ಇರಾಕದ ಪ್ರತಿಭಟನೆ!

[ನಿರೀಕ್ಷಕನು ಬರೆದುದು.]

ಇರಾಕದಂಥ ಬ್ರಿಟಿಶರ ಮಾಂಡಲೀಕ ಪ್ರದೇಶ ಜರ್ಮನ ಸರಕಾರಕ್ಕೆ ಸ್ವದೇಶದ ಮೇಲೆ ದಂಡೆತ್ತಿ ಕೊಂಡು ಬರಬಾರದೆಂದು ಹೆಸರಡಿಸಿದ ಮುಂಜಾಗ್ರತೆಯ ಮಾತೇ ಕೇಳಿ ನನಗೊಳ್ಳೇ ಗಾಬರಿಯುಂಟಾಗಿದೆ! ಇರಾಣ ಮತ್ತು ಅರಬಸ್ತಾನ ಇವೆರಡು ದೇಶಗಳ ನಡುವೆ ಇರಾಕ ಪ್ರದೇಶವಿದ್ದು ಸೀರಿಯಾದಿಂದ ಇರಾಣದ ಅಖಾತದ ತನಕ ಇರಾಕ ದೇಶ ವ್ಯಾಪಿಸಿಕೊಂಡಿದೆ. ಇರಾಣ ಅಫಾತದ ಮಾರ್ಗವಾಗಿ ರುಶ್ಯ ರಣಭೂಮಿಗೆ ರಣಸಾಹಿತ್ಯಗಳನ್ನೊಯ್ಯುವ ಮಹಾದ್ವಾರವಿದು. ಕೊಕೆಸಸ ಸ್ವಾಂತವನ್ನು ದಾಟಿ ಇರಾಕದ ಗಡಿಯಲ್ಲಿ ಕಾಲಿಟ್ಟರೆ ಕೆಲಸ ಕೆಟ್ಟು ಹೋಗುವದಾಗಿ ಇರಾಕದ ಮುಖ್ಯ ಪ್ರಧಾನರಾದ ಸೇನಾಪತಿ ನೂರಿ ಸಯ್ಯದರವರು ಹಿಟ್ಲರನಿಗೆ ಗದ್ದರಿಸಿದ್ದಾರೆ. ಇರಾಕದ ಸೀಮೆಯಲ್ಲಿ ಕಾಲಿಟ್ಟರೆ ತಾವು ಬ್ರಿಟಿಶ ಪಕ್ಷಪಾತಿಯಾಗಿ ರಣಕುಂಡದಲ್ಲಿ ಹಾಂಕೊಳ್ಳುವದು ಖಂಡಿತವೆಂದು ಸೇನಾಪತಿ ಸಯ್ಯದರವರು ನಿಗ್ರಹಿಸಿದ ಜರ್ಮನ ಸರಕಾರಕ್ಕೆ ತಿಳಿಸಿದ್ದಾರೆ! ಇಷ್ಟಕ್ಕೇ ತಡೆಯದೆ, ಇರಾಣ ಸರಕಾರದೊಡನೆ ಸಹಕಾರ ಮಾಡಿ ಇರಾಣ, ಇರಾಕ ದೇಶಗಳಿದೊಂದು ಸಂಯುಕ್ತ ಸೈನ್ಯ ಪಥಕವನ್ನು ತಯಾರಿಸಿದ್ದಾರೆ. ಈ ಸುದ್ದಿಯ ಮೇಲಿಂದ ಜರ್ಮನರು ಕೊಕೆಸಸವನ್ನು ದಾಟಿ ಸದ್ಯಕ್ಕೇ ಬರುವದೆಂದೂ ರುಶ್ಯ ರಣಭೂಮಿಯ ರಣಕಂದನೆ ಮುಗಿಯುತೆಂದೂ ನಾನು ಎಣಿಸುತ್ತೇನೆ. ರುಶ್ಯ ರಣಭೂಮಿಯ ಪರಾಭವಗಳಿಂದ ಬ್ರಿಟನ-ಅಮೇರಿಕೆಯವರು ಪರಾಜಯಪಟ್ಟುಂಗುವದಿಲ್ಲವೆಂದು ಡಿಕೊರ್ಸಿಯವರು ಹೇಳಿದ ಮಾತಿಗೂ ಸೇನಾಪತಿ ಸಯ್ಯದರವರ ಗರ್ಜನೆಗೂ ಮೇಳಗೂಡಿಸಿದರೆ ರುಶ್ಯ ರಣಭೂಮಿಯೋಗಿ ಜರ್ಮನರು ಗೆದ್ದರೆಂಬ ಅನುಮಾನ ತಂತಾನೇ ಹೊರಡುತ್ತದೆ. ಜರ್ಮನರು ಗೆಲ್ಲಿದಿದ್ದರೆ, ಮುಸಲ್ಮಾನ-ಲೋಕಕ್ಕೆ ಅಕ್ರಮಣ ಭೀತಿ ಇಲ್ಲದಿದ್ದರೆ ಸೇನಾಪತಿ ಸಯ್ಯದರವರು ಹಿಟ್ಲರಿಗೆ ಗೊಡವೆಗೆ ಹೋಗುತ್ತಿರಲಿಲ್ಲ. ರುಶ್ಯರನ್ನು ಸೋಲಿಸಿ ಉನ್ಮತ್ತನಾದ ಹಿಟ್ಲರನಿಗೆ ಇರಾಕ-ಇರಾಣಗಳಲ್ಲಿ ಎಷ್ಟರ ಮಟ್ಟಿಗೆ ಸ್ವಕಬಂಧವಾಗುವದೆಂದು ನಾವರಿಯೆ, ನನ ಗೇನೂ ಧೈರ್ಯ ತೋರದು. ಬ್ರಿಟಿಶರೂ ಅಮೇರಿಕೆಯವರೂ ಸೈನ್ಯಪಥಕಗಳನ್ನೂ ಮದ್ದುಗುಂಡು-ರಸ್ತ್ರಾಸ್ತ್ರಗಳನ್ನೂ ಇರಾಕದೊಳಗೆ ಒಯ್ದು ಪೂರೈಸಿದ್ದಿದ್ದರೆ ಸೇನಾಪತಿ ಸಯ್ಯದರವರು ಪಂಥವ ಹೊಂದುವ ಭೀತಿಯುಂಟು. ಇರಾಕ, ಇರಾಣ ದೇಶ ಹಿಟ್ಲರನ ವಶವಾದರೆ, ಇರಾಣ ಅಖಾತದ ತನಕ ಹಿಟ್ಲರನ ಪ್ರಭುತ್ವ ನೆಲಿಸಿದರೆ ಮುಂದೆ ನೇರವಾಗಿ ನಮ್ಮ ಹಿಂದುಸ್ತಾನದ ಮೇಲೆ ದಾಳಿ ಮಾಡಲು ನುಕೂಲವಾಗುತ್ತದೆ. ಇರಾಣ, ಇರಾಕ ದೇಶಗಳು ತುರ್ಕಸ್ತಾನದ ಹಿಂಬದಿಯಲ್ಲಿರುವದರಿಂದ ತುರ್ಕಸ್ತಾನವು ಸ್ವಧಕ್ಕಾಗಿ ಆ ದೇಶದ ಸಮಾಚಾರ ಕೊಳ್ಳಲು ಹಿಟ್ಲರನಿಗೆ ಅನುಕೂಲವಾಗುತ್ತದೆ. ಇರಾಕ ದಿಂದ ಹಿಟ್ಲರನು ಪಶ್ಚಿಮಕ್ಕೆ ಸೀರಿಯಾ, ಪಾಲಿಸ್ತಾನ ಗಳಿಂದ ಮಾರ್ಗಕ್ರಮಣ ಮಾಡಿ ಭೂಮಧ್ಯ ಸಮುದ್ರಕ್ಕೆ ಮುಟ್ಟಲಿಕ್ಕೂ ಅಲ್ಲಿಂದ ಪಶ್ಚಿಮಕ್ಕೆ ಸಂಯೋಜ ಕಾಲುವೆಯ ಮೇಲೆ ಸಾಗಿ ಹೋಗಿ ಇಜಿಪ್ತ ದೇಶದ ಸಂಬಂಧವನ್ನು ಕತ್ತರಿಸಲಿಕ್ಕೂ ಅನುಕೂಲವಾಗುತ್ತದೆ. ಇರಾಕ, ಸೀರಿಯಾ, ಪಾಲಿಸ್ತಾನ ದೇಶಗಳು ಕಳೆದ ಮಹಾಯುದ್ಧದಿಂದ ಬ್ರಿಟಿಶರ ಅಂಕಿತವಾಗಿವೆ. ತತ್ಪೂರ್ವದಲ್ಲಿ ಆ ಪ್ರದೇಶಗಳು ತುರ್ಕಸ್ತಾನಕ್ಕೆ ಸೇರಿದ್ದವು. ಭೂಮಧ್ಯ ಸಮುದ್ರ, ಕೆಂಪು ಸಮುದ್ರ, ಅರಬೀ ಸಮುದ್ರ ಈ ಮೂರು ಸಮುದ್ರಗಳೊಡನೆ ನೌಕಾರ ಮಾಡಲು ಅನುಕೂಲವಿದ್ದದರಿಂದ ಕಳೆದ ಮಹಾಯುದ್ಧದಲ್ಲಿ ಒಡಂಬಡಿಕೆಯಾಗುವಾಗ ಈ ಪ್ರದೇಶವನ್ನು ಬ್ರಿಟಿಶ-ಫ್ರೆಂಚರು ತಮ್ಮೊಳಗೆ ಹಂಚಿಕೊಂಡಿದ್ದರು. ಮುಸಲ್ಮಾನ-ಲೋಕದಲ್ಲಿ ತಮ್ಮ ಪ್ರಭುತ್ವವಿರಬೇಕೆಂಬ ದೀರ್ಘಾಲೋಚನೆಯಿಂದ ಆ ಲೋಕಕ್ಕೆ ಮರ್ಮಸ್ಥಾನದೋಪಾದಿಯಲ್ಲಿರುವ ಈ ಪ್ರದೇಶವನ್ನು ಮಿತ್ರರು ಪಡೆದಿದ್ದರು. ಇದರಿಂದ ತುರ್ಕಸ್ತಾನ, ಇರಾಣ, ಅರಬಸ್ತಾನ ಜನಾಂಗಗಳ ವಿಕಾಸಕ್ಕೆ ವಿಘ್ನವಾಯಿತು. ಹಿಟ್ಲರನು ಈ ಪ್ರದೇಶವನ್ನು ಈಗ ಆಕ್ರಮಿಸಿಕೊಂಡರೆ ಮುಸಲ್ಮಾನ-ಲೋಕಕ್ಕೆ ಆತನನ್ನು ಪ್ರತಿಭಟಿಸಲು ಶಸ್ತನೇ ಸ್ಫೆ! ಸೇನಾಪತಿ ಸಯ್ಯದರವರು ಬ್ರಿಟನ-ಅಮೇರಿಕೆಯವರ ಧೈರ್ಯ ದಿಂದಲೇ ಜರ್ಮನ ಸರಕಾರಕ್ಕೆ "ಮುಂದೆ ಕಾಲಿಟ್ಟರೆ ನೋಡಿ!" ಎಂದು ಗದ್ದರಿಸಿದ್ದಾರೆಂದು ನನ್ನ ಅಭಿಪ್ರಾಯ ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರು ರುಶ್ಯ ರಾಜಧಾನಿಯಾದ ಮೊಸ್ಕೊಕ್ಕೆ ಹೋಗುವಾಗ ಇಜಿಪ್ತ, ಇರಾಣಗಳನ್ನು ಸುತ್ತಿ ಮೊಸ್ಕೊಕ್ಕೆ ಹೋಗುವ ಕಾರಣವಾದರೂ ಇದೇ ಎಂದು ನನ್ನ ಅನುಮಾನ. ರುಶ್ಯರ ಬಾರಿ ಮುಗಿದೊಡನೆ ಮುಸಲ್ಮಾನ-ಲೋಕದ್ದೇ ಬಾರಿ ಬರುತ್ತದೆ. ಅದನ್ನು ಪರಿಹರಿಸಯೋಜಿಸಲೆಸುಗ ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರು ಮೊಸ್ಕೊ ತನಕ ಲಗಬಗೆಯಿಂದ ಹೋಗಿದ್ದರೆಂದು ನಾನಂತು ಹೇಳಲ್ಲೆ. ರುಶ್ಯ ಪ್ರಭು ಸ್ಟೆಲಿನನು ಈವಾಗ ನಿರಾಶನಾಗುವದು ಸಹಜ. ಆತನಿಗೆ ಧೈರ್ಯ ಕೊಟ್ಟು ಸಂಗ್ರಾಮವನ್ನು ನಡಿಸಹಚ್ಚಿ ಮುಸಲ್ಮಾನ-ಲೋಕದ ನೇರಿನ ಆಸಕ್ತನ್ನು ಪರಿಹರಿಸಲು ಚರ್ಚಿಲ್ಲರು ಮೊಸ್ಕೊ ಯಾತ್ರೆಯನ್ನು ಕೈಕೊಂಡಿದ್ದರೆಂದು ಅನುಮಾನ ಸಹಜವಾಗಿ ಹುಟ್ಟುತ್ತದೆ. ಏನೇ ರಣಭೂಮಿಯನ್ನು ನಿರ್ಮಿಸಿ ಜರ್ಮನ್ನ ಸೈನ್ಯಗಾರರನ್ನು ರುಶ್ಯ ರಣಭೂಮಿಯಿಂದ ಸ್ಥಳಾಂತರಿಸಹಚ್ಚಲು ಯುದ್ಧಕಾರಣಗಳು ಈವಾಗ ಧ್ಯಾನಿಸುತ್ತಿದ್ದಾರೆ. ಎರಡು ರಣಭೂಮಿಗಳ್ಳಿ ಕಾದಾಡಲು ಹಚ್ಚಿದನಕ ಜರ್ಮನರ ದಾಳಿಗಳಿಗೆ ಕೇಲು ಬೇಳದು. ಎರಡನೇ ರಣಭೂಮಿಯನ್ನು ಯಾವಲ್ಲಿ ಹೊಡಬೇಕೆಂದು ಇನ್ನೂ ನಿರ್ಣಯವಾಗಲಿಕ್ಕಿದೆ. ಬಹುತರವಾಗಿ ಫ್ರಾನ್ಸ ದೇಶದಲ್ಲಿ ಎಂಡನೇ ರಣಭೂಮಿಯನ್ನು ನಿರ್ಮಿಸಬೇಕೆಂಬದೊಂದು ವಿಚಾರಕ್ಕೆ ಯುದ್ಧಕಾರಿಡೆಗಳ ಪುರಸ್ಕಾರವುಂಟು. ಆದರೆ ಅದನ್ನು ಹೇಗೆ ನಿರ್ಮಿಸಬೇಕೆಂದೇ ತಿಳಿಯದಾಗಿದೆ. ಬ್ರಿಟಿಶ ವಿಮಾನಗಳು ಈ ಪಾರ್ಶ್ವದಲ್ಲಿ ಹಾರಿಹೋಗಿ ಬಾಂಬುಗಳನ್ನೊಗೆದು ಅಪಾರ ನಾಶ ಮಾಡುತ್ತಿವೆ. ಸಾರ ಬ್ರುಕನ್ನ ನ್ಯೂರೆಂಬರ್ಗಗಳ ಮೇಲೆ ಶನಿವಾರ ಬ್ರಿಟಿಶ ವಿಮಾನಗಳು ಹಾರಿ ಪ್ರಮುಖ ಉದ್ಯೋಗಸ್ಥಳಗಳನ್ನು ನಾಶಮಾಡಿಸಿದವಾಗಿ ವಾರ್ತೆಗಳನ್ನೊಡ್ಡಿಕೆಲ ಮಟ್ಟಿಗೆ ಹುರುಪು ಬರುತ್ತದೆ. ಹಿಟ್ಲರನಿಗೆ ಕಾಲ ತುಂಬಿ ಬಂತೆಂದು ಭಾವನೆಯಾಗುತ್ತದೆ. ಆದರೆ ಈ ರಣಭೂಮಿಯಲ್ಲಿ ಪ್ರತಿಭಟನೆ ಮಾಡುವ ಯುದ್ಧ-ತಂತ್ರವನ್ನು ಹಿಟ್ಲರನು ಕಲ್ಪಿಸಿಕೊಂಡಿದ್ದಾನೆಂಬಂತೆ ಭಾಸವಾಗುತ್ತದೆ. ಸ್ಟೇನದ ಸೇನಾಪತಿ ಫ್ರೆಂಕೋನು ಅಲಿಪ್ತತೆಯನ್ನು ಅಲ್ಲಗಳೆದು ಹಿಟ್ಲರ-ಪಕ್ಷಪಾತಿಯಾಗಿ ಏಪ್ರೇಲ ಫ್ರೆಂಚ ಸರಕಾರಿಮೊಡನೆ ಸಹಕರಿಸಿ ದ್ವಿತೀಯ ರಣಭೂಮಿಯ ಮೇಲೆ ಹೋರಾಡುವ ಲಕ್ಷಣಗಳುಂಟಾಗಿವೆ. ಸ್ಟೇನದ ಪಶ್ಚಿಮ ಪಾರ್ಶ್ವದಲ್ಲಿ ಪೋರ್ತುಗಾಲ ದೇಶವಿದ್ದು ಪೋರ್ತುಗೀಸ ಸರಕಾರವು ಬ್ರಿಟಿಶರ ಬದಿಗಿದೆ. ಈ ಬಗ್ಗೆ ಸಂದೇಹ ವಿಲ್ಲ. ದಕ್ಷಿಣ ಅಮೇರಿಕೆಯೊಳಗಿನ ಬ್ರಾಝಿಲ ದೇಶ ಜರ್ಮನಿಯ ಮೇಲೆ ಯುದ್ಧ ಸಾರಿದೆ. ಜರ್ಮನಿ ಬ್ರಾಝಿಲಗಳೊಳಗಿರುವ ಅಂತರಗಳ ವಿಜಾರ ಮಾಡಿದರೆ ಈ ಯುದ್ಧಘೋಷಣೆಯಿಂದ ಯುದ್ಧ ವ್ಯವಹಾರದಲ್ಲಿ ಲಾಭ-ನಷ್ಟ ಕಡಿಮೆ. ಬ್ರಾಝಿಲ ದೇಶ ಮುಂಜೆ ಪೋರ್ತುಗಾಲದ್ದಿತ್ತು. ಇತ್ತಲಾಗಿ ಆದು ಸ್ವತಂತ್ರವಾಗಿದೆ. ಆದಾಗ್ಯೂ ಪೋರ್ತುಗಾಲ-ಬ್ರಾಝಿಲಗಳೊಳಗೆ ಸಂಕೇತ-ಮರ್ಮಕಮಮತೆಗಳುಂಟು. ಬ್ರಾಝಿಲ ಸರಕಾರವು ಯುದ್ಧಘೋಷಣೆ ಮಾಡಿದೊಡನೆ ಪೋರ್ತುಗೀಸ ಸರಕಾರವು ಬ್ರಾಝಿಲ ಸರಕಾರಕ್ಕೆ ನೈತಿಕ ಬೆಂಬಲ ಕೊಟ್ಟು ಘೋಷಣೆ ಹೊರಡಿಸಿತು. ಇದರ ಮೇಲಿಂದ ಪೋರ್ತುಗೀಸ ಸರಕಾರದ ಅಂತಃಕರಣ ಬ್ರಿಟಿಶರ ಬದಿಗಿರುತ್ತದೆಂದು ನಿಶ್ಚಯವಾಗುತ್ತದೆ. ಪೋರ್ತುಗೀಸ ಸರಕಾರವು ಆಚಾರದಲ್ಲಿ ಅಲಿಪ್ತವಾಗಿದ್ದಾಗ್ಯೂ ಅಂತಃಕರಣದಲ್ಲಿ ಬ್ರಿಟಿಶರೊಡನೆ ಕೂಡಿಹೋಗಿರುತ್ತದೆಂಬ ಮಾತು ಸ್ಪಷ್ಟ. ಸೇನಾಪತಿ ಫ್ರೆಂಕೋನು ಹಿಟ್ಲರ-ಪಕ್ಷಪಾತಿಯೆಂದು ದುಡುಕಿದರೆ ಆತನನ್ನು ಪ್ರತಿಭಟಿಸಲು ಪೋರ್ತುಗೀಜರ ಕಡೆ ತಕ್ಕಮಟ್ಟಿನ ಶಕ್ತಿ-ಸಾಮರ್ಥ್ಯಗಳಿಲ್ಲ; ಪೋರ್ತುಗೀಜರಿಗೆ ಅಲಿಪ್ತ ಉಳಿಯಲು ಸಾಧ್ಯವಿಲ್ಲ ಹಿಟ್ಲರ-ಪಕ್ಷಪಾತಿಯಾಗಿ ನೇರುವದು ಸುರಪ್ತಿತವಾದದ್ದು ನಿಜ; ಆದರೆ ಅವರಿಗೆ ಮನಸ್ಸು ಒಡಂಬಡುವದಿಲ್ಲ. ಅದರಿಂದ ಮುಂದೆ ಹೇಗೆ ವರ್ತಿಸಬೇಕೆಂಬ ಕುರಿತು ಅಲೋಚಿಸಲು ಪೋರ್ತುಗಾಲಿನೊಳಗೆ ಬ್ರಿಟಿಶ ರಾಯಭಾರಿ

(೨ನೇ ಪುಟದ ಮೇಲೆ ಮುಂದುಸಿದೆ.)

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಮತ್ತೆ ಹಿಂದಿನ ವಕ್ರಸ್ವರೂಪ ಪರಂಪರೆಯನ್ನೇ ಮುಂದರಿಸಿ ದಿನಾಲೂ ಮಳೆ ಸುರಿಸುತ್ತಿರುವದು ಮತ್ತೆರಡು ದಿನ ೧೦ ಮೈ ೧೦ ಇಂಚು ಸೇರಿದರೆ ಸಾಕಾಗಿರಲಿಲ್ಲವು ಮಳೆ ಎಲ್ಲಿ ಅರಂಭವಾದ ದಿನ್ನೆ ಮಳೆ ೧೫೦ ಇಂಚುಗಳಿಗೆ ಸರಿಸಾರ ಬಂದಿರಬಹುದು ಊರಲ್ಲಿ ಆಮಾಂಜ ನೆಗಡಿ, ಜ್ವರ ಮುಂತಾದ ಬಿಕ್ಕೆ ಪುಟ್ಟಿ ಬೇನೆ ಬೇಸರಿಕೆಗಳುಂಟು

ಮಂಗಳೂರು, ಕ್ವಿಲೋನ್ಸ್, ಕೊಚ್ಚಿ, ಪೊನ್ನಾನಿ ಕಡೆ ಇಷ್ಟಿಯು ಸರ್ವಕೊಚ್ಚಿಯು ತಯಾರಾಗಿ ೩ ೪ ದಿನಗಳ ಹಿಂದೆ ಮುಂಬಯಿ ಬಂದಿರುತ್ತಾರೆ ಆ ಸ್ಪರೇಪಪಡ್ಡ ತೆಂಗಿನ ಎಣ್ಣೆಗೆ ನಿರ್ಬಂಧವಿಲ್ಲ ಕೊಚ್ಚಿಯಲ್ಲಿ ಎಣ್ಣೆಯು ದರ ಖಂಡಿಗೆ ೮೫ ರೂ ಇದ್ದಂರೆ ತನಕ ಇಳಿದಿದ್ದು ನಿನ್ನೆ ಇನ್ನೂ ಅದು ಇಳಿಯಬಹುದು ತೆಂಗಿನಕಾಯಿ ಬಿಡಿಸಿ ಕಿಲ್ಲುಂಟು ಪೊನ್ನಾನಿಯಲ್ಲಿ ತೆಂಗಿನ ಆಯು ಅತ್ತಿತ್ತ ವಿಪುಲ ನರ್ಸಾನಸ ೯-೮ ಕಾಳಿಗೆ ತೆಂಗಿನಕಾಯಿಗಳ ಬುನ್ನನ್ನಲ್ಲಿ ಕೈರು ಅಕ್ಷರಜ್ಞರಿಲ್ಲ ಆ ತೆಂಗಿನಕಾಯಿ ಇಲ್ಲಿ ತಂದು ಸುಲಿದು ೧೦೦ಕ್ಕೆ ೨೦೦೪ ಮಾರಾಟ ಮಾಡಬಹುದು ಮಂಗಳೂರಿನಲ್ಲಿ ಸ್ಕೌರಿಯ ದರ ಇನ್ನೂ ಸ್ಥಿರವಿಲ್ಲ ಸ್ಕೌರಿಯ ಮಾಲ್ಕಿದ ಸಕ್ಕರೆ ಕಾರಖಾನೆಯವರು ಮಂಗಳೂರಿಗೆ ೬ ಮಾಣಿ ಬೆಲ್ಲ ಇಳಿಸಿದ್ದಾರೆ ಆ ಬೆಲ್ಲವು ಇನ್ನೂ ಬಂದಿಲ್ಲವಂತೆ ದರ ೧೦೦ಕ್ಕೆ ೧೪೦ ಬೀಟು ವರ್ತಕರು ದರ ಇಳಿದ ಪಾರ್ಸೆ ಹಬ್ಬಿದರ ತೊಂದರೆಯಾಗಬಹುದೆಂದು ಹೆಚ್ಚಿನ ದರದ ತಂತಿ ಪಾರ್ಸೆಗಳನ್ನು ತರುತ್ತಿರಬೇಕು

ನಾಳೆ ತಾ ೧೯-೮-೪೬ರಂದಿನಿಂದ ಈ ಜಿಲ್ಲೆಯೊಳಗಿನ ಯಾವದೇ ಸ್ಥಳದಿಂದ ಜಿಲ್ಲೆಯ ಹೊರಗಿನ ಯಾವದೇ ಸ್ಥಳಕ್ಕೆ ನೆಲಮಾರ್ಗವಾಗಿ ಅಕ್ಕಿಯ ಜಲಮಾರ್ಗವಾಗಿ, ಪಸ್ಟ್ ಬೆಲುಬು ಎಣ್ಣೆಹುಣ್ಣು, ಜಿಲ್ಲಾಧಿಕಾರಿಗಳ ಪರವಾನಿಗೆಪತ್ರ, ರದ್ದು ಮಾಡಿಕೊಡುವಂತಿಲ್ಲ ಜಿಲ್ಲಾಧಿಕಾರಿಯು ಕಟ್ಟಲ್ಪಡಿಸಿಕೊಂಡಿರುತ್ತಾರೆ ಈ ಆಜ್ಞೆಯನ್ನು ಉಲ್ಲಂಘಿಸುವವರು ೬ ವರ್ಷಗಳ ಪರ್ಯಂತ ದಂಡಕ್ಕೂ ಪಾತ್ರರಾಗುತ್ತಾರೆ

ಸ್ಥಾನಿಕ ಸರಕಾರವು ತಮ್ಮನ್ನು ಇಷ್ಟಿಯ ಮ್ಯಾ ಅಧ್ಯಕ್ಷರನ್ನಾಗಿಸಿದಂದ ತೆಗೆದು ಹಾಕಿ ಕುರಿತು ಸರಕಾರದ ಮೇಲೆ ೧೦ ಸದಸ್ಯರಿಂದ ಗೋಲಿಬಿದ ಬಿನಲ್ಲಿ ೧೪ ಇವರು ಹಾಜರಾಗದೇ ಇದ್ದ ಕಾರಣ ಸಭಾಜ್ಞ ತೋಟಗಿನಲ್ಲಿ ೧೯೪೦ನೇ ಇಸವಿಯ ಫೆಬ್ರವರಿ ತಿಂಗಳಿನಲ್ಲಿ ಮಾಲಿಕರಿಸಿದ ದಾವೆಯನ್ನು ಕಳೆದ ತಾ. ೨೦ರಿಗೆ ಸಭಾಜ್ಞರು ತಿರಸ್ಕರಿಸಿದ್ದಾರೆ ಮುನಿಸಿಪಲ ಆಕ್ಟಿನ ೫೬ (೩) ಕಲಮಿನನ್ವಯ ಯಾ ಸಭಾಸದರು ಸಭೆ ಕರೆಯಬೇಕಾಗಿ ಕಳುಹಿಸಿ ಆರ್ಜಿಯಾಂತೆ ಅಧ್ಯಕ್ಷರು ಸಭೆ ಕರೆಯಬೇಕಾಗಿತ್ತೆಂದೂ ಆ ಪ್ರಕಾರ ಸಭೆ ಕರೆಯಾ ದಿದ್ದರು ಕರ್ತವ್ಯಚ್ಯುತಿಯಾಗುತ್ತದೆಂದೂ ಸಭಾಜ್ಞರು ತೀರ್ಪಿತ್ತು ಕೊಟ್ಟಿದ್ದಾರೆ

ವೆಂಗುರ್ಲೆಯ ವರ್ತಕರೊಬ್ಬರು ಇತ್ತ ಕಡೆ ಅಕ್ಕಿ ಬರೆದಿ ಮಾಡುತ್ತಿದ್ದಾರೆಂದು ವಾರ್ತೆ ಕೇಳಿ ಬರುತ್ತಿದೆ ಅವರು ಈ ಪೇರಿಗೆ ಅಕ್ಕಿಯನ್ನು ಬರೆದಿಸಿ, ಜಿಲ್ಲಾಧಿಕಾರಿಗಳ ಅಜ್ಞೆಯನ್ನು ಪಡಕೊಂಡು, ತಮ್ಮ ಊರಿಗೆ ಹೊಲ್ಲುರೆ ಇಲ್ಲಿ ಅಕ್ಕಿ ಪೂರೈಸಿ ಕರಿಮೆಯಾಗುವದೆಂದು ಜನರಿಗೆ ಆಜಾಕಯಮಾಡಿದಾಗಿದೆ ವೆಂಗುರ್ಲೆಯಲ್ಲಿ ಅಕ್ಕಿ ಬೇಕಾದಿದ್ದರೆ ವೆಂಗುರ್ಲೆಯ ವರ್ತಕರಿಗೆ ಬೇಟೆಯಲ್ಲಿ ಅಕ್ಕಿ ಎರೆದಿ ಮಾಡಗೊಡುವದಕ್ಕಿಂತ ಅವರಿಗೆ ಇಷ್ಟಿರುವ ಸರಕಾರ ಅಕ್ಕಿಯನ್ನೇ ಕೊಂಡು ಕೊಳ್ಳಲು ಜಿಲ್ಲಾಧಿಕಾರಿಗಳು ಅಪ್ಪಣೆ ಮಾಡುವುದು ಒಳಿತಲ್ಲವೇ? ಒಂದು ವೇಳೆ ವರ್ತಕರಿಗೆ ಈಗಿನ ಸರಕಾರ ದರ ಪೂರೈಸದಿದ್ದರೆ ಬೇಟೆಯಿಲ್ಲಿ ಕೃಷಿಕ ತವಿರುವ ಧಾರಣೆಯಿಂದ ಅದನ್ನು ಕೊಡಬಹುದು? ಜಿಲ್ಲಾಧಿಕಾರಿ ಜಿಲ್ಲೆಯೊಳಗಿನ ಅಕ್ಕಿಯ ಸರಬರಾಜಿನ ವಿಷಯದಲ್ಲಿ ತಿಳಿಸಿರುವ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ಒಬ್ಬರಿಗೆ ಐನೂರು ರೂಪಾಯಿ ದಂಡ ವಿಧಿಸಿದ್ದಾರೆ

ಕುಮಟಿಯ ತಾಲೂಕ ಹಬ್ಬಕ ವಿಸ್ತಾವರ್ಧಕ ಸಂಘವು ೧೯೬೦ನೇ ಇಸವಿಯ ಸಂಘೆ-ಸಂಸ್ಥೆಗಳ ನೋಂದಣಿ ಕಾನೂನಿನನ್ವಯ ಈ ತಿಂಗಳಲ್ಲಿ ನೋಂದಿಸಿಲ್ಪಟ್ಟಿದ್ದು ದೆಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ

ಈ ತಾಲೂಕಿನ ಗುಡೇಅಂಗಡಿ ಗ್ರಾಮದ ಮೂಲ ನಿವಾಸಿಗಳಾಗಿದ್ದು, ಸಚಿವರಾಗಿ ಇಂತಿಮೆಯಲ್ಲಿ ಹಲವು ವರ್ಷಗಳಿಂದ ಒಡಿಪರಿಂದಾಗಿದ್ದ ರಾ॥ ಅಕ್ಕಿಂಜ ಶಿವಪ್ಪಾ ವೆಂಕಟರಾಯ ಇವರು ಕಳೆದ ತಾ ೨೪ನೇ ಸೋಮವಾರ ಮುಂಜಾನೆ ಭಟ್ಕಳಲ್ಲಿ ಸ್ವರ್ಗಸ್ಥರಾದರೆಂದು ಸಮಾಧಿಸಿಲು ಬಳಿಕ ಸ್ವಸ್ಥಾನಕ್ಕಾಗಮಿಸಿದ ಅವರ ಅಕಾಲಿಕ ನಿಧನದಿಂದ ಜಿಲ್ಲೆಯು ದೈನಜ್ಞ ಬ್ರಾಹ್ಮಣ ಸಮಾಜಕ್ಕೆ ಬಹಳ ಹಾನಿಯಾಗಿರುತ್ತದೆ ಮೃತಾತ್ಮರಿಗೆ ಪರಮಾತ್ಮನು ಸದ್ಗತಿಯನ್ನಿತ್ತಾಯಿ!

ಯೊನ್ನಾವರ— (ತಾ ೩೦-೮-೪೬) ಮಳೆ ಸಮಾಧಾನಕರವಿದೆ ಮೈರಿಯ ಪ್ರಸಾದ ಕಡಿಮೆಯಾಗಿಲ್ಲ. ಊರಲ್ಲೆಲ್ಲಾ ಎಣ್ಣೆಯಲ್ಲಿ ತಿನಸುಗಳನ್ನು ಹೊರಿಸುಕೂಡದೆಂದು ಡಂಗುರ ಸಾರಿಸಲಾಗಿದೆ

ಪೇಟೆಯಲ್ಲಿ ಈಗ ತೆಂಗಿನ ಎಣ್ಣೆ ಸಿಗುವದಿಲ್ಲ! ಆಗ್ಗ ಅಂಗಡಿಯಲ್ಲೂ ಸಿಗುವದಿಲ್ಲ. ಸರ್ಕಿಯೂ ದುರ್ಮಿಳವಾಗಿದೆ, ಹೇರಳ ಸರ್ಕಿರೆ ಹುಟ್ಟಿಲ್ಲ, ಭಟ್ಟಳಕ್ಕೆ ಕಡೆಗೆ ಹೋದುತೆಂದು ಹೇಳುತ್ತಾರೆ ಅಕ್ಕಿ ಕೂಡ ಚಿಲ್ಲರೆಯಿಲ್ಲದೆ ಯಾಗಿ ಸಿಗುತ್ತಿದೆ ಕೋಳಿ ಸಿಗುವದಿಲ್ಲ ವೆಂಗುರ್ಲೆಯ ವರ್ತಕರೊಬ್ಬರು ಅಕ್ಕಿ ಖರೀದಿ ಮಾಡುತ್ತಿದ್ದಾರಂತೆ. ಜಿಲ್ಲಾಧಿಕಾರಿಗಳು ಅಕ್ಕಿಯ ಸಾರ್ವಾಕದ ಕುರಿತು ವಿಚಾರ ಮಾಡಬೇಕಾಗಿದೆ.

ಚಿಮನೆ ಎಣ್ಣೆ ಕಂಪನಿಗಳ ಏಜಂಟರು ಕೂಡ ಚಿಲ್ಲರೆ ವ್ಯಾಪಾರ ಪ್ರಾರಂಭಿಸಿದ್ದಾರೆ ನಿಯಂತ್ರಿತ ಧಾರಣೆಯಿಂದ ಡಬ್ಬಿಗಳನ್ನು ಕೊಡುವದಿಲ್ಲ ಕಂಪನಿಯವರು ವಿಚಾರ ಮಾಡಬೇಕಾಗಿದೆ

ನವಿಲಗೋಣಿಯಲ್ಲಿ ಕಳೆದ ವಾರ ೫ನೇ ಸಿದ್ಧಿವಿನಾಯಕ ಸ್ಪೃತಿ ಸಿಕ್ಷಣ ಶಾಲೆ ಎಂಬ ಅಭಿಧಾನದಿಂದ ಒಂದು ಪ್ರಾಥಮಿಕ ಶಾಲೆಯ ಉದ್ಘಾಟನೆಯಾಗಿದೆ ಅಪರಿಲ್ಲಿಗೆ ೧೫೫ ಜನರು ಕಲಿಯುತ್ತಿದ್ದಾರೆ

ಕಾರವಾರ— (ತಾ ೨೯-೮-೪೬) ಮಳೆ ಒಳಗಾಗಿ ಬೀಳುತ್ತಿದೆ

ಕಳೆದ ರವಿವಾರದ ಸಂತೆಗೆ ಹೊರಗಿನ ಅಕ್ಕಿ ಹೆಚ್ಚು ಬರಲಿಲ್ಲ ೧ ಡಬ್ಬಿಗಿಂತ ಹೆಚ್ಚಿಗೆ ತೆಂಗಿನೆಣ್ಣೆ ಹಾಗೂ ಕೊಳ್ಳಕ್ಕೆ ಇದ್ದವರು ಪ್ರತಿ ಮಂಗಳವಾರ ಅಧಿಕಾರಿಗಳಿಗೆ ವರದಿ ಕೊಡಬೇಕೆಂದು ಅಪ್ಪಣೆಯಾಗಿರುವದರಿಂದ ಊರಲ್ಲಿ ಎಷ್ಟು ಎಣ್ಣೆಯುಂಟೆಂದು ಈಗ ಸಹಜವಾಗಿ ತಿಳಿದುಬರುವದು. ಅದು ತಿಳಿದುಬಂದ ಮೇಲಾದರೂ ಗಿರಾಕಿಗಳಿಗೆ ಕೊಡಬೇಕಾದ ಎಣ್ಣೆಯ ಪ್ರಮಾಣ ಬೆಳೆಸಲ್ಪಡುವದೋ ನೋಡಬೇಕು ಒಂದು ಟಾಂಗೆ ಮೂಕರೆ ಬಟ್ಟು ಕಳ್ಳಿಕ್ಕೆ ಮತ್ತು ಇಷ್ಟನ್ನಿ ಒಂದೇ ಕೇರು ತೆಂಗಿನೆಣ್ಣೆ ಒಯ್ಯಬೇಕೆಂಬ ನಿಯಮದಿಂದ ಪೇಟೆಯಿಂದ ದೊರೆದಿರುವ ಜನರಿಗೆ ಬಹಳ ತೊಂದರೆಯಾಗುತ್ತದೆಂದು ಬಿಡಿಸಿ ಹೇಳಬೇಕಾಗಿಲ್ಲ'

(ನಮ್ಮ ಸ್ವಂತ ಸುದ್ದಿಗಾರರಿಂದ)

ತಾ ೧೯ನೇಗೆ ಮುರವಡಗೆಯಲ್ಲಿ ಹಿಡಿಯಲ್ಪಟ್ಟವರಲ್ಲಿ ೫ ಜನರ ಮೇಲೆ ಮಾತ್ರ ಪೋಲೀಸರು ಖಟ್ಲೆ ಮಾಡಿ ಕೊಟ್ಟು, ಉಳಿದವರಿಂದ ಮುಂದೆ ಹೀಗೆ ಮಾಡುವದಿಲ್ಲವೆಂದು ಬರೆಯುಸಿಕೊಂಡು ಬಿಟ್ಟುಕೊಟ್ಟಿದ್ದರು ಖಟ್ಲೆಗೆ ಗುರಿಪಡಿಸಲ್ಪಟ್ಟವರಲ್ಲಿ ಒಬ್ಬರೇನೋ ಜಿಲ್ಲಾಧಿಕಾರಿಗಳಿಗೆ ಮಾಪಸಿಮಾಡಿ ತಮಗೂ ಬಿಟ್ಟುಕೊಡಬೇಕಾಗಿ ದಿನ್ನವಿಸಿದ್ದರಂತೆ ಜಿಲ್ಲಾಧಿಕಾರಿಯು ಆ ಮಾತಿಗೆ ಒಪ್ಪಲಿಲ್ಲವಾಗಿ ತಿಳಿಯುತ್ತದೆ! ಇದೂ ಜನರ ಖಟ್ಲೆಯು ವಿಚಾರ ಕಳೆದ ಸೋಮವಾರ ನಗರ-ಮೆಜಿಸ್ಟ್ರೇಟರ ಮುಂದೆ ನಡೆದು ಪ್ರತಿಯೊಬ್ಬರಿಗೆ ೧-೧ ವರ್ಷದ ಶಿಕ್ಷೆಯಾಗಿದೆ ಸರಕಾರಿ ಪ್ರತಿಬಂಧಕ ಹುಕುಮನ್ನು ಉಲ್ಲಂಘಿಸಿ ಮೆರವಣಿಗೆ ಹೊರಡಿಸಿದ್ದೇ ಅವರ ಅಪರಾಧ.

ಶತ್ರುಗಳು ನಿಮ್ಮ ಕವಿಯಲ್ಲಿ ಏನಾದರೂ ಊದುತ್ತಿದ್ದಾರೆಯೋ ?

ವದಂತಿಗಳೇನಾದರೂ ನಿಮ್ಮ ಕವಿಗೆ ಬಿದ್ದರೆ
ಅವನ್ನು ಜವಾನಿಯರು ಹುಟ್ಟಿಸಿದ್ದಾರೆಂದು ತಿಳಿಯಿರಿ.
ನಿಮ್ಮ ಮನಸ್ಸಿಗೆ ಕಳಂಕವನ್ನುಂಟುಮಾಡಿ,
ನೀವು ಅವರನ್ನು ಎದುರಿಸಲು ಶಕ್ತಿಯಿಲ್ಲದ
ಹಾಗೆ ಮಾಡಲು ಅವರು ಯತ್ನಿಸಿದ್ದಾರೆ.
ರುಜುಪಾತಾಗದ ಸಂಗತಿಗಳನ್ನು ನಂಬಿ,
ಅವನ್ನು ಹರಡಿ ಶತ್ರುಗಳಿಗೆ ಉಪಕಾರ ಮಾಡಬೇಡಿ.

ವದಂತಿಗಳನ್ನು ನಂಬಬೇಡಿ.

ಜಪಾನಿಯರನ್ನು ಎದುರಿಸುವದಕ್ಕಾಗಿ
ರಾಷ್ಟ್ರೀಯ ಯುದ್ಧಮುಖವನ್ನು ರಚಿಸಿರಿ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಸುವ ಇವೆ. ಕಂಪೆನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್‌ಸ್ಟೇಟ್ಸ ಎಕ್ಸೆಸ ನಿಯಮಗಳಂತೆ ಸರಕಾರ್ಯಕ್ರಿಯೆಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ವಾರ್ತೆಗಾಗಿ ಸ್ಥಳೀಯ ಏಜಂಟರ ಕಡೆಗೆ ಅಥವಾ ವರ್ತಮಾನದ್ವಾರದಿಂದ ಕಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಿಸಲಾಗುವದು.

Kumta Agents-
D. K. Nayak Bros.
K. N Nayak.
Honavar Agent-
R. V. Prabhu

K. PadmanabhaRao & Sons,
BELGAUM
Chief Agents for
Karnatak Districts & S. M. States

ಎಲ್ಲೆಲ್ಲೂ ಅಶಾಂತತೆ !

ಮುಂಬಯಿಯಲ್ಲಿ ಈಗ ಶಾಂತತೆಯುಂಟು. ಆದರೆ ಶಾಲೆ-ಕೊಲೇಜುಗಳು ಮಾತ್ರ ಸರಿಯಾಗಿ ನಡೆಯಬದಿಲ್ಲ. ಶಾಲೆ-ಕೊಲೇಜುಗಳು ತೆರೆಯಲ್ಪಟ್ಟರೂ ಒಳಗೆ ವಿದ್ಯಾರ್ಥಿಗಳು ಕಡಿಮೆ ! ಅದಂದ ಶಾಲೆ-ಕೊಲೇಜುಗಳ ಕೆಲಸಕ್ಕೆ ಬಹಳ ತೊಂದರೆಯಾಗಿದೆ ಅದ್ದರಿಂದ ನಾಳೆ ಶಾ ೧೬ನೇಗೆ ಶಾಲೆಕೊಲೇಜುಗಳಿಗೆ ತೆರಬಿ ಒಬದ ವಿದ್ಯಾರ್ಥಿಗಳ ಹೆಸರುಗಳನ್ನು ತಮ್ಮಲಟಿಂದ ತೆತ್ತೊಗೆಯಬೇಕಾಗಿ ಮುಂಬಯಿ ಸರಕಾರದವರು ಸ್ಕೂಲಿನ ಶಿಕ್ಷಣ-ಸಂಸ್ಥೆಗಳಿಗೆ ಸೂಚನೆ ಕೊಟ್ಟಿರುತ್ತಾರೆ ಸ್ವಾಂತಂತ್ರಯಗಳಿಸಿ ಬೇರೆ ಶಾಲೆ ಕೊಲೇಜುಗಳಲ್ಲೂ ಈ ರೀತಿ ಮಾಡಬೇಕೆಂದು ಸೂಚಿಸಲಾಗಿದೆಯಂತೆ

ಅಮೃತಸರದಲ್ಲಿ ಇನ್ನೂ ಪೂರ್ಣಶಾಂತತೆಯಾಗಿಲ್ಲ ಅದರಂದ ರಾತ್ರಿ ಸಂಚಾರಕ್ಕೆ ಹಾಕಿದ ನಿರ್ಬಂಧ ಇನ್ನೂ ಕೆಲವು ದಿನ ಮುಂದರಿಸ್ಪಟ್ಟಿದೆ

ಬಡೋದೆ ಸಂಸ್ಥಾನದಲ್ಲಿ ಆಟಿಯ ಪಾ ೨ ರೇಲ್ವೆ ನಿಲ್ದಾಣಗಳನ್ನು ಸುಟ್ಟು ಬಗ್ಗೆ ಅಲ್ಲಯ ಸರಕಾರವು ೧೪ ಜಿಲ್ಲೆಗಳ ಮೇಲೆ ೪೫೦೦೦ ರೂ ದಂಡವನ್ನು ಹೇರಿದೆ.

ಬೆಳಗಾಂವದೊಳಗಿನ ಲಿಂಗರಾಜ ಕೊಲೇಜು ಮತ್ತು ಧಾರವಾಡದ ಕರ್ನಾಟಕ ಕೊಲೇಜುಗಳು ಕಳೆದ ಬುಧವಾರದಿಂದ ತೆರೆಯಲ್ಪಟ್ಟಿವೆ ಆದರೆ ಸಾಕಷ್ಟು ವಿದ್ಯಾರ್ಥಿಗಳು ಕೊಲೇಜುಗಳಿಗೆ ಬರುವದಿಲ್ಲ ! ಲಿಂಗರಾಜ ಕೊಲೇಜಿನ ಬಹಳ ವಿದ್ಯಾರ್ಥಿಗಳು ಕೊಲೇಜಿನ ಅಂಗಳದಲ್ಲಿ ನಿಂತು ಸರ್ಕಸ್ಸಾಗಲು ನಾಮು ತ್ತಿದ್ದರಂತೆ. ಬೆಳಗಾಂವಿಯ ಹಾಯಸ್ಕೂಲುಗಳ ಗತಿಯೂ ಇದೇ ಸರದಾರ ಹಾಯಸ್ಕೂಲೊಂದನ್ನುಬಿಟ್ಟು ಇನ್ನಿತರ ಹಾಯಸ್ಕೂಲುಗಳ ವರ್ಗಗಳಲ್ಲಿ ೪-೬ ವಿದ್ಯಾರ್ಥಿಗಳೇ ಕಾಣುತ್ತಾರೆ ' ಹುಬ್ಬಳ್ಳಿಯಲ್ಲಿ ೧ ಹಾಯಸ್ಕೂಲಿನಲ್ಲಿ ಎಲ್ಲಾ ಸಾಕಷ್ಟು ವಿದ್ಯಾರ್ಥಿಗಳು ಬರಬದ್ದರಿಂದ ಶಿಕ್ಷಣ ಕಾರ್ಯಕ್ಕೆ ಅಡ್ಡಿಯಾಗಿದೆಯಂತಿ ಸುದ್ದಿ ನಿಂಬಳ ರೇಲ್ವೆ ಬಂದಿಗೆ ಆಪತ್ತಾಗವಾದ್ದರಿಂದ ಈಗ ಹುಬ್ಬಳ್ಳಿ ಸೊಲ್ಲಾಪುರ ನಡುವಿನ ರೇಲ್ವೆ ಬಂದಿಗಳ ರಾತ್ರಿ ಪ್ರಯಾಣ ನಿಲ್ಲಿಸಲ್ಪಟ್ಟಿದೆ. ಬೇರೆ ಕೆಲವು ಗಾಡಿಗಳೂ ಮಧ್ಯರಾತ್ರಿಯ ಸಂಚಾರವನ್ನು ನಿಲ್ಲಿಸಿವೆ

ಮೈಸೂರ ಸಂಸ್ಥಾನದಲ್ಲೂ ವಿದ್ಯಾರ್ಥಿಗಳ ಮುಷ್ಕರ ನಡೆದಿದೆ ಮೈಸೂರ, ಬೆಂಗಳೂರ, ಹಾಸನ, ಶಿವಮೊಗ್ಗಾ, ಚಿತ್ರದುರ್ಗ ಮೊದಲಾದವರೆಡೆ ಶಾಲೆ-ಕಾಲೇಜುಗಳು ತೆರೆಯಲ್ಪಟ್ಟರೂ ಹೋಗುವಷ್ಟು ವಿದ್ಯಾರ್ಥಿಗಳು ಹೋಗಿರಬದಿಲ್ಲಿ. ಮಹಾರಾಜ ಕಾಲೇಜಿನ ಇಬ್ಬ ಉಪಾಧ್ಯಾಯರಿಗಲ್ಲಿ ಬೆಂಗಳೂರಿನಲ್ಲಿ ಕಾಲಿಡಕೂಡದೆಂದು ಆಜ್ಞೆ ಯಾಗಿದೆಯಂತೆ

ಮದ್ರಾಸ ಇಲಾಬೆಯಲ್ಲೀಗ ಸ್ಥಿರಸ್ಥಾವರವಾಗಿದೆಯೆಂದು ಸರಕಾರ ಪ್ರಕಟನೆ ತಳಸಾತ್ತಿದೆ. ಕೊಯಮುತ್ತೂರದೊಳಗಿನ ೧ ಗಿರಣಿ ಕೆಲಸ ಮಾಡುತ್ತಿದೆಯಂತೆ ರಮಸಾದ ಜಲ್ಲೆಯ ವೇಲಕುಟ್ಟು ಊರೊಳಗಿನ ಕೋರ್ಟು ಸುಟ್ಟು ಅರೋಪದ ಮೇಲೆ ೧೦೦ ಜನರನ್ನು ಬಂಧಿಸಿದ್ದಾರೆ. ಈಗ ದೇಶದಲ್ಲಿ ನಡೆದಿರುವ ತುರ್ತು ಬೆಳವಣಿಗೆಗಳನ್ನಾ, ರೇಲ್ವೆ ಮಾರ್ಗಗಳಲ್ಲಿ ಅಡ್ಡಿಗಳನ್ನೆತ್ತಿರುವದು ಮುಂತಾದ ಆಕ್ಷೇಪಾರ್ಹಗಳು " ಹಿಂದುಸ್ತಾನದ ಕೆಂಪು ಸೈನ್ಯ " ವೆಂಬ ಕ್ರಾಂತಿಕಾರಕ ಸಂಸ್ಥೆಯ ಕೃತಿಗಳೆಂದು ಮದ್ರಾಸ್ತಾಂತ ಸರಕಾರದವರು ಆಭಿಪ್ರಾಯಪಟ್ಟಿರೆ. ಇದಲ್ಲ ಕಾರ್ಯಕ್ರಮ ಕೊಂಗ್ರೆಸ ಕಾರ್ಯಕಾರಿ ಮಂಡಳವು ಹಾಕಿಕೊಟ್ಟ ಕಾರ್ಯಕ್ರಮವೆಂದು ಮದ್ರಾಸ ಸರಕಾರವು ಎಚ್ಚರಿಕೆ ಹೇಳುತ್ತಿದೆ. ಜಸ್ಟಗಳ್ಳಿ ಸಿಕ್ಕ ಕೊಂಗ್ರೆಸ ಕಾಗದ ಪತ್ರಗಳ ಮೇಲಿಂದ ಈ ಮಾತು ಸಿದ್ಧವಾಗುತ್ತದಂತೆ

ಬಿಹಾರದಲ್ಲಿ ಇನ್ನೂ ಶಾಂತತೆಯಾಗಿಲ್ಲ ಗುಂಡ ಪುಂಡೆರು ರೇಲ್ವೆ ತಂತಿ ಸೊದಲಾದವುಗಳ ಮೇಲೆ ಅಘಯೋಗ ನಡಿಸಿದ್ದಾರೆ ಅದ್ದರಿಂದ ಸರಕಾರಿ ಆಸ್ತಿ ಹಾನಿಮಾಡುವ ಜನರು ಕಣ್ಣಿಗೆ ಬಿದ್ದರೆ, ಅವರನ್ನು ಗುಂಡಿಟ್ಟು ಕೊಲ್ಲಲಾಗುವದೆಂದು ದಿಹಾನ ಸರಕಾರವು ಎಚ್ಚರಿಕೆಕೊಟ್ಟಿದೆ ಹಿಂದುಸ್ಥಾನ ಸರಕಾರವು ಕಳೆದ ವಾರ ಇನ್ನೊಂದು ರಾಜಾಜ್ಞೆಯನ್ನು ಹೊರಡಿಸಿ ಆಸ್ತಿನಾಶಕಾರಿಗೆ ಹೀಗೆ ದೇಹಾಂತ ಶಾಸನ ವಿಧಿಸಲು ಸಮ್ಮತಿಯನ್ನಿತ್ತಿದೆ.

ಇರಾಕದ ಪ್ರತಿಭಟನೆ !

(ಹಿಂದೇ ಪುಟದಿಂದ ಮುಂದರಿಸಿದ್ದು)

ಯಾಗಿರುವ ಸರ್ ಸೆಮ್ಯುಅಲ ಹೋರರು ಲಗಬಗಯಿಂದ ಲಂಡನ್ನಿಗೆ ತೆರಳಿದ್ದಾರೆ ಮಿತ್ರರ ೨ನೇ ರಣಭೂಮಿಯ ಕಾರಸ್ಥಾನಗಳು ನಡೆಯುತ್ತಿರುವಾಗಲೇ ಪಿಟ್ಟಿರನು ಪ್ರತಿಕಾರ್ಯಸ್ಥಾನಗಳನ್ನು ಸಜ್ಜುಗೊಳಿಸತೊಡಗಿದ್ದಾನೆ. ಇದರಿಂದಾಗಿ ಯಾರ ಕಾರಸ್ಥಾನ ಎಷ್ಟರ ಮಟ್ಟಿಗೆ ಸಾರ್ಥಕವಾಗುವದೆಂದು ನಾ ಹೇಳಲಾರೆ ಸಾಕಷ್ಟು ಸೈನ್ಯಬಲ, ಸಾಹಿತ್ಯಬಲ ಪೂರೈಕೆಯಾದ್ದಲ್ಲಿ ಬ್ರಿಟಿಶರೇ ಗೆಲ್ಲುವರೆಂದು ಖಚಿತವಾಗಿ ಹೇಳಬಹುದು ಇಜಿಪ್ತಿಂದ ಹಿಂಗರೆದುಕೊಂಡ ಸೇನಾಪತಿ ಎಚಿನ್ ಲೆಕರವರಿಗೆ ೨ನೇ ರಣಭೂಮಿಯ ಅಧಿಪತ್ಯವನ್ನು ವಹಿಸುವರಾಗಿ ಹೇಳುತ್ತಿರೆ ೨ನೇ ರಣಭೂಮಿ ಇನ್ನೂ ರೂಪುಗೊಳ್ಳುತ್ತಿದೆ. ಸಕಲ ತಯಾರಿ ಮಾಡಿಕೊಂಡು ಮಿತ್ರರು ಈ ರಣಭೂಮಿಯಲ್ಲಿ ಧುಮುಕುವರು. ಲಂಡನ್ನಿನ 'ಮಂಚೆಸ್ಟರ ಗಾರ್ಡಿಯನ್' ಪತ್ರಕರ್ತರು ಬಣ್ಣಿಸಿದ್ದಂತೆ, ಬ್ರಿಟಿಶರಿಗ ಪ್ರಾಣಸಂ

ಎಲ್ಲ ತರದ ರಾಣಿ, ಕೆಂಡೆ ರಾಣಿ ಎಲ್ಲ ರಾಜರ ವ ದೇಶಗಳ ಬೆಳ್ಳಿ ರೂಪಾಯಿಗಳು, ಹರಕು ನೋಟುಗಳು ಯೋಗ್ಯ ದರದಿಂದ ಬದಲಾವಣೆ ಮಾಡಿಕೊಡಲಾಗುವದು

ಎಸ್. ಎಲ್. ಘಾಕಪ್ಪ, ಸಿರಸಿ

ಆಂಧ್ರ ವಿಮಾ ಕಂಪನಿಯ ಸ್ಥೈರ್ಯ-ಸುಸ್ಥಿತಿಗಳ ಬಗ್ಗೆ

ವಿಶ್ವಾಸ ಹುಟ್ಟಿಸುವ ಅಂಕಿಗಳು

ವರ್ಷ	ಹೊಸ ಕಾರ್ಯ	ಒಟ್ಟು ವಿಮೆಯ ಉಳ್ಳವನ್ನ	ವರ್ಷದ ಕೊನೆಗೆ ಕಳ್ಳಯಾದ ಜೀವವಿಮಾ ನಿಧಿ
೧೯೨೬	ರೂ. ೬,೬೨,೫೦೦	ರೂ. ೪೪,೨೬೦	ರೂ. ೭೯,೦೦೦
೧೯೨೦	,, ೧೪,೬೫,೫೦೦	,, ೧,೧೫,೬೦೦	,, ೩,೧೫,೦೦೦
೧೯೨೩	,, ೧೯,೪೨,೦೦೦	,, ೨,೯೦,೦೦೦	,, ೭,೦೬,೦೦೦
೧೯೨೫	,, ೨೬,೯೦,೦೦೦	,, ೪,೨೬,೯೦೦	,, ೧೦,೫೬,೦೦೦
೧೯೨೦	,, ೨೩,೧೮,೫೦೦	,, ೮,೩೩,೫೦೦	,, ೧೮,೭೬,೮೬೨
೧೯೨೧	,, ೩೭,೭೦,೫೬೫	,, ೮,೫೩,೫೦೫	,, ೩೧,೪೦,೫೮೯
		,, ೯,೦೭,೦೯೪	,, ೪೫,೯೦,೫೮೯

೧೭ ಲಕ್ಷರೂ ಗಳಿಂದ ಹೆಚ್ಚಿಗೆ ಹಣ ಸರಕಾರಿ ಸುತ್ತುಲೇಸಿನಾನ್ಯಭದ್ರತೆಗಳಲ್ಲಡಿಪಾಸಿಟ್ ಇಡಲ್ಪಟ್ಟಿದೆ

ಉಜ್ವಲ ಭವಿತವ್ಯಕ್ಕಾಗಿ
ಆಂಧ್ರ ಕಂಪನಿಯ ಪ್ರತಿನಿಧಿಗಳಾಗಿ
ಉತ್ಸಾಹೀ ಏಜಂಟರುಬೇಕಾಗಿದ್ದಾರೆ.
ಬಯಸುವವರು ಇಂದೇ ಬರೆಯಿರಿ.

ಆಂಧ್ರ

ವಿಮಾ ಕಂಪನಿ, ಲಿಮಿಟೆಡ್.
ಹೆಡ್ ಆಫೀಸು ಮಚ್ಚಲೀಪಟ್ಟಣ
ಶಾಖೆಗಳು —

ಕಲಕತ್ತಾ, ನಾಗಪುರ, ಮದ್ರಾಸ, ಎರ್ನಾಕುಲಮ್ ಮುಂತಾದ ಕಡೆಗಿನ ಪ್ರಮುಖ ಪ್ರತಿನಿಧಿಗಳು—

ಸಿಕಂದರಾಬಾದ್, ಬಾಂಬಾಯಿ, ಮುಂಬಯಿ ಕಡೆಗಿದ್ದಾರೆ

ಪ್ರತಿ ೧೦೦ ಸಾವಿರದ ವಿಮೆಗೆ ರೂ. ೧೫೦ರಂತೆ ಉಚಿತ ಹಣ (ಬೋನಸ್)ಮಂಜೂರಮಾಡಲಾಗಿದೆ

ಕೇ. ಟಿ. ನಾಯ್ಕ, ಡಿವ್ಹಿಜನಲ್ ಆಫೀಸರ, ರಕಕವಾಡಿ, ಬೆಳಗಾಂವ.



ಧುರಪಾಪೇಶ್ವರ

ಬಾಲಜೀವನ

ಮಕ್ಕಳ ಬೆಳವಣಿಗೆಗೆ.

ಕರ್ನಾಟಕ ಪ್ರಚಾರ ಕೇಂದ್ರ:-ಯುನ್ಯಾಟೆಡ್ ಏಜನ್ಸಿಜ, ಹುಬ್ಬಳ್ಳಿ.

NOTIFICATION.

Tenders are invited from contractors for the collection of honey and wax from Yellapur, Sirsi, Siddapur and Honavar Forest Ranges to reach the U/s by the 15th September 1942 for the year ending 30 th June 1943. Special conditions are prescribed for collection in Yellapur Range and these can be seen in the office of the Mamlatdar of Yellapur during office hours. Contractors whose tenders will be accepted shall be required to pay the contract amount in advance and an advance of Rs 25 — for each range as deposit to cover damages if any, in contravention of the terms of agreements. The deposit amount will be returned on the expiry of the period for collection. Acceptance of the tenders will be at the discretion of the U/s.

KARWAR,
26—8—1942

W. N. BAKHTIYAR,
COLLECTOR & CHAIRMAN,
Rural Development Board, Kanara.

The Ankola Urban Coop: Credit Bank, Ltd.
NOTICE to MEMBERS.

ಸದ್ರಿ ಬ್ಯಾಂಕಿನ ವಾರ್ಷಿಕ ಸಾಧಾರಣ ಸಭೆಯು ಶನಿವಾರ ತಾ. 12-9-1942ನೇ ಅಪರಾನ್ಹ ೩ ಘಂಟೆಗೆ ಸರಿಯಾಗಿ ಬ್ಯಾಂಕಿನ ಇಮಾರತಿನಲ್ಲಿ ಜರಗುವದು. ಸಭೆಯ ಕಾರ್ಯಕ್ರಮವನ್ನು ವಾರ್ಷಿಕ ರಿಪೋರ್ಟಿನಲ್ಲಿ ಜಾಹಿರ ಮೇಬರರಿಗೆ ಕಳಿಸಿದ್ದಲ್ಲದೆ ಬ್ಯಾಂಕಿನ ಆಫೀಸ ಬೋರ್ಡಿಗೂ ಅಂಟಿಸಲಾಗಿದೆ. ಬ್ಯಾಂಕಿನ ಯಾವತ್ತೂ ಮೆಂಬರರು ಸಭೆಗೆ ಬಂದು ಸಭೆಯ ಕೆಲಸವು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ವಿನಂತಿ

ಅಂಕೋಲಾ
ತಾ 11-8 1942

S. N. SHETGERI,
CHAIRMAN.

ಕಾನಡಾ ಜಿಲ್ಲಾ ಪ್ರಾಥಮಿಕ ಶಿಕ್ಷಕ ಅರ್ಬನ ಬ್ಯಾಂಕ, ಲಿಮಿಟೆಡ್,
ಹಡ ಆಫೀಸು:- ಅಂಕೋಲಾ.

ನೋಟೀಸು.

ಈ ಸಂಘದ 1941-42ನೇ ಸಾಲಿನ ವಾರ್ಷಿಕ ಸಾಧಾರಣ ಸಭೆಯನ್ನು ತಾ. 15-9-42ನೇ ಮಂಗಳವಾರ ಸಂಜೆ 2½ ಗಂಟೆಯಿಂದ ಅಂಕೋಲಾ ಕನ್ನಡ ೧ನೇ ನಂಬರ ಶಾಲೆಯಲ್ಲಿ ಇಟ್ಟುರುತ್ತದೆ ಕಾರಣ ಸದರಿ ಮೆಂಬರರೆಲ್ಲರೂ ಸಭೆಗೆ ಅಗತ್ಯವಾಗಿ ಬಂದು ಸಹಕರಿಸಬೇಕಾಗಿ ವಿನಂತಿ.

ವಿಚಾರ ಮಾಡತಕ್ಕ ವಿಷಯಗಳು:— (1) 1941-42ನೇ ಸಾಲಿನ ಆಡಾಯವ್ಯನ್ನು ಚರ್ಚಿಸಿ ಮಂಜೂರ ಮಾಡುವದು ಮತ್ತು ಸದರ ಸಾಲಿನ ಲಾಭ-ವಿಭಾಗಣೆಯನ್ನು ಮಾಡಿ 1942-43ನೇ ಸಾಲಿನ ಬಜೆ ತಯಾರಿಸಿದ ಬಜೆಯನ್ನು ವಿಚಾರಿಸಿ ಮಂಜೂರ ಮಾಡುವದು; (2) 1942-43ನೇ ಸಾಲಿನ ಪಿ || ಕ, ಮ ಬಗ್ಗೆ ಈ ಕೆಳಗಿನ ಐದು ಅಮೋದವರ-ರ ಆರ್ಜಿಗಳು ಮತ್ತ ಬಂದಿರುವದರಿಂದ ಇವರು ಆವಿರೋಧ ಆರಿಸಿ ಒಂದರೆಯು ಪ್ರಸಿದ್ಧಿಸುವದು, (1) ಗಜಾನನ ರಾಮಕೃಷ್ಣ ಭಟ್ಟ ಉಗ್ರು, (2) ಮಹಾಬಲೇಶ್ವರ ರಾಮ ಕೆಟ್ಟಿ, (3) ಲಕ್ಷ್ಮಣ ನಾರೀ ಲಕ್ಷ್ಮೇಶ್ವರ, (4) ಶ್ರೀನಾಪ ಗುಂಡು ನಾತ್ರವಳ, (5) ವಿಕಾನಂದ ಸುಬ್ಬ ಕೆಟ್ಟಿ, (3) 1-4-41ರಿಂದ 31 12 41ರ ವರೆಗಿನ ಆಡಿಟ್ ರಿಪೋರ್ಟಿನ ಓದಿ ಅವಕ್ಕ ಕಂಡ ರಣಾವ್ಯಗಳನ್ನು ಮಾಡುವದು, (4) 1942-43ನೇ ಸಾಲಿನ ಬಗ್ಗೆ ಒಬ್ಬ ಕ್ವಾಲಿಫೈಡ್ ಲೆಂ, ಆ ರನ್ನು ನೇಮಿಸುವದು, (5) 1942-43ನೇ ಸಾಲಿನ ಬಗ್ಗೆ ಸೆಕ್ರೆಟರಿಕಾರರನ್ನಾಸರನ್ನು ನೇಮಿಸುವದು, (6) ಸೂಚಿಸಿದ ಪೋಟ ನಿಯಮಗಳ ದುರುಸ್ತಿಯನ್ನು ಸ್ವೀಕರಿಸುವದು (ಇದನ್ನು ಆ ಆಫೀಸುಗಳಲ್ಲಿ ನೋಡಿಕೊಳ್ಳಬಹುದು), (7) ಆಫೀಸ ಕೆಲಸಗಾರರ ಪಗಾರ-ಪ್ರಮಾಣ ನಿಶ್ಚಯಿಸಿ, ಜನರಲ್ ಸಭೆಗೆ ಮೆಚ್ಚಿನ ಶಿಫಾರಸ್ಸಿಗೆ ಬರುವಂತೆ ವಿಚಾರ ಮಾಡುವದು (ಇದನ್ನು ಆ ಆ ಆಫೀಸಿನಲ್ಲಿ ನೋಡಬಹುದು), (8) ಚಾಲತಿ ರೇವಿನ ಬಡ್ಡೀ ವರ ಬದಲಿಸುವ ವಿಚಾರ; (9) ಇದ್ದಲ್ಲಿದೆ ಬರುವ ಇತರ ವಿಷಯಗಳು.

ಅಂಕೋಲಾ,
ತಾ. 10-8-42

ಕೆ. ರಾ. ಪ. ಭಟ್ಟ,
ಸೆಕ್ರೆಟರಿ

ಪ. ರಾ. ನಾಯ್ಕ,
ವ್ಹಾಯಸ-ಚೆಅರಮನ್.

ವಿ. ಸೂ :- ಸದರಿ ಮೇಲೆ ಏವರಿಸಿದ ಬ್ಯಾಂಕಿನ ಸಭೆಯು ಮುಗಿದ ಕೂಡಲೆ ಅದೇ ಸ್ಥಳದಲ್ಲಿ ವಿಶೇಷ ಮೂರು ನಾಯ್ಕರು ನೂಡಿದ ದಾವೆಯ ಸಂಬಂಧ ವಿಚಾರವಿನಿಮಯ ಮಾಡುವದಕ್ಕಾಗಿ ಉತ್ತರ ಕನ್ನಡ ಜಿಲ್ಲಾ ಶಿಕ್ಷಕ ಸಂಘದ ವಿಶೇಷ ಸಾಧಾರಣ ಸಭೆಯು ಕೂಡುವದು. ಕಾರಣ ಎಲ್ಲ ಮೆಂಬರರೂ ಬರಬೇಕಾಗಿ ವಿನಂತಿ.

ಅಂಕೋಲಾ,
ತಾ. 24-8 1942.

ಕೆ ರಾ ಪ ಭಟ್ಟ,
ಸೆಕ್ರೆಟರಿ.

ಸ. ಪ. ಗಾಂವಕರ
ಅಧ್ಯಕ್ಷರು.

ಈ ಸ್ಥಳದ ನಿವಾಸಿಗಳು ಅಜಿ ಯಾಕೆ ಬೇಕಾಗಿಲ್ಲ!

ಜಪಾನಿಯರ ಸ್ವಾಧೀನತೆಯಲ್ಲಿರುವ ಚೈನಾದಲ್ಲಿ ಜಪಾನಿಯರು ವ್ಯಾಪಾರಗಳ ಶಹೀರಿಯಲ್ಲಿ ಮೇಲಿನಿಂದ ಕೆಳಗಿನ ವರೆಗೂ ಯೋಗ್ಯವಾದ ಕೆಲಸಗಳಲ್ಲಿದ್ದ ಚೈನಾದವರನ್ನು ಹೊರಹೊರಡಿಸಿದ್ದಾರೆ. ಈಗ ಅಲ್ಲಿ ಚೈನಾ ಕೈಗಾರಿಕೆಯವರಿಲ್ಲ ಮತ್ತು ಚೈನಾ ಅಂಗಡಿಗಾರರೇ ಆಗಲಿ, ಚೈನಾ ಕಸಬುದಾರರೇ ಆಗಲಿ, ಅಥವಾ ಚೈನಾ ಸಂಸ್ಥೇಪ ಲಿಸಿಗಾರರು ಮತ್ತು ಕರ್ಮಕರೇ ಆಗಲಿ ಇಲ್ಲ. ಅಲ್ಲವೆ ಬೀಡಿಗಳಲ್ಲಿ ಸಾಮಾನುಗಳನ್ನು ಮಾರುವವರು ಕೂಡ ಇಲ್ಲ. ಕೆಲಸಗಳೆಲ್ಲವನ್ನು ಜಪಾನಿಯರೇ ಮಾಡುತ್ತಾರೆ— ಜಯಸಿದ್ದಕ್ಕೆ ಸ್ಥಲ! ಜಪಾನಿಯರು ಬಂದರೆ ಹೀಗಾಗುತ್ತದೆ. ಇಂಡಿಯಾ ದೇಶವೂ ಹೀಗಾಗುವುದನ್ನು ನಮ್ಮನೆ ನಿಂತು ನೋಡುತ್ತಿರಬೇಡಿರಿ. ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಯರ ಶಕ್ತಿಯು ನಮ್ಮ ದೇಶದ ರಕ್ಷಣೆಗೆ ಬೇಕಾಗಿದೆ.

ಜಪಾನಿಯರನ್ನು ಎದುರಿಸುವುದಕ್ಕೆ ರಾಷ್ಟ್ರೀಯ ಯುದ್ಧಮುಖವನ್ನು ರಚಿಸಿರಿ.

ಕ್ವಾರ್ಕ
ಶಿರೋವೇದನಾ
ನೋವುಗಳಿಗೆ ಸದ್ಯೌಷಧ
ಕ್ವಾರ್ಕ ಮುಂಬಯಿ ನಂ. ೧

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. Monday, 7th September, 1942.

ವರ್ಷ ೨೫

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೦

ಪತ್ರದ ವರ್ಗಣೆ.
ಕುಂಟಿಯಲ್ಲಿ ಮುಂಗಡ
ರೂಪಾಯಿ ೨-೪-೦.
ಹುಪಿಯಾರ್ಡರಿನಿಂದ
ರೂ. ೩-೧-೦.
ವಿ. ಪಿ. ಖರ್ಚಿನೆಕ್ಕೆ ಸೇರಿ
ರೂಪಾಯಿ ೩-೪-೦.
ಪ್ರತಿ ಸಂಚಿಕೆಗೆ ೦-೧-೦
ಹಳೆಯ ಸಂಚಿಕೆಗೆ ೦-೨-೦

ಜಾಹೀರಾತುಗಳ ದರ.
ಇಸ್ಪತ್ತು, ಇಂಗ್ಲಿಷ ಸ್ಯಾಂಪಾಯಿನ (೧೫ ಎಮ್ ಅಚ್ಚು) ಆಸಾಲುಗಳವರೆಗೆ ರೂ.೧-೮-೦ ಆನಂತ್ರ ಪ್ರತಿಸಾಲಿಗೆ ೦-೩-೦. ಹೆಚ್ಚಿಂಗಡ ಸಾಲು ಎಷ್ಟು ಹೊತ್ತಿರುವದೋ ಆ ಮಾಪಕದಿಂದ ಅಷ್ಟು ಸಾಲುಗಳು ಒತ್ತಿಯಲ್ಲಬಹುದು.
ಇತರ ಜಾಹಿರಾತುಗಳಿಗೆ ಬಗ್ಗೆ ಪತ್ರವ್ಯವಹಾರ ಮಾಡಿದಲ್ಲಿ ತಿಳಿಸಲ್ಪಡುವದು.

ಸರ್ವಜನಹಿತಕರ್ತಾ ಶ್ರೀಕರ್ತಾ ಭವತಿ ಲೋಕೆ ಜನಪದಹಿತಕರ್ತಾ ರಕ್ಷಕ್ತೇ ಧರ್ಮಶಕ್ತೈಃ।
ಇತಿ ಸಹಸಿ ವಿಧೇಯೇ ವರ್ತಮಾನೇ ಸಮಾನೇ ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—ಸ(ಕುಮಟಾ— ಸೋಮವಾರ, ತಾರೀಖು ೭ ನೇ ಸಪ್ಟಂಬರ ಸನ್ ೧೯೪೨ನೇ ಇಸವಿ)ಸ—

ವಿವಿಧ ಸುದ್ದಿಗಳು.

ಅಮೇರಿಕೆಯಲ್ಲಿ 'Time' (ಕಾಲ), 'Life' (ಜೀವನ), 'Fortune' (ಭಾಗ್ಯ) ಹೀಗೆ ಪತ್ರಿಕೆಗಳಿವೆ. "ಕಾಲ" ಮತ್ತು "ಜೀವನ" ಪತ್ರಿಕೆಗಳು ವಾರ-ಪತ್ರಿಕೆಗಳು. "ಕಾಲ" ಪತ್ರಿಕೆಯಲ್ಲಿ ಪ್ರತಿ ವಾರಕ್ಕೆ ಘಟಿಸುವ ಘಟನೆಗಳ ಸಿಂಹಾವಲೋಕನವಾಗುತ್ತದೆ. "ಕಾಲ", "ಜೀವನ" ಪತ್ರಿಕೆಗಳು ಪ್ರತಿ ವಾರಕ್ಕೆ ೧೦-೧೦ ಲಕ್ಷದಷ್ಟು ಖರ್ಚಾಗುತ್ತವೆ. 'Fortune' (ಭಾಗ್ಯ) ಪತ್ರಿಕೆ ಮಾಸಪತ್ರಿಕೆ. ಇದು ಶ್ರೀಮಂತರ ಬಗ್ಗೆ ಹೊರಡುತ್ತದೆ. ತಿಂಗಳಿಗೆ ಇದರ ೧ ಲಕ್ಷ ಪ್ರತಿಗಳು ಖರ್ಚಾಗುತ್ತವೆ. ಈ ಮಾಸ ಪತ್ರಿಕೆಯ ಬೆಲೆ ಪ್ರತಿ ಸಂಚಿಕೆಗೆ ರೂ. ೭॥ !

ಈ ಮೂರೂ ಪತ್ರಿಕೆಗಳು ಒಂದೇ ಸಂಸ್ಥೆಯಿಂದ ಹೊರಡುತ್ತವೆ. ಈ ಸಂಸ್ಥೆಯವರು ಲೋಕದಲ್ಲೆಲ್ಲ ಸ್ವಂತ ಪ್ರತಿನಿಧಿಗಳನ್ನಿಟ್ಟು ಜಗದ ಕಡೆಯಿಂದ ಸಮುದ್ರತಂತಿಯ ಮೂಲಕ ವಾರ್ತೆಗಳನ್ನು ತರಿಸುತ್ತಾರೆ. ನ್ಯೂಯೊರ್ಕದಲ್ಲಿ ಈ ಪತ್ರಿಕೆಗಳ ಕಚೇರಿ ಅತ್ಯದ್ಭುತವಾದದ್ದಿದೆ. ಗಗನಚುಂಬಿತವಾದ ಇವಾರ ಬಿಲ್ಡಿಂಗಿನಲ್ಲಿದೆ. ನ್ಯೂಯೊರ್ಕ್, ಚಿಕಾಗೋ ಮತ್ತು ಫಿಲೆಡೆಲ್ಫಿಯಾದಲ್ಲಿ "ಕಾಲ" "ಜೀವನ" ಪತ್ರಿಕೆಗಳು ಒಂದೇ ಕಾಲಕ್ಕೆ ಪ್ರತಿವಾರ ಅಚ್ಚಾಗುತ್ತಿವೆ. ನ್ಯೂಯೊರ್ಕ್‌ದೊಳಗಿನ ಕಚೇರಿಯವರು ಆ ವಾರದ ಒಂಚಿಕೆಯ ಯಾವತ್ತೂ ವಿಷಯಗತ್ಯನ್ನು ಶಬ್ದಶಃ ಟೆಲಿಫೋನಿನ ಮೂಲಕ ತಿಳಿಸುತ್ತಾರೆ. ಬೇರೆ ಸಮುದ್ರತಂತಿಗಳಿಗಾಗಿ ಈ ಕಚೇರಿಯವರು ದಿನಂಪ್ರತಿ ॥ ಸಾವಿರ ರೂಪ್ಯಗಳನ್ನು ಖರ್ಚು ಮಾಡುತ್ತಾರೆ. ಈ ಪತ್ರಿಕೆಯ ಪ್ರತಿನಿಧಿಗಳು ಖರ್ಚುಮಾಡಲಿಕ್ಕೆ ಕಂಜೂಸರಲ್ಲಿ. ವಿಮಾನ ಸಿಗುತ್ತಿದ್ದರೆ ಅಗಿಬಂಡಿಯನ್ನು ಇವರು ಎಂದಿಗೂ ಹತ್ತುವದಿಲ್ಲ !

ಪತ್ರಕರ್ತ ಮಿ॥ ಲೂಸರವರು ಕರ್ತ್ಯಕ್ಷೇತ್ರಕಾಲಿಪುರುಷರು. ಇವರ ವ್ಯಾಯ ಬರೇ ೪೬ ವರ್ಷ ೧೫ ವರ್ಷಗಳಹಿಂದೆ ಇವರು ೩ ಮೂರೂ ಪತ್ರಿಕೆಗಳನ್ನು ಹೊರಡಿಸಿದರು. ಇಡೀ ಅಮೇರಿಕೆಯಲ್ಲಿ ಈ ಪತ್ರಿಕೆಗಳು ಬಹಳ ಹೆಸರುಗೊಂಡಿವೆ. ಅಮೇರಿಕೆಯ ಜನತೆಯ ಅಭಿಪ್ರಾಯವನ್ನು ಘಟಿಸುವಲ್ಲಿ ಈ ಪತ್ರಿಕೆಗಳಿವೆ.

ಹಿಂದುಸ್ಥಾನದಲ್ಲಿ ಈ ಪತ್ರಿಕೆಯ ಪ್ರತಿನಿಧಿಗಳು ಮುಂಚೆ ಇರಲಿಲ್ಲ. ಯುದ್ಧಕಾರಣದಲ್ಲಿ ಹಿಂದುಸ್ಥಾನ ನಕ್ಯುಂಬಾದ ಮಹತ್ವವನ್ನು ನೆನೆಸಿ ಮಿ॥ ಲೂಸರು ಮಿ॥ ವಿಲಿಯಮ್ಸ ಫಿರರವರಿಗೆ ಇಲ್ಲಿ ಕಳಿಸಿಕೊಟ್ಟಿದ್ದಾರೆ. ಮಿ॥ ಫಿಶರರು ಈಗ ೯-೧೦ ತಿಂಗಳುಗಳಿಂದ ದಿಲ್ಲಿಯಲ್ಲಿ ಕಚೇರಿಯನ್ನಿಟ್ಟು "ಕಾಲ", "ಜೀವನ" ಪತ್ರಿಕೆಗಳಿಗೆ ವಾರ್ತೆಗಳನ್ನು ಕಳುಹುತ್ತಾರೆ. ಈ ೯-೧೦ ತಿಂಗಳ ಅವಧಿಯಲ್ಲಿ ಮಿ॥ ಫಿಶರರು ಅರ್ಧ ಲಕ್ಷ ಶಬ್ದಗಳನ್ನು ಹಿಂದುಸ್ಥಾನದ ಸಂಬಂಧವಾಗಿ ಕಳುಹಿದ್ದಾರೆ ಮಿ॥ ಫಿಶರರಿಗೆ ಪಂ॥ ಜವಾಹಿರಲಾಲರ ಮೇಲೆ ಬಹಳ ಮಮತೆ. ಪಂ॥ ಜವಾಹಿರಲಾಲರು ಹಿಂದೀ ಜನತಾಗದ ಪ್ರತಿನಿಧಿಯೆಂದು ಮಿ॥ ಫಿಶರರು ಎಣಿಸುತ್ತಾರೆ. ಪಂ॥ ಜವಾಹಿರಲಾಲರು ಲೋಕಶಾಹಿಯ ಕರ್ತೃತ್ವಶಾಲಿ ಪುರುಷರೆಂದು ಮಿ॥ ಫಿಶರರವರು ಅಭಿಪ್ರಾಯಪಡುತ್ತಾರೆ. 'ಟೈಮ್ಸ' ಪತ್ರಿಕೆಯ ಮುಖ್ಯಸ್ಥರಮೇಲೆ ಛಾಪ ಚಿತ್ರ ಬರುವದೆಂದರೆ ಅದೊಂದು ಮಹತ್ವದ ಮಾನ! ಆಗಸ್ಟ ತಿಂಗಳ ೩ನೇ ವಾರದ 'ಟೈಮ್ಸ' (ಕಾಲ) ಸಂಚಿಕೆಯ ಮುಖಪೃಷ್ಠದಮೇಲೆ ಪಂ॥ ಜವಾಹರಲಾಲರ ಧಾವಚಿತ್ರವಿದ್ದು, ಹಿಂದುಸ್ಥಾನಕ್ಕೆ ಸಂಬಂಧಪಟ್ಟ ೩ ಪುಟಗಳಷ್ಟು ಸಂಗತ್ಯಗಳು ಪ್ರಕಟಿಸಲ್ಪಟ್ಟಿವೆ. ರಾಷ್ಟ್ರೀಯ ಸಭೆಯ ಅಧ್ಯಕ್ಷತೆ ರಾದ ಮೌ॥ ಅಝಾದರವರು ಭೂಲೋಕದಲ್ಲಿ ಗಿನಪ್ರೇಷ್ಠ ತರಗತಿಯ ವಾಗ್ಮಿಗಳಿಂದೂ, ಶ್ರೀ॥ ರಾಜಗೋಪಾಲಾಚಾರ್ಯರು ಧೈರ್ಯಶಾಲಿ ಮುತ್ಸದ್ದಿಗಳೆಂದೂ, ಸೌ॥ ಸರೋಜನಿ ನಾಯಿಡುರವರು ಚಿತ್ತವೇಧಕ ವ್ಯಕ್ತಿಗಳೆಂದೂ ಮಿ॥ ಫಿಶರರವರ ಅಭಿಪ್ರಾಯವುಂಟು. ಡಾ॥ ಸಯ್ಯದ ಮಹಮೂದರವರೂ ಮಿ॥ ಫಿಶರರವರೂ ಜೀವನ ಗೆಳೆಯರು. ಮಿ॥ ಫಿಶರರು ಪಂ॥ ಜವಾಹರಲಾಲರ ಕಡೆಯಿಂದ ಕಳೆದ ಮಾರ್ಚ ತಿಂಗಳಲ್ಲಿ ಹಿಂದುಸ್ಥಾನದ ಸರಸ್ಥಿತಿಯ ಬಗ್ಗೆ ಒಂದು ಲೇಖ ಬರಸಿಕೊಂಡು ಆ ಇಡೀ ಲೇಖವನ್ನು ಕೂಡಲೆ ನಮುದ್ರತಂತಿಯಿಂದ ಅಮೇರಿಕೆಗೆ ರವಾನಿಸಿದ್ದರು. ೮ ಲೇಖ 'Fortune' (ಭಾಗ್ಯ) ಪತ್ರಿಕೆಯಲ್ಲಿ ಪ್ರಕಟವಾಗಿವೆ. ಈ ಲೇಖದಲ್ಲಿ ೫೭೦೦ ಶಬ್ದಗಳಿವೆ.

ಸತ್ಯಾಗ್ರಹ ಕಾಲದಲ್ಲಿ ಈ ಪತ್ರಿಕೆಯ ಸುದ್ದಿಗಾರರಾಗಿ ಕ್ರೈಸ್ತವಾಳಿ ಮಿಲ್ಲರರು ಮುಂಬಯಿಗೆ ಬಂದಿದ್ದರು. ಆಯುವ ಜೈಲಿನಲ್ಲಿ ಪೋಲೀಸರು ನಿಷೇಕ್ಷ್ಯ ಕೊಂಗ್ರೆಸ ಸ್ವಯಂಸೇವಕರ ಮೇಲೆ ನಡಿಸಿದ ದೌರ್ಜನ್ಯ ಹೊಡೆತ ಕಂಡು ಅವರಿಗೆ ಬಹಳ ಪಶ್ಚಾತ್ತಾಪ ವಾಯಿತು. ಅದರ ಯುಧ್ಧಾರ್ಥ ವೃತ್ತಾಂತವನ್ನು ಬರೆದು ತಂತಿ-ಕಚೇರಿಗೆ ಕೊಟ್ಟು ಅವರು ತಮ್ಮ ನಿವಾಸ ಸ್ಥಾನಕ್ಕೆ ಹೋದರು. ಅವರು ನಿವಾಸಸ್ಥಾನ ಮುಟ್ಟುವಷ್ಟರಲ್ಲಿ ಅನಂಗೊಂದು ನಿಷ್ಠಾಂವಿ ಕಾಗದ ಬಂತು. ಸೆನ್ಸರರು ಆ ವೃತ್ತಾಂತವನ್ನು ಕಳಿಸಿಕೊಡಿಲಿಲ್ಲವಾಗಿ ಆ ಕಾಗದದಲ್ಲಿ ಬರಿದಿತ್ತು. ಮಿಲ್ಲರರು ಎದ್ದರು; ತಂತಿ ಕಚೇರಿಗೆ ಹೋದರು. ಮಿಲ್ಲರರ ತಂತಿ ಮೇಜಿನ ಮೇಲೆ ಬಿದ್ದುಕೊಂಡಿತ್ತು. ಸೆನ್ಸರರ ಕಡೆಗೆ ಮಿಲ್ಲರರು ಇವಾದ ಮಾತಾಡಲಿಲ್ಲ. ತಂತಿಯನ್ನು ಇದ್ದಕ್ಕಿದ್ದ ಹಾಗೆ ಕಳಿಸಲಪ್ಪಣೆ ಕೊಡಿದ್ದರೆ ಇಮಿಗಲೇ ಸೈಲ ಮಿಷನ ಮಾಡಿ ಇರಾಣಕ್ಕೆ ಹೋಗಿ ಅಷ್ಟಿಂದ ಈ ತಂತಿ ಕಳಿಸುತ್ತೇನೆಂದೂ ಸೆನ್ಸರರ ನಡಾವಳಿಯ ಬಗ್ಗೆ ಟೀಕೆ ಮಾಡುತ್ತೇನೆಂದೂ ಮಿ॥ ಮಿಲ್ಲರರು ಸೆನ್ಸರರಿಗೆ ತಿಳಿಸಿದರು ಕೂಡಲೆ ಸೆನ್ಸರರು ತಂತಿ ಕಳಿಸಲು ಅಪ್ಪಣೆ ಕೊಟ್ಟರು "ಕಾಲ-ಜೀವನ-ಭಾಗ್ಯ" ಪತ್ರಿಕೆಗಳ ಲೋಕಶಾಹಿತನವಿದು !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಪ್ರಬಿಕ ಹಿಂದುಸ್ಥಾನಪಡಿ ಸಂಘಟಿತವಾದದ್ದು.)

ಹೆಡ್ ಆಫೀಸು :— ಕುಂದಾಪುರ.

ಬ್ರೆಂಚ ಆಫೀಸುಗಳು:— ಅಂಕೋಲಾ, ಬೆಳಗಾಂವ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ.

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಪತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಛಂಗಾದ ದಾಗಿನೆಗಳ ವ ಇತರ ವ್ಯಾಪಾರದ ಮ್ಹಾಲುಗಳ ಅಡವಿನ ಮೇಲೆ ಸಲಪತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು.

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚಕ್ಕುಗಟ್ಟಿಸಲ್ಪಕೊಡಲ್ಪಡುವವು. ಎಲ್ಲ ತರದ ಬೇಂಕಿನ ವ್ಯವಹಾರಗಳು ಸಲಪತ್ತಿನ ದರದಿಂದ ನಡಿಸಲ್ಪಡುವವು.

ಕುಂದಾಪುರ,
11—8—1942.

The Agricultural & Industrial Bank, Ltd.

ಸ್ಥಳಿಕ ವಿಷಯಗಳು.

ಲೇಖಕ — ಸ್ಥಳವಂತಿಕ

ನಮ್ಮಾ ಜಿಲ್ಲೆಯಲ್ಲಿ ಮೋಟಾರ ೨ ವ್ಹಿಮಿಲ ಅಪೇಕ್ಷಿತವಾದ ಅನಾನ ಕೂಲತೆಗಳುಟಿ ಗಿನ ಪೆಟ್ರೋಲ ಕೂಪನಗಳಿದ್ದರೂ ಪೆಟ್ರೋಲ ಸಿಗದಿಲ್ಲಾ ಹಿಂಯರ ಸಿಗುವದು ದುರ್ಲರ ಮೋಟಾರ ಸವಿಸುವವರು ಬೇರೆ ಮೋಟಾರಿನ ಪ್ರಯೋಗವನ್ನು ಪಡೆಯುವ ಸಾವಕಾರರು ಬೆಂ ಸಾಹಸ ರ ನೋಟಾರಿನವರನ್ನು ಸುಲಿಯುವದಕ್ಕಾಗಿ ನಿರಂತ್ತರವಾಗಿ ಪ್ರಯತ್ನಪಡುತ್ತಿದ್ದಾರೆ. ಮೋಟಾರ ಟ್ಟಿನೆಯನ್ನು ಜೀವಿತ ಗೊಳಿಸಲು ಸಹಾಯ ಮಾಡುವದಿಲ್ಲ. ಮೋಟಾರ ನವರಲ್ಲಿ ಎಕ್ಕತ್ತೆ ಇಲ್ಲ. ಎಡಕು ಉಂಟು. ಎಲ್ಲರೂ ಕೂಡಿ ಕಾರ ಭಂಡಲಿಸಲಿಕ್ಕೆ ಒಂದು ಕಂಪನಿ ಮಾಡಲಿಕ್ಕೆ ಒಡಂಬಡವಿಲ್ಲ. ಒಂದಾವರ್ತಿ ಜಿಲ್ಲಾ ಮೋಟಾರಿನವರು ಕೂಡಿದಾಗ್ಯೂ ಕೆಂದಿನ ಪ್ರವೃತ್ತಿ ನಮ್ಮ ಜಿಲ್ಲೆಯಲ್ಲಿಕಡಿ ಯಾವ್ಹದೆಂದ ವಾಕಾರರ ಈ ಉದ್ದಿನ ಮಲ್ಲಿ ಹಣ ತೆಡಗಿಸಲು ಒಡಂಬಡವಿಲ್ಲ. ನಮ್ಮ ಜಿಲ್ಲೆಯಿಂಗೆ ಒಂಡಲಿಗ ಬರಲು ಲಿಲ್ಲ ರೇಗರ್ಸನ್ನು ಲಕ್ಷರ್ಗ ಮಾಡಿಕೊಳ್ಳುವ ದಕ್ಕಾಗಿ ದ್ವಣ ಕನ್ನಡ ಜಿಲ್ಲೆಯವರು ಇಲ್ಲಿ ತಮ್ಮ ತಮ್ಮ ಬಂಧಗಳ ಏಜೆನ್ಸಿಯನ್ನು ಮಾಡಿಕೊಂಡಿದ್ದಾರೆ. ಲಕ್ಷವಷ್ಟಿರುವಂಥ ೪ ನಮ್ಮ ಜಿಲ್ಲೆಯೊಳಗಿನವರಿಗೆ ದ್ವಣ ಕನ್ನಡ ಜಿಲ್ಲೆಗೆ ಹೋಗಿ ಇವನ್ನು ಹೊಗ್ತಿಲಿಲು ಇಲ್ಲಿಯ ಸಂಪರ್ಕಾರಿಗಳ ಒಪ್ಪಿಗೆ ಬೇಕಾಗಿದೆ. ಇಲ್ಲಿಯ ಒಪ್ಪಿಗೆಯಿಲ್ಲದೆ ಇಷ್ಟೆಯ ಒಂದು ಕರು ಅಲ್ಲಾಡುವಹಾಗಿಲ್ಲ. ಇಲ್ಲಿಯ ಮೋಟಾರ ಉದ್ದಿನಯವರು ತೀರ ಸಂಕಟದಲ್ಲಿದ್ದಾರೆ. ಮೋಟಾರಿನವರಿಗಿನ ಮತ್ತರವನ್ನೂ ಒಡತನವನ್ನೂ ಸಾವಕಾರರು ದಾಡಿಸ್ಪವನ್ನೂ ಲೈಸೆನ್ಸಿಂಗಿನ ಪ್ರಕ್ರಿಯೆಯನ್ನೂ ದೆಸ್ಸಾಣ ಕನ್ನಡ ಜಿಲ್ಲೆಯಿಸಿ ಸಿ ಸಿ ಮೋಟಾರ ಕಂಪನಿಯವರಂಥ ದೆಸ್ಸಾಣ ಕನ್ನಡ ಜಿಲ್ಲೆಯವರು ತಿಳಿಕೊಂಡು ಜಿಲ್ಲೆಯೊಳಗೆ ಮೋಟಾರ ಉದ್ದಿಮಗಾರ ದ್ರೋಹಿ ಬಗಿಯುವ ಸ್ವಂತ ದೊಷ್ಟಿಕ್ಕಾಗಿ ಹಾತೊರೆಯುವ ಸ್ವಾದರ್ಸಯುಣ ಸಾವಕಾರರು ಸಹಯದಿಂದ ತೋರಿ ಸಿಕಗೆ ಬಂದು ಕಂಪನಿಯಿನ್ನು ವಿರ್ಪಡಿಸುವ ಪ್ರಯತ್ನ ಈ ಜಿಲ್ಲೆಯ ಪರ ಕಡಿಮಿಂದ ತಪ್ಪಿಸುವ ಪ್ರಯತ್ನ ಹೂಡಿದ್ದಾರೆ.

ಬಿಳ್ಳನಕೋಡಿನಲ್ಲಿ ಕಳವಾಗುತ್ತಿರುವ ಅಡಿಕೆ-ತೆಂಗಿನ ಕಾಯಿಗಳನ್ನು ಕೊಂಡುಕೊಳ್ಳುವವರು ಅಲ್ಲಿಯ ಆಂಗಡಿ ಕಾರರಲ್ಲವಾಗಿಯೂ ಆಂಗಡಿಯಿಲ್ಲದೆ ಅಡಿಕೆ, ತೆಂಗಿನಕಾಯಿ ಗಳ ವ್ಯಾಪಾರ ಮಾಡುವ ಜನರೆಂತಲೂ ಚಿಕ್ಕನಕೋಡ ಸುದ್ದಿಗಾರರು ತಿಳಿಸುತ್ತಾರೆ.

ಶಿರಾಲಿ— (ತಾ. ೨೫-೯-೪೨) ಮಳೆಯಿಲ್ಲ. ನೋಡಗರೇಪ್ಪೋ ಕಾಣುತ್ತಿವೆ

ಧಾರಣೆ ನಿಯಂತ್ರಣದ ಮೂಲಕ ಜನರಿಗೆ ಕಷ್ಟವಾಗ ತೊಡಗಿದೆ! ಹೊಸ್ತಿ ಎಣ್ಣೆ, ಕಲ್ಲೆಣ್ಣೆ, ಸಕ್ಕರೆ ಮುಂತಾದ ಜೀನಸುಗಳು ಸಿಗುವದಿಲ್ಲ! ಗ್ರಾಮಪಂಚಾಯತದವರು ಶ್ರೀ ಚಿತ್ರಾಪುರ ಮಠದ ಜಡ್ಡಿ ಅಕ್ಕಿಯನ್ನು ಕೊಂಡು ತಾಯಲಿ ೧ಕ್ಕೆ ೬ ಆಣೆಯಂತೆ ಮಾರುತ್ತಾರೆ. ಮಾರದವು ತಮ್ಮ ಅಕ್ಕಿಯನ್ನು ಚಿತ್ರಾಪುರ ಸಂತೆಯಲ್ಲೇ ಮಾರುವ ವ್ಯವಸ್ಥೆ ಮಾಡಿದ್ದರೆ ಒಳ್ಳೆಯಾಗುತ್ತಿತ್ತು. ಬಾಕಿ ಸಾವಕಾರರು ತಮ್ಮ ಅಕ್ಕಿ ಆಗ್ಗ ಧಾರಣೆಯಿಂದ ಕೊಡ ಲೊಪ್ಪುವದಿಲ್ಲ ದಿನಗಳು ಕಳೆದಂತೆ ಧಾರಣೆಗಳನ್ನು ಏರಿಸು ತ್ತಿದ್ದಾರೆ ಇದು ಯೋಗ್ಯವಲ್ಲ ಬದ ಜನರ ಬಗ್ಗೆ ಅವರು ಕನಕರ ಕೋಂಡಿಸಬೇಕು.

ಬೈಲೂರ— (ತಾ. ೨೪-೯-೪೨) ಕಳ್ಳ-ಸರಾಯಿ ಯ ವ್ಯಾಪಾರವು ಇನ್ನೂ ನಂತಿಲ್ಲ! ಕುಡುಕರಿಗೆ ಯಥೇಚ್ಛ ಸರಾಯಿ ಸಿಗುತ್ತಿದೆ! ಏಪ್ರಿ ರಾತ್ರೆ ೪ ಘಂಟೆಯ ಸುಮಾ ರಿಗೆ ೫ ಜನರು ಸರಾಯಿ ಕುಡಿದು ಉನ್ಮತ್ತರಾಗಿ ಆಗ ದಿಯಲ್ಲಿ ಕುಳಿತಿದ್ದ ಒಬ್ಬನನ್ನು ಸುತ್ತಿ ಚಚ್ಚಾಗಿ ಥಳಿಸಿ ದರು! ನೆರೆನೊರೆಯ ಜನರು ಕೂಡಿ ಅವನನ್ನು ಬಿಡಿಸಿ ದಿದ್ದರೆ ಅವನು ಯಸಲೋಕದ ಹಾದಿ ಹಿಡಿಯಬೇಕಾಗು ತ್ತಿತ್ತು! ಅಧಿಕಾರಿಗಳು ಸರಾಯಿಯ ಮೇರ್ಚಾಪಾರವನ್ನು ನಿರ್ಬಾರಿಸಿಸಲಾರರೇ?

ಶಿರಿ— (ತಾ ೨೫-೯-೪೨) ಜಿಲ್ಲಾಧಿಪತಿಗಳು ಒಂದು ನಿಯಂತ್ರಣ ಹುಕುಮನ್ನು ಹೊರಡಿಸಿ, ಈ ತಾಲೂ ಕಿನಲ್ಲೆಲ್ಲಿನ ಸ್ಥಾನಿಕ ಹಾಗೂ ಸಾಗರ ವೈಮೆ ಅಕ್ಕಿಯನ್ನು ಒಂದು ರೂಪಾಯಿಗೆ ೭ ಪೌರುಗಳಿಗಿಂತ ಕಡಿಮೆ ಯಾಗಿಯೂ ಬೆಲ್ಲಿಗೆ ಮಾರಬಾರದಾಗಿ ವಿಧಿಸಿರುತ್ತಾರೆ.

ಇದ್ದಿಯ ಧರ್ಮದ ಆಂಗಡಿಯಲ್ಲಿ ಬಿಸುಡಿ ಎಣ್ಣೆ ಮಾತ್ರ ಸಿಗುತ್ತದೆ. ಉಳಿದ ಯಾವದೇ ಸಾಮಗ್ರಿ ಸಿಗುವ ದಿಲ್ಲ. ಮ್ಯುನಿಸಿಪಾಲಿಟಿಯವರು ಹೀಗೇಕೆಆಗಾದ್ದಾತ್ತೆರೆಂದು ತಿಳಿಯುವದಿಲ್ಲ ಆಂಗಡಿಯ ವ್ಯವಸ್ಥಾಪಕ ಮಂದಳದಲ್ಲಿ ಪೆಟ್ಟಿಜ್ಜು ಲಾಜಪಡಿಯಲು ಆತುರರಾಗಿರುವ ವರ್ತಕ ಜನ-ಪ್ರಮುಖರ ಪ್ರಭಾವ್ಯವಿರುವದರಿಂದ ಬೇರೆ ಜೀನಸುಗಳು ಮಾರಾಟಕ್ಕೆ ಇಟ್ಟರುವದಿಲ್ಲವೆಂದು ಜನರ ಅಂಬೋಣ ಮೂಮಲೇಪಾರರು ಈ ಕಡೆ ಸ್ವಲ್ಪ ಲಕ್ಷ ಕೊಡಬೇಕು

ಕಾರವಾರ— ಜಿಲ್ಲಾ ಶಾಲಾ ಬೋರ್ಡಿನ ಕಚೇರಿ ಯಲ್ಲಿ ಒಂದು ಕಾರಕೂನಿಯ ಸ್ಥಳ ತೆರವಾಗಿತ್ತು. ಈ ಸ್ಥಳಕ್ಕೆ ಸಾವಾನ್ಯವಾಗಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಯಾಗಿರುವವರೇ ನೇಮಿಸಿಕೊಳ್ಳುತ್ತಾರೆ. ಆದರೆ ಬೋರ್ಡಿನ ಆಡಳತೆ ಅಧಿಕಾರಿಳ ವಿಶಾಸಾರ್ಹ ಮೇರೆಗೆ ಬೋರ್ಡಿ ನವರು ಬೀಳಗಿಯ ರಾ॥ ಶಿವಂಣ ಶಂಕರ ಹಬ್ಬು ಎಂಬ ಪದವ್ಲು ಆ ಸ್ಥಳದಲ್ಲಿ ನೇಮಿಸಿಕೊಂಡಿದ್ದಾರೆ. ರಾ॥ ಹಬ್ಬುರವರು ಕನ್ನಡ ಮಿಡ್ಲಿಂಗ್ಲಿ ಮುಂದೆ ಕಲಿತಿರುವ ದಿಲ್ಲ! ಇಂಗ್ಲಿವ ಕಲಿತಿದ್ದಾರೆಂದೂ ಅವ್ಯಕ್ತವೆ! ಮೊನ್ನೆ ಮೊನ್ನೆಯೇ ಅವರು ಕಾರವಾರ ಕನ್ನಡ ಶಾಲೆಯಲ್ಲಿ ಕಾರ್ಯಂ ಶಿಕ್ಷಕರಾಗಿ ನೇಮಾಸ್ಪಟ್ಟಿದ್ದಾರೆ. ಮೆಟ್ರಿಕ್ ಪಾಸಕ್ಕೆ ಕೊಟ್ಟಿ ಉಮೇದವಾರರು ಹೇರಳವಾಗಿ ಸಿಗುತ್ತಿರುವಾಗ, ಬೋರ್ಡಿನ ಕೈಕೆಳಗೆ ಹುದಿಯುತ್ತಿರುವ ಶಿಕ್ಷಕರಲ್ಲಾ ಕೂಡ

ನೆಬ್ರಿಕ ಆದ ಇಲ್ಲರ ನೆಬ್ರಿಕ ಸರಕ ಕಲಿಕ ಎಲ್ಲೋ ನುಂದಿ ಇರುತ್ತಿರುವಾಗ, ಅಪರಿಚಿತನ್ನೂ ನುನಿಕು ರು! ಹುಬ್ಬುರನರನ್ನೇ ಜೋರ್ತಿನವರು ಅರಿಸುವು ವಿಕ? ಅತಿಳಿತ ಕಥಿಕಾರಿಗಳ ಮನೆಯು; ಸುಳ್ಳಿನ ಮುಕ್ಕಾ ಪಿಕ್ಷಣ ಕೊಟ್ಟು ಮಕ್ಕಳಿಂದ ರಾಜ ಕಬ್ಬುರನ ಯೋಗ್ಯತೆ ನಿಗ ಅಯಿತೇನು? ಬೋರ್ಡಿನ ಕಚೇರಿಯಲ್ಲಿ ಕೂಲಂಕಷವು ತಮಗಿಂತ ವಯಸ್ಸಿನಿಂದಲೂ, ವಿದ್ಯೆಯಿಂದಲೂ, ಅನುಭವ ದಿಂದಲೂ- ಹಿರಿಯರಾದ ನೂರಾರು ಶಿಕ್ಷಕರಿಗೆ ಹುಕಾಮು ಗಳನ್ನು ಬರೆಯುವಷ್ಟು ಶಾಖೆಕೆ ಅವರ ಒಡಹುಟ್ಟಿದೇ ? ಮೇಲಧಿಕಾರಿಗಳು ಈ ಅವೇಮಾನಕರಮಾರಕತ್ವವ ಬ್ಯಾಕಿಯಾ ದಡೆಕಾಗಿ " ಅಜ್ಞೆಯಿಗೊಂಡರೆ ರೊಬ್ಬರು ಏನ್ನು ನಿಸುತ್ತಾರೆ

(ಖಾ. ೩೬-೯-೪೨) ಕಳೆದ ವಾರ ಇಲ್ಲಿ ಮಳೆ ದೀಪ ಲಿಲ್ಲ. ಒಳ್ಳೇ ದಿಪಾವಳಿ ಬೀಳುತ್ತಿತ್ತು. .

ಮ್ಯೂನಿಸಿಪಾಲಿಟಿಯವರು ಈ ತರಕಾರಿ ಡಬ್ಬಿತೆಂಗಿನೆಣ್ಣೆ ಯನ್ನೂ ೫೫ ಮಣ ಸಕ್ಕರೆಯನ್ನೂ ನೂರಾರು ನಾಣ್ಯಿಟಿ ನಾಣಿದಿವ್ಯೆ. ಆದರಿಂದ ಸಕ್ಕರೆ ಮತ್ತು ಎಣ್ಣೆ ಸಿಗುವದಿಲ್ಲೆಂಬ ಚಿಂತೆ ಪಡಿಸುತ್ತಿರುವ ಅಡಬ್ಬಗರಿಗೆ ಒಳ್ಳೇ ಅನುಕೂಲವಾಗಿದೆ ಕಳೆದ ಸಂತೆಯಲ್ಲಿ ಕುಡಗಿ ಅಕ್ಕ ನೂರಾಳ್ಳೆ ಬರಲಿಲ್ಲ ಅವ ನ್ನು ನೋಡಿ ಜೆಲ್ಲಾಧಿಕಾರಿಗಳು ನಂದಗಡ್ಡೆಯ ಅಂಗಡಿ ಕಾರರಿಂದ ೩೩ ಚೀಲ ಅಕ್ಕಿಯನ್ನು ಮ್ಯುನಿಸಿಪಾಲಿಟಿಗೆ ತೆಗೆ ಯಿಸಿ ಕೊಟ್ಟರು. ಆದರಿಂದ ಇಡಬಡ್ಡಿಗರಿಗೆ ಅಕ್ಕಿ ಸಿಕ್ಕಿತು. ದಿನಾಲೂ ನೂರಾರು ಬಡ ಜನರು ಮ್ಯುನಿಸಿಪಾಲಿಟಿಯು ಅಂಗಡಿಯಲ್ಲಿ ಮುಕ್ಕಾ ಕ್ಕಾರೆ. ಮ್ಯುನಿಸಿಪಾಲಿಟಿಯವರಿಂದ ಅವರಿಗೆ ಸಾಮಾನು ಪೂರೈಸಲು ಸಾಧ್ಯವಿಲ್ಲ. ಮ್ಯುನಿಯ ಜೊತೆಗೆ ಊರೊಳಗಿನ ಸಹಕಾರಿ ಸಂಸ್ಥೆಗಳೂ ಸೇರಿ ಸಕ ಳಿಸಿದರೆ ಮ್ಯುನಿಯ ಮೇಲಿನ ಭಾರ ಕಡಿಮೆಯಾಗುವಂತೆ.

ವ್ಯಾಪಾರಿಗಳು ತಮ್ಮ ನಿಗಾಕಿಗಳ ಹಿತವನ್ನು ಮರೆತು, ಕೇವಲ ಸ್ವಾರ್ಥವ ದೃಷ್ಟಿಯಿಂದ ತಮ್ಮ ಕಡೆಗಿದ್ದ ಸರಕು ಗಳನ್ನು ಮಾರಿಬಿಟ್ಟದ್ದು ಜಾಣತನವಲ್ಲ. ಅವು ಮುಂಬಯಿಯ ನಿರಡಿಗಳೂಡೆಯನು ಕೃತ್ರಿಮವಾಗಿ ಕೃತ್ರಿಮವನ್ನು ಮುಂಬಯಿಯ ನಿರಡಿಗಳೂಡೆಯನು ಕೃತ್ರಿಮವಾಗಿ ಕೃತ್ರಿಮವನ್ನು ಕೊಂಡು ತಮ್ಮ ನಿಗಾಕಿಗಳಿಗೆ ಸಕ್ಕರೆಯನ್ನು ಭಾರೀ ಸುಸಾ ನಿಸಾಟು ಮಾಡಿದ್ದಾರೆ. ಇಷ್ಟಲ್ಲ ವರ್ತಕರಂತೆ ತಮ್ಮ ಸರಕನ್ನು ಗುಪ್ತರೀತಿಯಿಂದ ರಪ್ತು ಮಾಡಿ ನಿಗಾಕಿಗರಿಗೆ ಕಷ್ಟವಲ್ಲಿ ನೆಷಿಯವಹಿಲ್ಲ.

ರಾಜಿ ಹುಬ್ಬಾನ ಹಳದೀಪುರೆಕರ ಮನೆಯಲ್ಲಿ ಕಳೆದ ಮಂಗಳವಾರ ಶ್ರೀ ಗಂಗಾಧರ ದೇವರ ರಂಗಪೂಜೆಯಾ ಯಿತು ಹರಿಪಿನೆ, ಹಾಡುಗರ ಕೋಲಾಟ. ಗಾಯನ, ವಾದನ ಮುಂತಾದ ಮನೋರಂಜನೆಯ ಕಾರ್ಯಕ್ರಮ ಗಳೂ, ಧೀಸತಾ ವಿಧಿನೋಗಗಳೂ ನಡೆದವು. ಬಹಳ ಜನರು ಈ ಉತ್ಸವಕ್ಕೆ ಬಂದಿದ್ದರು. ಮರುದಿನ — ಶ್ರೀ ಆವಂಕ ಗಳಿಯು ದಿನ— ಶ್ರೀ ಸುಂಬಳಿಧರ ದೇವರ ತ್ಸವನದ್ದೂಟ ಇಂತಾದೇ ಒಂದು ಉತ್ಸವವಾಯಿತು

ಮ್ಯೂರ್ಯಾಯರು ಶ್ರೀ ವಿಠೋಬ ದೇವರ ಗುಡಿಯ ಮುಂದಿನ ರಸ್ತೆಯ ಮೇಲಿನ ಸಾಲಮರಗಳನ್ನು ಕಡಿಸ ಬೇಕೆಂದು ನಿರ್ಣಯಿಸಿದ್ದಾರೆ! ಯಾವದೋ ಒಂದು ಲಜ್ಜಾಪ ಸುರವು ಗಾಳಿಯ ಪೆಟ್ಟಿಗೆ ಮುರಿದು ಬಿತ್ತೆಂದು, ಸಾಂತಕ್ಕರಿಗೆ ನೆರಳನ್ನು ತಂದಕ್ಕೂ ಪೂರೈಸಿ ಉಡಕಾರ ಮಾಡುವ ಇನ್ನಿತರ ವೃಕ್ಷಗಳನ್ನೂ ಕಡಿದೊಗೆಯುವ ನಿರ್ಣಾಯ ಮಾಡುವ ಅನುಮತಿಯನು ಎಷ್ಟರು ಜ್ಞಾನವನೆಂಬ ನಗರ ಸಭೆಯವರೇ ಲಕ್ಷರು! ಯಾರೋ ಕೆಲವು ಪುಂಡು ಪುಂಡಾಟಿಕೆ ನಡಿಸಿದ ಬಗ್ಗೆ ಪುಂಡಾಟಿಕೆಯಾದ ಭಾಗದ ನಿರಪರಾಧಿ ಜನತೆಯ ಮೇಲೆ ಸಾಮುದಾಯಿಕ ಪುಂಡುಗಂದಾಯ ಹೇರುವ ಈಗಿನ ಸರಕಾ ಪದ್ಧತಿಯನ್ನು ನಗರ ಸಭೆಯವರು ಅನುಕರಿಸಬಯಸುತ್ತಾರೆಯೇ ?

ಕೊಚ್ಚಿಯಲ್ಲಿ ಎಣ್ಣೆಯ ಧಾರಣೆ ತೀಜಿಯಾಗುತ್ತ ನಡೆದಿ ದೆಯಂತೆ. ಕೊಚ್ಚಿಯಲ್ಲಿ ಎಣ್ಣೆಯಿಂದ ಗೋವೆಯಲ್ಲಿ ಎಣ್ಣೆ ಅಗ್ಗವಿದೆ; ತೆಂಗಿನಕಾಯಿಯ ಧಾರಣೆಯೂ ಅಗ್ಗವೆಂಬು ಕಥಿಕಾರಿಗಳು ಗೋವೆಯಿಂದ ಎಣ್ಣೆ ತರಿಸುವ ವ್ಯವಸ್ಥೆ ಮಾಡುವದೊಳಿತು.

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇರುವ ವಿಕ್ಟೋರಿಯಾ, ಲಿಯಂ, ಶಂಡೆರಾಣಿ ಭಾವಚಿಯ ರೂಪಾಯಿ, ಘ ರೂಪಾಯಿ ಮತ್ತು ಗೋವಾ, ಅಲ್ವಾರ, ಕಾನೇರ ಸ್ಟೇಟಿನ ರೂಪಾಯಿ ಹಳಕು-ನೋಟು ಳು ವಗೈರೆ ಯೋಗ್ಯ ದರದಿಂದ ಕೊಳ್ಳಲ್ಪಡುವವು

ವಿ ಸ್ಕೂ ಸಪ್ಲಾಯ. ಏಜನ್ಸಿ, ಕುಮಟಾ.

ವಿವಿಧ ಸುದ್ದಿಗಳು.

(೦ನೇ ಪುಟದಿಂದ ಮುಂದರಿದ್ದು.)

ದೊಂದು ಗುಂಪಿಗೆ ಹತ್ತಿಕಾಳನ್ನು ತಲಲು ಉಗಿಬಂಡಿ ಯ ಡಬ್ಬೆಗಳನ್ನು ಪೂರೈಸಿತು. ಇದೇ ಗುಂಪಿನ ಒಬ್ಬ ವರ್ತಕರಿಗೆ ಹತ್ತಿಕಾಳನ್ನು ರಪ್ತು ಮಾಡಲು ಆಸ್ಪದ ಕೊಟ್ಟಿತು. ಹೀಗೇಕೆ ಮಾಡುತ್ತೀರೆಂದು ಸರಕಾರಕ್ಕೆ ಕೇಳಲು, ರಪ್ತು ಮಾಡಲು ಆಸ್ಪದ ಪಡೆದ ವರ್ತ ಕರು ರಪ್ತು ಮಾಡಿದವ್ದು ಸರಕಾರು ಅಮಯ ಮಾಡು ವ ಕರಾರು ಬರಕೊಟ್ಟಿರ್ದಾರಾಗಿ ತಿಳಿಸೋಣಾಯಿತು. ಸರಕುಗಳನ್ನು ಖರ್ಚು ಮಾಡುವದೂ ಖರ್ಚಾದ ಸರಕುಗಳನ್ನು ತರಿಸಿಕೊಳ್ಳುವದೂ ನ್ಯಾಪಾರ-ವ್ಯವ ಹಾರದ ಮುಖ್ಯ ಅಂಗ. ಹೀಗಿರುವಾಗ ಒಬ್ಬ ವರ್ತಕರಿಗೇ ಆಮದು-ರಫ್ತಿನ ಆನುಕೂಲತೆ ಮಾಡಿ ಕೊಡುವ ಕಾರಣವೇನೆಂದು ಪಂಘದ ಪ್ರಶ್ನೆ. ಜೋಳದ ದರ ಖಂಡಿಗೆ ರೂ. ೩೮ ಇರುವದು ಸಂಪ್ರದಾ ಯ. ನಿಜಾಮ ರಾಜ್ಯದಿಂದ ಮುಂಬಯಿಗೆ ವಿಪುಲ ಜೋಳ ಹೋಗುತ್ತದೆ. ಆ ಜೋಳವನ್ನು ಸರಕಾರವೇ ತರಿಸಿಕೊಂಡಿತು. ರೋಕ ವಿಕ್ರಯ ದರ ಖಂಡಿಗೆ ರೂ. ೫೭. ಕಿರಕೋಳ ವಿಕ್ರಯ ದರ ರೂ. ೬೦. ವರ್ತಕರು ಸರಕಾರದ ಲಾಭ ಬಡಕತನವನ್ನು ಸಿದ್ಧ ಪಡಿಸಿದ ಬಳಕ ಪಾಯ ಲಿ ೧೯೯ ಆಕೆಯಿಂದ ಆದು ೫೫ ಆಣೆಗೆ ದರ ಇಳಿ ಸಲ್ಪಟ್ಟಿತು. ನಿಜಾಮ ರಾಜ್ಯದಿಂದ ಮುಂಬಯಿಗೆ ಜೋಳ ತರಿಸಿದರೆ ಖಂಡಿಗೆ ರೂ. ೨೯-೩-೦ ಬೀಳು ತ್ತದೆ. ಸರಕಾರದ ದರ ಸಾಮಾನ್ಯವಾಗಿ ರೂ. ೪೨. ವರ್ತಕರಿಗೆ ಮುಂಬಯಿಯಲ್ಲಿ ಅಕ್ಕಿ ತರಿಸಲು ಅಪ್ಪ ಣೆಯಿಲ್ಲ. ಎಲ್ಲ ಅಕ್ಕಿಯನ್ನೂ ಸರಕಾರವೇ ತರಿಸುತ್ತ ದೆ. ಬೆಲ್ಲುವಾಡಾ ಕಡೆಯಿಂದ ಅಕ್ಕಿ ಬರುತ್ತದೆ. ಖರ್ಚು, ಸಾಮಾನ್ಯ ಲಾಭಗಳನ್ನೆಲ್ಲ ಆಕರಿಸಿದರೆ ಚೀಲಕ್ಕೆ ರೂ. ೧೪-೧೦-೦ ಬೀಳುತ್ತವೆ. ಸರಕಾರದ ದರ ಚೀಲ ೧ ಕ್ಕೆ ರೂ. ೧೫-೦-೦. ರೋಕ ವರ್ತಕರ ಕಡೆ ಅಕ್ಕಿಯೆಲ್ಲಿ! ಸರಕಾರವೇ ಅಕ್ಕಿಯ ದೊಡ್ಡ ವ್ಯಾಪಾರ ನಡಿಸಿ ಲಾಭ ಪಡೆಯುತ್ತಿದೆ! ಕಬ್ಬಿಯ ದರ ನಿಯಂತ್ರಣ ಶಾಸನದಂತೆ ಖಂಡಿಗೆಕ್ಕೆ ರೂ. ೫೪. ಕಡ್ಡೆಯಲ್ಲಿ ವಿವಿಧ ಜಾತಿಗಳವೆ. ಕನಿಷ್ಟ ತರಗ ತಿಯ ಕಡ್ಡೆ ಖಂಡಿಗೆ ರೂ. ೫೮ರಲ್ಲಿ ಸಿಕ್ಕ ಸಿಗುವದಿಲ್ಲ. ನಿಯಂತ್ರಣ ದರ ಎಲ್ಲ ಜಾತಿಯ ಕಡ್ಡೆಗಳಿಗೆ ಅನ್ವ ಯಿಸುತ್ತದೆ. ಉಚ್ಚ ಪ್ರತಿಯ ಕಡ್ಡೆಯ ಖಂಡಿಗೆಕ್ಕೆ ರೂ. ೭೦ ಬೀಳುತ್ತದೆ. ಸರಕುಗಳನ್ನು ತರಿಸಲಿಕ್ಕೆ ವರ್ತಕರಿಗೆ ಆನುಕೂಲತೆಯಿಲ್ಲ. ಗೋದಿ ತರಿಸಲಿಕ್ಕೆ ಮೇ ತಿಂಗಳಲ್ಲಿ ಅಪ್ಪಣೆ ಸಿಕ್ಕೆತ್ತು. ಉಗಿಬಂಡಿಯವರಿಗೆ ಡಬ್ಬೆಗಳನ್ನು ಪೂರೈಸಲು ತಿಳಿಸಲಾಗಿದೆಯೆಂದು ವರ್ತಕರಿಗೆ ಸರಕಾರವು ತಿಳಿಸಿತ್ತು. ಪಪ್ಪಂಬರ ತಿಂಗ ಳಾದರೂ ಇನ್ನೂ ಡಬ್ಬೆಗಳ ಪೂರೈಕೆಯಾಗಿಲ್ಲ.

ರುಕ್ಮರ ಅಭೂತಪೂರ್ವ ಆಭಾಟ!

(೫ನೇ ಪುಟದಿಂದ ಮುಂದರಿದ್ದು.)

ಕೆಂದು ಉಭಯ ಪಕ್ಷಗಳಲ್ಲಿ ಅಂದರೆ ಬ್ರಿಟಿಷ-ರುಕ್ಮ ರಿಗೆ ನಿಕ್ಕಿಯವಾಗಿರುವದೆಂದು ಆ ಹಿಂದೆ ಆದ ಬ್ರಿಟಿಶ-ರುಕ್ಮ ಒಡಂಬಡಿಕೆಯಲ್ಲಿ ಸ್ಪಷ್ಟವಾದ ಉಲ್ಲೇಖವಿದೆ. ೧೯೪೦ನೇ ಇಸವಿ ಕಳೆಯುತ್ತ ಬಂದ ರೂ ೨ನೇ ರಣರಂಗದ ಪ್ರಸಾಪ್ತಿಲ್ಲ. ಮಿತ್ರ-ಜನಾಂಗಗಳು ರುಕ್ಮರ ಪರಿಸ್ಥಿತಿಯನ್ನು ವಿಚಾರಿಸದೆ ಅಜಾಗ್ರತೆ ಮಾಡಿದರೆ ಪರಿಣಾಮ ನೆಟ್ಟಿಗಾಗಲಿಕ್ಕಿಲ್ಲವೆಂದು " ಮುಂಬಯಿ ಕ್ರೊನಿಕಲ " ಕರ್ತರ ಜುಬೋಣ. ೨ನೇ ರಣರಂಗವನ್ನು ಹೊಡಲು ಮಿತ್ರ-ಜನಾಂಗಗಳು ಏಕೆ ಕಮವಾನ ಮಾಡು ತ್ತಾರೆಂದು ನನಗೆ ತಿಳಿಯದಾಗಿದೆ. ಜರ್ಮನ ಸೈನಿ ಕರ ಹಿಂಭಾಗದಲ್ಲಿ ಬ್ರಿಟನ-ಅಮೇರಿಕೆಯವರು ಸೈನ್ಯ-ಪಥಕಗಳನ್ನು ಕಳುಹಿ ರುಕ್ಮರ ಮೇಲಿನ ದೃಷ್ಟಿ ಯನ್ನು ಹಿಂಗಸೆದುಕೊಂಡತಸಗಳ ಈವಾಗ ಬಳಿಗಾಲ ವಿಲ್ಲೆಂಬ ಮಾತು ಸಿದ್ಧವಾಗದುನಾಗ, ಮಿತ್ರ-ಜನಾಂಗಗಳ ಮನಸ್ಸು ಜೋಕಾಲಿ ಹೊಡೆಯುತ್ತಿರುವ ಕಾರಣ ತಿಳಿಯದೆ ಜನರು ದಿಙ್ಮೂಢರಾಗಿದ್ದಾರೆ.

ಸ್ಥಳಿಕ ವಿಷಯಗಳು.

(೫ನೇ ಪುಟದಿಂದ ಮುಂದರಿದ್ದು.)

ಮಾಡಿದೆ. ಘಟ್ಟದ ಕೆಳಗಿನ ಪ್ರದೇಶದ ಸ್ಥಿತಿಯಾದ ರೂ ಇದೇ ಪ್ರಕಾರದ್ದಿದೆ. ಆಕರಸಿದ ತೀರ್ಮಯನ್ನು ತುಂಬುವ ಕಾಲದಲ್ಲಿ ಜನರಿಗುಂಟಾಗುವ ತೊಂದರೆ ಗಳನ್ನು ವರ್ಣಿಸಿ ತೀರದು. ಇಂಧ ಪ್ರಸಕ್ತಿಯಲ್ಲಿ ಲೋಕಲ್ಬಂಡನ್ನು ವಿರಿಸುವ ವಿಚಾರವಿನ್ನು ಜಿಲ್ಲಾ ಬೋರ್ಡಿನ ಸಭಾಸದರು ಮೂಡತಕ್ಕ ದ್ದಲ್ಲ. ನಮ್ಮ ಕೈಯಿಂದ ನಾವು ನಮ್ಮ ಕಾಲ ಮೇಲೆ ಕೊಡಲಿ ಹಾಕಿಕೊಳ್ಳುವದು ಬೇಡ. ಬೋರ್ಡಿನ ಸಾಂಪತ್ತಿಕ ಸ್ಥಿತಿ ಸುಧಾರಿಸುವ ಹೊಜೆ ಬೋರ್ಡಿನ ಮೇಲಿದ್ದಂತೆ ಬೋರ್ಡಿನ ಪಾಲನೆಯನ್ನು ವಹಿಸಿ ಕೊಂಡ ಸರಕಾರದ ಮೇಲೂ ಇರುವದು. ಪ್ರಾಥ ಮಿಕ ವಿಕ್ಷಣದ ಹೊಣೆಯನ್ನು ಸರಕಾರವು ತಪ್ಪಿಸಿ ಕೊಂಡು, ಬೋರ್ಡಿನ ಮೇಲೆ ಅದನ್ನು ಹೊರಿಸಿ, ಬೆಳೆ ಯುತ್ತಿರುವ ಪ್ರಾಥಮಿಕ ವಿಕ್ಷಣ ಖರ್ಚಿಗಾಗಿ ಲೋಕ ಲ್ಬಂಡನ್ನು ವಿರಿಸಿಕೊಳ್ಳುವದು ಪ್ರಕ್ರತ್ಯಲ್ಲ. ಸರ ಕಾರದಕಡೆ ಆಧಿಕಾರಬಲವಿದ್ದದ್ದನ್ನು ಎಲ್ಲರೂ ಬಲ್ಲರು. ಸರ್ವಪರಿಯಿಂದಲೂ ಬೋರ್ಡು ಸರಕಾರಕ್ಕೆ ಅಧೀ ನವಾದ ಸಂಸ್ಥೆ. ಆದನ್ನು ಉದ್ಧರಿಸುವದೂ ಕೆಡಿಸು ವದೂ ಸರಕಾರವ ಕೈಯ್ಯಲ್ಲುಂಟು. ನಮ್ಮ ಜಿಲ್ಲೆಯ ಮೆತ್ತು ಬೋರ್ಡಿನ ವಿತಿಸ್ಥಿತಿಯನ್ನು ಸಮಾ ಲೋಚಿಸಿ ಸರಕಾರವು ತಕ್ಕ ಪರಿಹಾರ ಕೊಡಬೇ ಕೆಂದು ಸಭಾಸದರು ಸರಕಾರಕ್ಕೆ ಅರಿಕೆ ಮಾಡಿಕೊ ಳ್ಳಬೇಕು. ಹೊರಕು ಗಾಬರಿಯಿಂದ ಲೋಕಲ್ಬಂಡ ನ್ನು ವಿರಿಸಿಕೊಳ್ಳಲಿತ್ತಿಸಬಾರದು.



NOTICE.

Owners of motor vehicles bearing regional numbers whose tax discs expire on 30—9—42 are requested to pay tax for the next quarters or quarter before 15—10—42. Tax may be paid (*i*) in cash at this office or at the Camp of the Inspectors of motor vehicles, given below, (*ii*) in Treasuries or Sub Treasuries by chalan and (*iii*) by cheques ***drawn on a bank which has a clearing account with the branch of the Imperial Bank of India at Belgaum***

2 Special attention of the tax payers is drawn to Rule 10 (f) of the B M V. Tax Rules 1940 whereby they are required to send the duplicate copy of the chalan to this office along with the registration certificate

3 When payment is made in cash the Registration certificate of the vehicle must be produced, otherwise tax will not be accepted

4 Insurance policies in respect of heavy transport vehicles must be produced when tax is tendered or if it is paid by chalan, they must be sent along with the registration certificate Receipt of premium only will not be accepted unless it is accompanied by a cover note giving full particulars

5 Intimations of non use will not be accepted unless proportionate petrol ration coupons are surrendered

6 The programme of the M V Inspectors is as follows —

Inspector of M. Vs.
(Dharwar Karwar Division)

Dharwar	2nd & 3rd	Tax collection
Hubli	4th to 6th	Tax collection
Gadag	7th & 8th	Tax collection
Transit	9th	
Haveri, Ranebennur, Byadgi	10th & 11th	
Transit	12th	
Sirsi	13th	Tax collection
Transit	14th	
Kumta	15th & 16th	Tax collection on 15th
Transit	17th	
Karwar	18th & 19th	Issue of discs on the strength of chalans
Transit	20th & 21st	
Nipani	22nd & 23rd	

N B Motor Vehicles Inspection only at Nipani

Inspector of Motor Vehicles
(Bijapur-Ratnagiri Division)

Vengurla	28th	Tax collection
Malwan	29th	
Phondra	30th	
Transit	1st & 2nd Oct	
Ratnagiri	3rd, 4th & 5th	Tax collection
Chiplun	6th	Tax collection
Transit	7th & 8th	
Bijapur	9th 10th & 11th	Tax collection
Transit	12th	
Muddebihal	13th	
Bagalkot	14th & 15th	Tax collection
Transit	16th	

No 7761 5-N/KR
BELGAUM
21—9—1942

M. SHARIFF KHAN,
Regional Transport Officer,
Karnataka Region, BELGAUM

ಎಲ್ಲಾ ತರಹದ ಗಂಡಸರ ಮತ್ತು ಎಲ್ಲ ವಯಸ್ಸಿನವರ ಪೌರುಷಕ್ಕೆ ಕುಂದು ಬರುವ ಯಾವುದೇ ಹೊಸ ಸ್ವಾಧೀನಗಳು ಬೇಕಾದಲ್ಲಿ ದರದಿಂದ ಬದಲು ನನಗೆ ಮಾಡಿಕೊಂಡಲ್ಲಿ ಸುಖವು

ಎಸ್. ಎಲ್. ಪಾಟೀಲ್, ಸಿರಸಿ

ಜ್ವರಕ್ಕೆ ಉಪಯೋಗಿಸಿರಿ

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್,

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇಷ್ಟು ಇದರ ಕಂತಿನ ದರಗಳೂ, ಕಛೇರಿಗಳೂ ಬಹಳ ನೋಯಿಂಪವು ಇದೆ ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ ಇಂಡಿಯನ್ ಪ್ರಸ್ಸ್ ಎಕ್ಸಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ಮೆರುಪಾರಿಗೆ ಅತಿಕಯ ಲಂಭರವಾಗಿದೆ

ಸವಿಸ್ತರ ವಾರ್ತಿಕ ಸ್ಥಳಿಕ ವಿಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೇಳಿಸಿ ವಿಳಾಸಕ್ಕೆ ಬರೆದಲ್ಲಿ ಕಳಿಸಲಾಗುವದು.

Kumta Agents
D K Nayak Bros
K N Nayak
Honavar Agent
R V. Prabhu

K. Padmanabha Rao & Sons,
BELGAUM
Chief Agents for
Karnatak Districts & S M States

ಇದನ್ನು ನಾಂಡುರಂಗ ಕೃಷ್ಣ ಶಾನಭೋಗ (ಸಂಪಾದಕ) ಇವರು ತನ್ನ ಸ್ವಾಧೀನ ಆಫ್ ಕನ್ನಡ ಪ್ರಸ್ಸಿ ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 5th October, 1942

ವರ್ಷ ೨೫

ಪತ್ರದ ವರ್ಗಣೆ

ಕುಸುಟೆಯಲ್ಲಿ ಮುಂಗಡ ರೂಪಾಯಿ ೨-೪-೦
ಮುನಿಯಾರ್ಡರಿನಿಂದ ರೂ. ೩-೧-೦.
ವ್ಹಿ ಪಿ ಅಂಚೆವೆಚ್ಚ ಸೇರಿ ರೂಪಾಯಿ ೩-೪-೦
ಬಿಡಿ ಸಂಚಿಕೆಗೆ ೦-೧-೦
ದಲೇ ಸಂಚಿಕೆಗೆ ೦-೨-೦

ಕಾನಡಾವೃತ್ತ.

THE KANARA NEWS

ಸರ್ವಪ್ರಜಾಹಿತಕರ್ತಾ ಶ್ರೇಷ್ಠಾ ಯಾತಿ ಲೋಕೇ ಜನಪಹಿತಕರ್ತಾ ಶ್ಲಾಘ್ಯತೇ ಧಾರ್ಮಿಕೈಶ್ಚ.
ಇತಿ ಮಹತಿ ವಿರೋಧೇ ವರ್ತಮಾನೇ ಸಮಾನೇ ನೃಪತಿಜನಪದಾನಾಂ ರುಚ್ಯಮೇ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೪

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಮರಾಠಿ ಯಾವ (೧೫ ಎಮ್ ೯ ಸ್ಪ) ೪ ಸಾಲುಗಳವರೆಗೆ ರೂ 1-8 0 ಆನಂತ್ರ ಪ್ರತಿಸಾಲಿಗೆ 0 3 0

ಹತ್ತಿಂಗಡ ಸಾಲು ಎಷ್ಟು ಕೊಷ್ಟಕವಿರುವದೋ ಆ ಮಾನದಿಂದ ಅಷ ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಜಾಗೆ ಪತ್ರಕರ್ತರ ಯಾ ಸಮಿತಿಯ ತೀರ್ಮಾನದ ಮೇಲೆ ಸಲ್ಲಬಹುದು

(ಕುಮಟಾ— ಸೋಮವಾರ, ತಾರೀಖು ೫ ನವಾಹೆ ಅಕ್ಟೋಬರ ಸನ್ ೧೯೪೨ನೇ ಇಸವಿ)

ವಿವಿಧ ಸುದ್ದಿಗಳು.

ಈ ಯುದ್ಧದಲ್ಲಿ ಆಪತ್ಸಾಹಕ್ಕೆಂದಾರ ಹಿಂದೀ ಸೈನಿಕರ ಸಂಖ್ಯೆ ೨೨ಸಾವಿರ ಅವುಗಳಲ್ಲಿ ಮಡಿದವರು ೨೦೯೬, ತಾಯಹಟ್ಟವರು ೬೯೮೧, ಯುದ್ಧಕೈದಿಗಳಾಗಿದ್ದವರು ೬೪೫೫. ಇದರಲ್ಲಿ ಕಾಣೆಯಾದವರ ಲೆಕ್ಕ ವಿಲ್ಲ ಇಜಿಪ್ತದಲ್ಲಿ ೧೩೫೫ ಜನರು ಕಾಣ, ಸುಡಾನ, ಎರಿಟ್ರಿಯಾಗಳಲ್ಲಿ ೬ ಜನರು ಕಾಣ, ಇರಾಕ ಇರಾಣಗಳಲ್ಲಿ ೪ ಜನರು ಕಾಣೆ, ಬ್ರಹ್ಮದೇಶದಲ್ಲಿ ೨೩೭೭ ಜನರು ಕಾಣೆ ಮಲಯದಲ್ಲಿ ೭೦೦೦ ಜನರು ಕಾಣೆ, ಹಾಂಗಕೋಂಗದ ೪೧೭೧ ಜನರು ಕಾಣ, ಹೀಗೆ ೧ ಲಕ್ಷಕ್ಕೆ ಮಿಕ್ಕಿದ ಹಿಂದೀ ಸೈನಿಕರ ಪತ್ತೆಯೇ ಇಲ್ಲ!

ಪಂ॥ ಜವಾಹಿರಲಾಲರವರನ್ನು ಪೂರ್ವ ಆಫ್ರಿಕೆಗೆ ಒಯ್ದು ಕರತ್ತಾರೆಂದು ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸಲು, ಆವರು ಹಿಂದುಸ್ಥಾನದಲ್ಲೇ ಇದ್ದಾರೆಂದೂ ಹಿಂದುಸ್ಥಾನದಲ್ಲಿರುವ ವೈಸ್ರಾಯ್ ಸಾರ್ವೀಶ ಮಾಡಬರುವದಿಲ್ಲವಾಗಿಯೂ ಭಾರತ ಮಂತ್ರಿ ಮಿ॥ ಎಮರಿಯವರು ನುಡಿದರು! ಪಂ॥ಜವಾಹಿರಲಾಲರುತಮ್ಮ ಮಗ್ಗಾದ ಇಂದಿರೆಗೆ ಬರೆದ ಒಂದು ಪತ್ರ ಅಲಾಹಾಬಾದಕ್ಕೆ ಸದ್ಯಕ್ಕೆ ತಲ್ಪಿರುತ್ತದೆ ಪತ್ರದ ಮೇಲೆ ಎಲ್ಲಿಂದಲೋ ಹಿಂದುಸ್ಥಾನದಿಂದ ಎಂಬ ಶುಲ್ಕೀಲವುಂಟು!

ಸಂಕ ಮುರಿದ ಬಗ್ಗೆ, ಸರಕಾರಿ ಆಸ್ತಿಗಳನ್ನು ನಾಶಪಡಿಸಿದ ಬಗ್ಗೆ ಸಾವಿರಗಟ್ಟಲೆ ರೂಪಾಯಿಗಳ ಸಾಮೂಹಿಕ ದಂಡ ಹೇರ್ಪಡುತ್ತದೆ ಈ ದಂಡವನ್ನು ಮುಸಲ್ಮಾನರು ವಸೂಲ ಕೊಡತಕ್ಕದ್ದಲ್ಲವಂದಿಷ್ಟೇ ಅಪವಾದ ಹಾಕೋಣಾಗಿತ್ತು ಈಗ ಅವರ ಜೊತೆಗೆ ಅಷ್ಟೃಶ್ಯರೂ ಹಿಂದೀ ಕ್ರಿಶ್ಚನ್ನರೂ ಆದನ್ನು ತೆರತಕ್ಕದ್ದಲ್ಲವಾಗಿ ಮುಂಬಯಿ ಸರಕಾರವು ಹುಕುಮು ಹೊರಡಿಸಿದೆ!

ಸೊಲ್ಲಾಪುರ ಜಿಲ್ಲೆಯ ಕರಮಲಾ ತಾಲ್ಲೂಕಿನಲ್ಲಿ ಶಾಲೆಗೆ ಬೆಂಕಿ ಹತ್ತಿ ಶಾಲೆ ಸುಟ್ಟುಹೋಯಿತು ಶಾಲೆಯಲ್ಲಿರುವ ಮಹಾತ್ಮರ ಭಾವಚಿತ್ರಕ್ಕೆ ಮಾತ್ರ ಬೆಂಕಿ ಸೋಂಕಲಿಲ್ಲವಂತೆ!

ಬಂಗಾಲದೊಳಗಿನ ಡಾಕಾ ಮತ್ತು ಬರ್ದಾಮುವರ ಜೈಲುಗಳಲ್ಲಿ ಕೆಲವು ಕೈದಿಗಳಿಗೆ ಜೈಲ ಅಧಿಕಾರಿಗಳು ಗುಂಡು ಹಾಕಿ ಕೊಂದರು ಈ ಕೈದಿಗಳು ನಮ್ಮ ದೊರುಗರನ್ನು ಜೈಲ ಅಧಿಕಾರಿಗಳಿಗೆ ಅರಿಕೆ ಮಾಡಿಕೊಂಡು ಬೇಸರಪಟ್ಟರು ಕೊನೆಗೆ ನಿರುಪಾಯವಾಗಿ ಅಗಸ್ಟ ತಾ ೧೫ನೇಗೆ ಕೈದಿಗಳು ಕೆಲಸ ಮಾಡಲು ಒಡಂಬಡಲಿಲ್ಲ ಆದರಂದ ಜೈಲ ಸುರಿಂಟೆಂಡೆಂಟರು ಅವರ ಮೇಲೆ ಗುಂಡು ಹಾರಿಸಲು ಆಪ್ಪಣೆ ಕೊಟ್ಟರು ೮೦ ಜನರು ತೀರಿಕೊಂಡರು ೬೦೦ ಜನರು ಗಾಯಗೊಂಡರು ಗುಂಡು ತಪ್ಪಿಸಿಕೊಳ್ಳಲು ಕೆಲವರು ಮರ ಹತ್ತಿದ್ದರಂತೆ ಅವರಿಗೆ ಪಟ್ಟಗಳಿಗೆ ಹೊಡೆಯುವಂತೆ ಗುಂಡು ಹಾಕಿ ಹೊಡೆದರಂಬ ಬಂಗಾಲ ಕಾಯಿದೆ ಮಂಡಳದಲ್ಲಿ ದೂರು ಬಂದದ್ದರಿಂದ ಚೌಕಶಿ ಮಾಡಲು ಒಂದು ಮಂಡಳ ನೇಮಿಸೋಣ ನಿದೆ

ಇಂದೂರಿನ ಮಹಾರಾಜರು ಅಸ್ವಾಸ್ಥ್ಯದ ಮೂಲಕ ಅಮೆರಿಕೆಗೆ ಹೊರಟಿದ್ದಾರೆ ಇದು ರಾಜಕೀಯ ಅಸ್ವಾಸ್ಥ್ಯವಂತೆ! ಮಹಾರಾಜರು ರಾಜ್ಯಸುಧಾರಣೆಗಾಗಿ ಚಳವಳ್ಳನದಿಸಿದ್ದರಾಗಿಯೂ ಅದರಿಂದ ಸಾರ್ವಭೌಮ ಸರಕಾರವು ಸಿಟ್ಟು ಮಾಡಿ ಮಹಾರಾಜರಿಗೆ ಆಮೇರಿಕೆಗೆ ಪಯಣ ಮಾಡಲು ವಿಧಿಸಿರಕಾರಿಯಾಗಿ ಹೇಳುತ್ತಾರೆ

ಬಿಹಾರ ಪ್ರಾಂತದ ಗಿರಿಡಿ, ಧಾಗಲಪುರ, ಕೃಷ್ಣನಗರ, ಮಹೇಶಕುಂತ, ಗಾಲಚರ ಈ ಹಳ್ಳಿಗಳ ಮೇಲೆ ವಿಮಾನಗಳೊಳಗಿಂದ ಬಾಂಬುಗಳನ್ನೊಗೆದು ಜನಸಂಚಣೆಯನ್ನು ಚದರಿಸಲಾಯಿತಾಗಿ ದಿಲ್ಲಿಯೊಳಗೆ ಸಾರಿದ ಹಿರಿಯರ ಸಭೆಯಲ್ಲಿ ಸರ್ ಫ್ರಾಪ್ಟೆಯವರು ತಿಳಿಸಿದರು

ಸಿಂಧ ಪ್ರಾಂತದ ಹೈದರಾಬಾದ್‌ದೊಳಗಿನ ಸರಕಾರಿ ವೈದ್ಯಶಾಲೆಯಲ್ಲಿ ಗಾಂಧಿ-ಟೊಪ್ಪಿಗೆಗಳನ್ನು ಧರಿಸಿ ಶಾಲೆಗೆ ಬರಬಹುದೆಂದು ಅಪ್ಪಣೆಯಾಗಿದೆ ಈ ಕುರಿತು ಪೂರಿಂಟೆಂಡಂಟರು ಹೊರಡಿಸಿದ ಹುಕುಮು ತಪ್ಪು ಗ್ರಹಿಕೆಯದಂತೆ

ಉಗಿಓಡಿಯಲ್ಲಿ ನಿರ್ಮಾರಣ ಸೆರಪಳಯನ್ನು ಎಳೆದು ಉಗಿಬಂಡಿಯ ಸ್ಪೃ ನಿಲ್ಲಿಸಿದ ಬಗ್ಗೆ ಮದ್ರಾಸ ಪ್ರಾಂತದೊಳಗಿನ ಚಿಂಗ್ಲಗಿರಿಯ ಮೆಜ್ಜೇಟಿಯು ಇಬ್ಬ ಹುಡುಗರಿಗೆ ೬ ಛಡುಕ ಏಟುಗಳ ಶಿಕ್ಷ ವಿಧಿಸಿದ್ದಾರೆ ಛಟಕಿ ಶಿಕ್ಷೆ ಸುಧಾರಿಸಿದ ರಾಜ್ಯಭಾರದಲ್ಲಿ ಮೊನ್ನೆ ತೆಯಿಲ್ಲ ಅದು ಕಾಡು ಶಿಕ್ಷೆಯೆಂದು ಹೇಳಿಕೊಳ್ಳಲ್ಪಡುತ್ತದೆ

ಬಂಗಾಲ ಪ್ರಾಂತದ ಮೈಮನಸಿಂಗದಲ್ಲಿ ಚಿಲ್ಲರೆ ನಾಣ್ಯಗಳು ಸಿಗುವದಿಲ್ಲ ಆದರಿಂದ ಜನರು ಟಪಾಲ ತಿಕೀಟುಗಳನ್ನು ಕೊಟ್ಟು ಚಿಲ್ಲರೆ ವ್ಯವಹಾರವನ್ನು ಸಾಗಿಸಿಕೊಳ್ಳುತ್ತಾರೆ!

ಒಡಿಸಾ ಪ್ರಾಂತದ ಮುಖ್ಯ ಮಂತ್ರಿಗಳು ದಿವಾನ್‌ಎ ಮಿಡಿ ಮಹಾರಾಜರು ದಿಲ್ಲಿಗೆ ಹೋಗಿ ಬಂದರೆ ಹಿಂದುಸ್ಥಾನದೊಳಗುಂಟಾದ ತೊಡಕನ್ನು ಬಗೆಹರಿಸುವ ಆಲೋಚನೆಗಾಗಿ ಅವರು ಸವಾರಿ

(ಉಳಿದ ಸುದ್ದಿ ಮುಂದುವರಿದೆ)

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೆಂಚ ಆಫೀಸುಗಳು ಅಂಕೋಲಾ ಬೆಳಗಾಂವ, ಕುಂದಾಪುರ ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ರೇವುಗಳು, ಸೇವಿಂಗ್ಸ ಬೇಂಕ್ ರೇವುಗಳು ಮತ್ತು ಚಾಲು ರೇವುಗಳು ಸಹ ಅಂಗೀಕರಿಸಲ್ಪಡುವವು.

ಛಂಬಾರದ ದಾಗಿನೆಗಳ ಮತ್ತ ಇತರ ವ್ಯಾಪಾರದ ಮ್ಹಾಲುಗಳ ಅಡವಿನ ಮೇಲೆ ಸಲಕ್ತಿನ ದರದ ಬಡ್ಡಿಯಲ್ಲಿ ಎಂಥ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚಕ್ಕುಗಳು ಸಹೀಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸಲಕ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-10-1942

The Agricultural & Industrial Bank, Ltd

ಸ್ಥಳಿಕ ವಿಷಯಗಳು.

ಲೇಖಕ:— ಸ್ಥಳವಂತಿಕ.

ಆಹಾರ ಸಾಮಗ್ರಿಗಳನ್ನು ಬೇಕಾಬಿಟ್ಟಿಯ ವಿಷಯವಲ್ಲಿ ಕುಮ್ಮಯೊಳಗೆ ಕಳೆದ ವಾರ ನಡೆದ ಸಭೆಯ ನ್ಯಾತ್ಮಾಂತವನ್ನು ಪರಾಂಬರಿಸಬಹುದು ಒಕ್ಕಲತನದ ಇಲಾಖೆಯ ರಾ॥ ಹಬ್ಬು, ರಾ॥ ವಾಟಣಕರ, ರಾ॥ ಧಾರೇಶ್ವರ ಮೊದಲಾದವರು ಭತ್ತ, ದ್ವಿದಳ ಧಾನ್ಯ, ಕಾಯಿಪಲ್ಲೆ ಮೊದಲಾದವುಗಳನ್ನು ಬೆಳಸಿದರೆ ಖಂಟುಗುವ ಲಾಭಗಳನ್ನು ವಿವರಿಸಿದರು ಬರಗಾಲ ಗಡ್ಡೆಗೆ ಸಂಜೀವನಿ ಗಡ್ಡೆಯೆಂಬ ದೊಡ್ಡ ಸ್ತ್ರಿಕೆಯ ಹೆಸರು ಕೊಟ್ಟು, ಅದನ್ನು ಬೆಳಸಬೇಕಾಗಿ ರಾ॥ ಧಾರೇಶ್ವರರು ನುಡಿದರು ದ್ವಿದಳ ಧಾನ್ಯಗಳನ್ನು ಬೆಳಸುವದರಿಂದ ಗಡ್ಡೆಗೆ ಗೊಬ್ಬರ ಸಿಗುತ್ತದೆಂದೂ ದ್ವಿದಳ ಧಾನ್ಯಗಳ ರಕ್ಷಣೆ ಬೇರಿನಿಂದಲೂ ಪಸಲೆಯೇಗಿನ ನ್ಯಾಬ್ಯೂಜನ ದ್ರವ್ಯ ಹೀರಿಕೊಳ್ಳಲ್ಪಡುತ್ತವೆಂದೂ ಅದರಿಂದ ಭತ್ತದ ಬೆಳವಣಿಗೆಗೆ ಪೋಷಕವಾಗುತ್ತದೆಂದೂ ಬೇಸಾಯ ಇಲಾಖೆಯ ಅಧಿಕಾರಿಗಳ ಹೇಳಿಕೆ. ಬರಗಾಲ ಗಡ್ಡೆಯೆಂದು ಹಿಯಾಳಿಸಬಾರದು. ಮಲಬಾರದಲ್ಲಿ ದೊಡ್ಡದೊಡ್ಡ ಶ್ರೀಮಂತರು ಇವನ್ನು ರುಚಿಯಿಂದ ತಿನ್ನುತ್ತಾರೆ, ಹೀಗೆ ಸಭಾಧ್ಯಕ್ಷರು ಉದ್ಗರಿಸಿ, ಬರಗಾಲಗಡ್ಡೆಯ ಕುರಿತು ಪ್ರಚಾರ ಮಾಡಿದರು ಶ್ರೀಮಂತರು ಒರಗಾಲ ಗಡ್ಡೆಯನ್ನು ತಿನ್ನುತ್ತಾರೆಂಬ ಸಂಗತಿ ಕೇಳಿ ದೊಡ್ಡವರ ದೊಡ್ಡಸ್ತಿಕೆಯ ಮರ್ಮ ಇದರಲ್ಲೇ ಉಂಟೆಂದು ಹಲವರು ತಿಳಿಕೊಂಡರು. ಆದರೆ ಬರಗಾಲಗಡ್ಡೆಯನ್ನು ತಿಂದು ಜೀವಿಸುವ ಬಗ್ಗೆ ಪ್ರಚಾರ ಅನವಶ್ಯಕ.

ರಾ॥ ಹಬ್ಬು ಮೊದಲಾದ ಬೇಸಾಯ ಇಲಾಖೆಯವರು ಆಹಾರ ಸಾಮಗ್ರಿಗಳನ್ನು ಬೆಳಸಬೇಕೆಂದು ಭಾಷಣ ಮಾಡಿ ಸಮಾಧಾನಪಟ್ಟರೆ ಅವರ ಕರ್ತವ್ಯ ಮುಗಿಯಿತು. ಗ್ರಾಮದಲ್ಲಿ ಪಟೇಲರಿದ್ದಾರೆ; ಅವರು ಜನ-ಪ್ರತಿನಿಧಿಗಳು; ಶಾನಭೋಗರಿದ್ದಾರೆ, ಅವರು ಸರಕಾರದ ಪ್ರತಿನಿಧಿಗಳು, ಪತ-ಭೂಮಿಯ ಪಟ್ಟಿ ಗ್ರಾಮಸ್ಥರ ದಿಪ್ರದರ್ಶಕದ್ದೆ. ಅದನ್ನು ನೋಡಿಕೊಂಡು ಪಡ ಭೂಮಿಯನ್ನು ಸಾಗುವಳ ಮಾಡಿಕೊಂಡು ಜನರು ಪ್ರಯೋಜನ ಪಡೆಯಬೇಕು. ಎಲ್ಲರಿಗೂ ಬೀಜ ಪೂರೈಸಲು ಬೇಸಾಯ ಅಧಿಕಾರಿಗಳಿಗೆ ಸಾಧ್ಯವಿಲ್ಲ; ಜನರು ಅದನ್ನು ತಮ್ಮಪ್ಪಕ್ಕೆ ಪೂರೈಸಿಕೊಳ್ಳಬೇಕು; ಗ್ರಾಮದವರೊಳಗೆ ವಿವಾದವಿದ್ದಲ್ಲಿ ಅವನ್ನು ಅಧಿಕಾರಿಗಳ ಮುಂದೆ ತರದೆ ತಮ್ಮ ತನ್ಮೊಳಗೆ ಬಗೆಹರುಸಿಕ್ಕೊಳ್ಳಬೇಕು; ಹೀಗೆಲ್ಲ ಪರಸ್ಪರ ಆಹಾರ ಬೆಳವಣಿಗೆಯ ಹೊಸ ಕ್ರಮವನ್ನು ರಾ॥ ಹಬ್ಬು ಇವರು ಗಾಂಭೀರ್ಯದಿಂದ ಪ್ರತಿಪಾದಿಸಿದರು. ಉಪದೇಶಕರ ಅಭಾವದಲ್ಲಿ ಆಹಾರ ಬೆಳವಣಿಗೆಯ ಕ್ರಮ ನಡೆಯುವದಿಲ್ಲೆಂದು ರಾ॥ ಹಬ್ಬು ಮೊದಲಾದವರು ಎನೆಬಿದಂತೆ ತೋದುತ್ತದೆ. ಪರಸ್ಪರ ಉಪದೇಶದಿಂದ ಆಹಾರ ಬೆಳವಣಿಗೆಯಾಗುತ್ತಿದ್ದರೆ ಇಷ್ಟೊಜ್ಜಿಗೆ ನಮ್ಮಾ ಜಲ್ಲೆಯ ಸಮೃದ್ಧಿಯ ತವರಾಮನೆಯಾಗುತ್ತಿತ್ತು. ಹಡಬಿದ್ದ ಭೂಮಿಗಳು ಬಂಜರು ಉಳುಯುತ್ತಿರಲಿಲ್ಲ ಆಫೀಸರು ಮಾದರಿಗಾಗಿ ಕೊಟ್ಟ ಉದಾಹರ್ಣ ಉದ್ಯಾಧಕರಿದೆ. ಬೇಲಿಗೆ ಗುಟ್ಟಬೇಕಾದಿಬಿದಕ್ಕೆ ಆರ್ಜ ಮಾಡಿ ವನ-ಇಲಾಖೆಯಿಂದ ಅಪ್ಪಣೆ ಸಿಗುವ ತನಕ ಬೆಳೆ ಬೆಳೆಯುವ ಪ್ರಾಯ ಮುಗಿದು ಹೋಗುತ್ತದೆ. ಒಂದಾನೊಂದೆ ಸಿಕ್ಕಿದರೂ ಅದು ದಟ್ಟ ಅಡವಿಯೊಳಗಿಂದ ಕರೆಬೀಳಿಕೊಂದು ಅಪ್ಪಣೆಯಾಗುತ್ತದೆ ಸಮಾಸದ ಬೆಟ್ಟುಮೊಗಿಂದ ತರಲು ಸಿಕ್ಕ ಗುಟ್ಟಗಳು ಬೆಲೆಗೆ ಬರುವದಿಲ್ಲ, ಪಶು-ಪಕ್ಷಿಗಳ ಉಪದ್ರವವಿದೆ ಹೀಗೆಗೆ ವನ-ಇಲಾಖೆಯ ಅಧಿಕಾರಿಗಳೂ ವನ ಇಲಾಖೆಯ ಪ್ರದೇಶದಲ್ಲಿರುವ ಪಶು-ಪಕ್ಷಿಗಳೂ ಭೂಮಿ ಬೀಳು ಬೀಳಲು ಮುಖ್ಯ ಕಾರಣವೆಂದು ಆಕ್ಷೇಪಿಸಲು ಸ್ಪಷ್ಟವಾಗಿ ಹೇಳಿದ್ದನ್ನು ಬೇಸಾಯ ಇಲಾಖೆಯವರು ಪರಾಂಬರಿಸಬೇಕು. ಮನುಷ್ಯನು ಸ್ವಾಭಾವಿಕವಾಗಿ ಸ್ವಾರ್ಥಪರಾಯಣ ಪ್ರಾಣಿ. ಮಯೂರದೆಯಿಂದ ಜೀವನ ನಡಿಸಲು ಅವನು ಯಾವಾಗಲೂ ಪ್ರಯತ್ನಿಸುತ್ತಿರುತ್ತಾನೆ ಬೀಳು ಭೂಮಿಗಳನ್ನು ಸಾಗುವಳಿ ಮಾಡಿ ಲಾಭ ಪಡೆಯಲು ತಕ್ಕ ಅನುಕೂಲತೆಗಳಿದ್ದರೆ ಅವನು ಸುಮ್ಮನೆ ಕೂರುವವನಲ್ಲ. ಅನುಕೂಲತೆಗಳ ಅಭಾವದಲ್ಲಿ ಬಾಯಿ-ಪ್ರಚಾರದಿಂದ ಆಹಾರ-ಬೆಳವಣಿಗೆಯ ಕಾರ್ಯಕ್ರಮ ಸಾರ್ಥಕವಾಗದು.

ಬೇಸಾಯ ಅಧಿಕಾರಿಗಳಾದ ರಾ॥ ಹಬ್ಬು ಮೊದಲಾದವರು ನುಡಿದಂತೆ ನಮ್ಮಾ ಜಲ್ಲೆಯೊಳಗೆ ಬೇರೆ ಬೇರೆ ಭೂಪ್ರದೇಶದಲ್ಲಿ ಬೇರೆ ಬೇರೆ ಬೆಳೆಗಳನ್ನು ಕೊಳ್ಳಬರುತ್ತದೆ. ಜಮೀನಿನ ಸ್ಥಿತಿಗತಿಯ ಮೇಲಿಂದ ಕೃಷಿ ಇಲಾಖೆಯವರು ವರ್ಗೀಕರಣವನ್ನು ಮಾಡಬೇಕು ಅವಕ್ಕೆ ಸಂಕಲ್ಪಿತ ಬೆಳೆ ಬೆಳೆಸಲು ಇರುವ ಅನಾನುಕೂಲತೆಗಳನ್ನು ತಳಕೊಳ್ಳಬೇಕು; ಅವನ್ನು ಪರಿಹರಿಸುವ ಉಪಾಯಗಳನ್ನು ಕಂಡುಹಿಡಿಯಬೇಕು. ಈ ಕುರಿತು ಕಾರ್ಯಕ್ರಮವನ್ನು ತಯಾರಿಸಬೇಕು. ಪ್ರಚಾರ ಮಾಡುವಾಗ ಈ ವಿಷಯಗಳನ್ನು ಪ್ರತಿಪಾದಿಸಿ ಜನರಿಗೆ ನಡಾವಳಿಯನ್ನು ತಿಳಿಸಬೇಕು, ಹಣದ ಅನಾನುಕೂಲತೆಯಿದ್ದರೆ ತಗಾವಿ ಸಾಲಗಳನ್ನು ತತ್ಪರತೆಯಿಂದ ದೊರಕಿಸಿಕೊಡಬೇಕು, ಗೊಬ್ಬರ ಸೊಪ್ಪು, ಗುಬ್ಬ ಮೊದಲಾದ ಬೆಟ್ಟದ ಸಾಹಿತ್ಯಗಳನ್ನು ಒದಗಿಸಿಕೊಡಬೇಕು. ಬೀಜವನ್ನು ಪೂರೈಸಬೇಕು. ಇದೆಲ್ಲ ರಾ॥ ಹಬ್ಬು ಮೊದಲಾದ ಬೇಸಾಯ ಅಧಿಕಾರಿಗಳ ಕೆಲಸ. ರಾ॥ ಹಬ್ಬು ಮೊದಲಾದವರು ಕಾರ್ಯಕಾರಿ ಸಂಸ್ಥೆಗಳ ಅಧಿಕ ರಿಗಳು ಇವರು ಯೋಜನೆ ತಯಾರಿಸಿ, ಆ ಯೋಜನೆಯಂತೆ ಜನರಿಗೆ ನಡಿಸಿಕೊಂಡು ಜನರ ಕಡೆಯಿಂದ ಅದನ್ನು ವಾಲಿಸಿಕೊಂಡು ಜನರಿಗೆ ಪ್ರಯೋಜನ ದೊರಕಿಸಿಕೊಡುವವರು. ಜನರು ಸುಬಿಯಾಗಿದ್ದರೆ ಸರಕಾರ ಕೈ ಸುಟ್ಟುನೆಂದು ಎನಿಸಲ್ಪಡುತ್ತದಾಗಿ ರಾ॥ ಹಬ್ಬು ರವರು ಹೇಳಿದ್ದು ಸಮಯೋಚಿತವಾದದ್ದು. ಇದರಿಂದ ಜನಪದಕ್ಕೆ ಒಳ್ಳೇ ಸಮಾಧಾನವಾಗಿದೆ. ಯಾವ ನೇ ರಾಜ್ಯಭಾರದ ನ್ಯೂನ್ಯವೇ ಇದು. ಬ್ರಿಟಿಶ ರಾಜ್ಯ ಭಾರವಂತು ಸುಧಾರಿಸಿದ್ದು. ಅಂದ ಬಳಿಕ ರಾಜ್ಯಕರ್ತರು ಜನಸಹಕಾರ್ಯಕ್ಕಾಗಿ ಹೊಂಬಲಿಸುತ್ತಿರಬೇಕು ಪ್ರಕೃತ ಪ್ರಸಂಗ ಮಹಾಯುದ್ಧ ಪ್ರಸಂಗ. ಆಹಾರ ಸಾಮಗ್ರಿಗಳ ಪೂರೈಕೆ ಯುದ್ಧ-ಯತ್ನದ ಒಂದು ಅಂಗ. ಯುದ್ಧ-ಯತ್ನಕ್ಕಾಗಿ ನಮ್ಮ ಹಿಂದುಸ್ಥಾನ ಸರಕಾರವು ದಿನಂಪ್ರತಿ ೧॥ ಕೋಟಿ ರೂಪಾಯಿ ವೆಚ್ಚ ಮಾಡುತ್ತದೆಂದು ಪೇಳುತ್ತಾರೆ. 'ಆಹಾರ ಬೆಳವಣಿಗೆಯ ಕಾರ್ಯಕ್ರಮಕ್ಕಾಗಿ ನಮ್ಮಾ ಜಲ್ಲೆಯೊಳಗೆ ಸರಕಾರವು ೫ ವರ್ಷಗಳ ಮಟ್ಟಿಗೆ ೪-೫ ಲಕ್ಷ ರೂಪಾಯಿಗಳನ್ನಾದರೂ ಖರ್ಚು ಮಾಡಲು ಒಪ್ಪಿ ಒಂದು ಕಾರ್ಯಕ್ರಮವನ್ನು ತಯಾರಿಸಿದರೆ ಆಹಾರ ಸಾಮಗ್ರಿಗಳ ಬೆಳವಣಿಗೆಯ ಕಾರ್ಯಕ್ರಮ ಅನಪೇಕ್ಷಿತವಾಗಿ ಯಶಸ್ವಿಯಾಗುವದು ಖಚಿತ. ಕಾರ್ಯಕ್ರಮದ ಆದಾವದಲ್ಲಿ ಬೇಸಾಯ ಅಧಿಕಾರಿಗಳು ಪ್ರವಾಸದ ಆಯಾಸವನ್ನಾಗಲಿ ಖರ್ಚನ್ನಾಗಲಿ ಸಹಿಸುವದು ನಿರರ್ಥಕ

ವನ ಇಲಾಖೆಯ ರಾಜಕಾರಣವನ್ನು ಅಲಕ್ಷ ಮಾಡಿ ಬೇಸಾಯೋತ್ಪತ್ತಿಯ ವಿಚಾರವನ್ನಷ್ಟೇ ಹಿಡಿದು ವನ-ಇಲಾಖೆಯ ಚಟುವಟಿಕೆಗಳನ್ನು ಪರಾಂಬರಿಸಿದರೂ ವನ-ಇಲಾಖೆ ಕೃಷಿಕರ್ಮಕ್ಕೆ ಇನ್ನೂ ಸುಸ್ಥಪೂರ್ವಕವಾಗಿ ಒಡಂಬಡುವದಿಲ್ಲವೆಂದು ಸಿದ್ಧವಾಗುತ್ತದೆ. ದಟ್ಟಡವಿಯ ನೆರೆ-ಹೊರೆಯಲ್ಲಿ ಬೀಳು ಭೂಮಿ ವಿಪುಲವುಂಟು. ಪಟ್ಟಣಗಳ ನೆರೆ-ಹೊರೆಯಲ್ಲಿ ಆಣಿ, ಗುಂಠೆ ಕ್ಷೇತ್ರ ಪ್ರದೇಶಕ್ಕಾಗಿ ಬಡದಾಡಿಕೊಳ್ಳುವದಕ್ಕಿಂತ ಚಿಂದಾವರ, ಹೇಟಾ ಸೀಮೆಗಳಂಥ ಒಳ-ಪ್ರದೇಶಕ್ಕೆ ಹೋಗಿ ಎಕರೆಗಟ್ಟೆ ಪ್ರದೇಶವನ್ನು ಸಾಗುವಳಿ ಮಾಡಿ ಜನರು ಸಮೃದ್ಧಿಯಾಗಬಹುದೆಂದು ಉಪದೇಶ ಮಾಡುವವರು ಆ ಪ್ರದೇಶದ ಜನ-ವಿಮುಖ ಪರಿಸ್ಥಿತಿಯನ್ನು ಅಭ್ಯಾಸ ಮಾಡಿದ್ದು ತೋರುವದಿಲ್ಲ. ಆ ಪ್ರದೇಶಗಳಲ್ಲಿ ಜನ-ವಾಸ್ತವ್ಯಕ್ಕೆ ಅನುಕೂಲತೆಯಿದ್ದಿದ್ದರೆ ಜನರು ಆತ್ಮ ಕಡೆ ದೇಶಾಂತರ ಮಾಡಲು ಸಂತೋಷಪಡುತ್ತಿದ್ದರು. ಆ ಪ್ರದೇಶ ಕಾಡು ಪಶುಗಳ ಬೀಡು. ಜನ ವಾಸ್ತವ್ಯಕ್ಕೆ ವಿಮುಖ. ಬೇಸಾಯ-ಅಧಿಕಾರಿಗಳು ಆ ಪ್ರದೇಶವನ್ನು ಪ್ರತ್ಯಕ್ಷ ನೋಡಿಕೊಂಡು ಮನುಷ್ಯ ಪ್ರಸಂಚಕ್ಕೆ ಉಂಟಾಗಿರುವ ಅನಾನುಕೂಲತೆಗಳನ್ನು ವನ-ಇಲಾಖೆಯವರಿಂದ ಪರಿಹರಿಸಿಕೊಳ್ಳಬೇಕು. ಜನರು ಈ ಅಡಚಣಿಗಳನ್ನು ಹೇಳಿ ಹೇಳಿ ಬೇಸತ್ತಿದ್ದಾರೆ ಅಧಿಕಾರಿಗಳು ಇವನ್ನು ಹೇಳಿಕೊಂಡರೆ ಜಿಹಾರ-ಸಾಮಗ್ರಿ ಬೆಳವಣಿಗೆಯ ಆಂದೋಲನದಲ್ಲಿ ಅವುಗಳಿಗೆ ಬೆಲೆಯುಂಟು. ಸರಕಾರವು ಅವನ್ನು ಪರಿಹರಿಸಲು ಸಂತೋಷಪಡುವದು.

ಈ ಕಾರ್ಯಕ್ರಮದಲ್ಲಿ ಜನರ ಸಹಕಾರವನ್ನು ಪಡೆಯುವ ಕ್ರಮವುಂಟು. ಬೇಸಾಯ ಇಲಾಖೆಯವರು ವ್ಯಾಮುಖ್ಯನಾಗಿ ಒಳ-ಗ್ರಾಮಗಳಲ್ಲಿ ಗ್ರಾಮ-ನಿವಾಸಿಗಳ ಸಭೆ ಕರೆದು ಬೀಳು-ಪ್ರದೇಶವನ್ನು ಸಾಗುವಳಿ ಮಾಡಲು ಇರುವ ತೊಂದರೆಗಳನ್ನು ಕೇಳಿಕೊಳ್ಳಬೇಕು, ಅವುಗಳಿಗೆ ಆಧಾರವಿಷ್ಟೆಂಬ ದನ್ನು ತಿಳಿಕೊಳ್ಳಬೇಕು ನಿರಾಧಾರವಾಗಿದ್ದರೆ ಇಲ್ಲವೆ ಅಜ್ಞಾನದಿಂದ ಜನರು ವರ್ತಿಸುತ್ತಿದ್ದರೆ ಅವರಿಗೆ ಕಾರಣಗಳನ್ನು ತೋರಿಸಿ ಮನಸಾಣಿಸಬೇಕು; ಅನಾನುಕೂಲತೆಗಳು ನಿಜವಾಗಿದ್ದರೆ ಅವನ್ನು ಬಗೆಹರಿಸಲು ಉಪಾಯಗಳನ್ನು ಕೇಳಿಕೊಂಡು ಮೇಲಧಿಕಾರಿಗಳ ಕಡೆಗೆ ಅರಿಕೆ ಮಾಡಿಕೊಳ್ಳಬೇಕು. ಹೊರತು ಬೆಳಸಬಹುದಾದ ಬೆಳೆಗಳ ಪಟ್ಟಿಯೊಂದನ್ನು ಕೊಟ್ಟು ಪ್ರಚಾರ ಮಾಡಿ ಹಿಂತಿರುಗತಕ್ಕದ್ದಲ್ಲ "ಬೇಕಾದ್ದನ್ನು ಬೆಳಸಲಿ, ಬೇಡಾದ್ದನ್ನು ಬಿಡಲಿ. ಊದುವ ಶಂಖ ಊದಿಬಂದಿದ್ದೇನೆ, ಜನರು ತಿಳಿಗೇಡಿಗಳು; ನಾವು ಜಾಣರು' ಎಂಬ ಪ್ರವೃತ್ತಿಯಿಂದ ಯಾರಿಗೂ ಏನೂ ಪ್ರಯೋಜನವಾದದ್ದಿಲ್ಲ. ಅಜ್ಞಾನಿಗಳಿಗೆ ಜ್ಞಾನಿಗಳನ್ನಾಗಿ ಮಾಡಿ ಅವರಿಂದ ಇತ್ತ ಕಾರ್ಯವನ್ನು ಸಾಧಿಸಿಕೊಳ್ಳುವದೇ ಜಾಣರ ಕೆಲಸ.

* *

ಮ್ಯುನಿಸಿಪಾಲಿಟಿಗಳ ವಿದ್ಯುಮಾನ ಅಗ್ಗದ ಅಂಗಡಿಗಳನ್ನು ಹೊರಡಿಸುವದೊಂದು ಕಲ್ಪನೆ ನಡೆದಿದೆ. ಅಕ್ಕಿ, ಸಕ್ಕರೆ, ತೆಂಗಿನ ಎಣ್ಣೆ, ಬೆನಯಿ ಎಣ್ಣೆ ಇವೇ ಮುಖ್ಯವಾಗಿ ಈ ಅಂಗಡಿಗಳಲ್ಲಿ ಮಾರಾಟವಾಗುವವು ಬೆಣಚಿ ಎಣ್ಣೆಯ ಕುರಿತು ಹೆಚ್ಚಿನ ಕಷ್ಟವಿಲ್ಲ ಬೆಣಚಿ ಎಣ್ಣೆಯ ಕಂಪನಿಗಳು ಜಲ್ಲೆಯೊಳಗಿನ ತಮ್ಮ ವಿಜಂಟರಿಗೆ ಪ್ರತಿ ತಿಂಗಳ ಮೊಂಟದ ದಬ್ಬೆಗಳನ್ನು ನಿರ್ಣಯಿಸಿ ಕೊಡುತ್ತವೆ. ಆ ದಬ್ಬೆಗಳನ್ನು ತಮ್ಮ ಅಪ್ಪಣೆಯ ಹೊರತು ವಿಜಂಟರು ಯಾರಿಗೂ ಮೊಂಟು ಮಾಡಬಾರದೆಂದು ಜಿಲ್ಲಾಧಿಪರು ವಿಧಿಸಿದಂತಾಯಿತು. ತಮ್ಮ ಅಪ್ಪಣೆ

ಯುಂತೆ ಅವನ್ನು ಗಿರಾಕಿಗಳಿಗೆ ಮಾರಾಟ ಮಾಡ ತಕ್ಕಪ್ಪೆಂದು ಏಜಂಟರಿಗೆ ಮೇಲಪ್ಪಣೆ ಮಾಡಬೇಕು. ಈ ಡಬ್ಬೆಗಳನ್ನು ಅಗ್ಗದ ಆಂಗಡಿಗಳಿಗೂ ಹಳ್ಳಿಗಳಿಗೂ ಳಿಗನ ಲ್ಯಾಸೆನ್ಸುದಾರರಿಗೂ ಹೆಂಚಬೇಕು. ತೆಂಗಿನ ಎಣ್ಣೆ, ಅಕ್ಕಿ, ಸಕ್ಕರೆ ಇವುಗಳ ಲೆಕ್ಕವನ್ನು ವರ್ತಕರು ಪೂರೈಸುತ್ತಾರೆ. ಅವರಿಂದ ನಿಯಂತ್ರಿತ ಧಾರಣೆಯಿಂದ ಅವನ್ನು ಕೊಂಡುಕೊಂಡು ಅಗ್ಗದ ತಂಗಡಿಗಳಿಗೆ ಪೂರೈಸಬೇಕು. ಸಕ್ಕರೆ, ತೆಂಗಿನ ಎಣ್ಣೆಗಳನ್ನು ಹೊಸದಾಗಿ ತರುವ ಪ್ರಸಂಗವುಂಟು ತ ಪ್ರಕಾರ ಅವನ್ನು ತರಿಸುವ ಪ್ರಸಂಗದಲ್ಲಿ ಹೊಸ ದಾಗಿ ಧಾರಣೆ ನಿಶ್ಚಯಿಸಿ ಕೊಡಬೇಕು. ಆಗ್ಗದ ಅಂಗಡಿಗಳ ವಿವಾಟುದನಕ ಪೇಟೆಯಲ್ಲಿ ಈ ಪದಾರ್ಥಗಳು ಸುಸೂತ್ರವಾಗಿ ಸಿಗಲಾರವು.

ಚಿಮಣಿ ಎಣ್ಣೆಯ ಬರಗಾಲ ಬೀಳಲಿಕ್ಕೆ ಚಿಮಣಿ ಎಣ್ಣೆ ಏಜಂಟರ ಕಕ್ಕುತನವೇ ಕಾರಣ. ಜಿಲ್ಲಾಧಿಪತಿ ೧೯೧೯ನೇ ಇಸ್ವಿ ಡಿಸೆಂಬರ ತಿಂಗಳಿನಿಂದ ಈ ಜಿಲ್ಲೆಯೊಳಗಿನ ಬೇರೆ ಬೇರೆ ಏಜಂಟರಿಗೆ ಕಂಪನಿಯವರಿಂದ ಬಂದ ಎಣ್ಣೆ ಡಬ್ಬೆ ಮತ್ತು ಜವನ್ನು ಮಾರಾಟ ಮಾಡಿದ ಇಸಮು ಮತ್ತು ಆ ಡಬ್ಬೆಗಳ ವಿಸಿಯೋಗ ಇವುಗಳ ಶೋಧ ಮಾಡಿಸಿದರೆ ನಮ್ಮಾ ಜಿಲ್ಲೆಯೊಳಗೆ ಬೇಕಷ್ಟು ಚಿಮಣಿ ಎಣ್ಣೆ ಇರುವ ಸಂಗತಿ ಸಿದ್ಧವಾಗುವಂತಿದೆ. ಶಿರ್ಸಿ-ಕುಮಟಾ-ಹೊನ್ನಾವರ ತಾಲೂಕುಗಳಲ್ಲಿ ಬೇರೆ ಬೇರೆ ರೀತಿಯಿಂದ ಹೇರಳ ಚಿಮಣಿ ಎಣ್ಣೆ ಡಬ್ಬೆಗಳಿರುತ್ತವಾಗಿ ತಿಳಿಯುತ್ತದೆ. ದೊಡ್ಡ ದೊಡ್ಡ ವರ್ತಕರೂ ಏಜಂಟರೂ ಚಿಮಣಿ ಎಣ್ಣೆ ಡಬ್ಬೆಗಳನ್ನು ಒಟ್ಟುಮಾಡಿಟ್ಟಿದ್ದಾರಾಗಿ ಊರತುಂಬ ವಾರ್ತೆಯುಂಟು. ಜಿಲ್ಲಾಧಿಪತಿಯರು ಜಾಕಿತಿ ಮಾಡಿ ಚಿಮಣಿ ಎಣ್ಣೆ ಡಬ್ಬೆಗಳನ್ನು ತಪಾಸ ಮಾಡಿ ಸ್ವಾಧೀನಪಡಿಸಿಕೊಳ್ಳಲಿಕ್ಕೆದ್ದರು

***

ಧಾರಣೆ-ನಿಯಂತ್ರಣ ಹೊಸವಳ್ಳ. ಪ್ರಾಚೀನ ಕಾಲದಿಂದ ಧಾರಣೆ-ನಿಯಂತ್ರಣದ ಪ್ರಶಾಕ ವುಂಟು. ಹಿಂದು ಅರ್ಥಶಾಸ್ತ್ರಕಾರರಾದ ಕೌಟಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವರ್ತಕರ ಕಳ್ಳಾಟಿಕೆಯನ್ನು ವರ್ಣಿಸಿವ್ವಾನೆ. ಪ್ರಜಾರಕ್ಷಣೆಯ ಉಪಾಯಗಳನ್ನು ವರ್ಣಿಸಿದ್ದಾನೆ. ರಕ್ಕುತನ ಪಡಿಸುವ ವರ್ತಕರಿಗೆ ದಂಡ ಮಾಡಬೇಕೆಂದು ಕೌಟಲ್ಯನ ಅಪ್ಪಣೆಯುಂಟು ವರ್ತಕರು ಸ್ವದೇಶಿ ಸರಕುಗಳ ಮೇಲೆ ಶೇಕಡಾ ೫ರಂತೆಯೂ ಪರದೇಶಿ ಸರಕುಗಳ ಮೇಲೆ ಶೇಕಡಾ ೧೦ರಂತೆಯೂ ಲಾಭ ಪಡಕೊಳ್ಳಬೇಕು. ಯಾಜ್ಞವಲ್ಕ್ಯ ಸ್ಮೃತಿಕಾರರು ಸಹ ಇದೇ ಪ್ರಕಾರ ಪ್ರಮಾಣ ಹೇಳ್ಬಟ್ಟಿದ್ದಾರೆ: ನಿಯಂತ್ರಿತ ದರಕ್ಕೆ ಮಿಕ್ಕೆ ಮಾರುವವರಿಗೆ ೧೦೦ ಪಣ (= ನಾಣ್ಯ) ದಂಡ ಮಾಡಬೇಕೆಂಬ ನಿಯಮವುಂಟು. ಸರಕು ತಿಲ್ಲ ಇದ್ದು ಇಲ್ಲವಾಗಿ ಹೇಳುವ ವರ್ತಕರಿಗೆ ಇಲ್ಲವೆ ತುಟ್ಟಿ ಮಾಡಿ ಅಂತರಂಗದಿಂದ ಮಾರುವವರಿಗೆ ಸಹ ಇಷ್ಟೇ ದಂಡ ಹೇಳೋಣಾಗಿದೆ. ರಾಜ್ಯಕಾರರು ಸರಕುಗಳ ದರಗಳನ್ನು ನಿರ್ಣಯಿಸುವ ಮುಂತು ಹೇಳಿದ ನಿಯಮವು ತೀರ ವ್ಯವಹಾರಕವಾದದ್ದು ಸರಕುಗಳ ದರಗಳು ಯಾವಾಗಲೂ ಒಂದೇ ಇರುವದಿಲ್ಲ. ವಿರಳುತ್ಪತ್ತಿ ಇದರಿಂದ ಸರಕಾರವು ಸೀಸುಗಳ ದರಗಳನ್ನು ನಿರ್ಣಯಿಸುವಾಗ ಪ್ರತಿ ೧೫ ದಿವಸ ಇಲ್ಲವೆ ೧೫ ದಿವಸಕ್ಕೊಮ್ಮೆ ಆಥವಾ ತಿಂಗಳಿಗೊಮ್ಮೆ ನಿರ್ಣಯಿಸಬೇಕಾಗಿ ಮನುಸ್ಮೃತಿಯಲ್ಲಿ ಉಲ್ಲೇಖವಿದೆ ಕೌಟಲ್ಯನಿಗೆ ವರ್ತಕರ ರಕ್ಕುತನ ನೋಡಿ ಬಹಳ ಬೇಸರ ಬಂದಿತ್ತು. ವರ್ತಕರು ಸಮಾಜಕಂಟಕರೆಂದು ಆತನು ತನ್ನ ಗ್ರಂಥದಲ್ಲಿ ಸಂಬೋಧಿಸಿದ್ದಾನೆ. ಲೋಕಕ್ಕೆ ದೈವ-ಸಂಕಲ್ಪದಿಂದ ಬಂದ ಆಪತ್ತಾಲವಲ್ಲಿ ವರ್ತಕರು ಮೋಸಗಾರರಂತಿ ಲಾಭ ಪಡೆಯುವದು ಸಮಾಜಕಂಟಕತನ. ಅದು ಸಾಸದ್ರವ್ಯ. ಧರ್ಮಶಾಸ್ತ್ರಗಳಲ್ಲಿ ಸಹ ಈ ಸಂವಾದ ನೆಗೆ ಮಾನ್ಯತೆಯಿಲ್ಲ. ದ್ರವ್ಯ ಸರಿಸಬೇಕೆಂಬ ಆಶೆಯಿದ್ದವರು ಈ ಮೋಸಗಾರಿಕೆಗೆ ಕೈ ಹಾಕಲಾಗದು.

***

ಕೊನ್ನಾವರದವರೊಬ್ಬರು ಬರೆದಂತೆ ಆರ್ಜನ ಬೇಂಕಿನ ಅಧ್ಯಕ್ಷರ ಚುನಾವಣೆಯಿಂದ ಸಂಳದ ಸಭಾಸದರಲ್ಲಿ ಒಂದು ಪ್ರಕಾರದ ಜಾಗ್ಯತಿಯುಂಟಾಯಿತು. ಸಂಘ ಸ್ಥಾಪನೆಯಾದಂದಿನಿಂದ ಈ ತನಕ ಆರ್ಜನ ಬೇಂಕು ಪ್ರತ್ಯಕ್ಷ ಆಡಳತೆ ಮಾಡುವ ಗೌರವ-ಕಾರ್ಯದರ್ಶಿ ವ್ಯಕ್ತಿಯು ಸ್ಥಾಪ್ತಿಯೆಂದು ಜನ-ಜಾನನಿಯಾಗಿತ್ತು. ಗೌರವ-ಕಾರ್ಯದರ್ಶಿಗಳ ವಿಕ ತಂತ್ರಿ ಆಡಳತೆಯಿಂದ ಈ ಭಾವನೆ ದೃಢವಾಗಿತ್ತು. ಇವರ ಅನುಗ್ರಹ ಸಂಪಾದಿಸಿದರೆ ಪತ್ತಿಲ್ಲದವರಿಗೆ ಸಾಲ ಸಿಗುತ್ತದೆ; ಅನುಗ್ರಹವಿಲ್ಲದಿದ್ದರೆ ಪತ್ತಿದ್ದವರಿಗೆ ಸಹ ಸಾಲ ಸಿಗುವದಿಲ್ಲ; ಮೇಲಾಗಿ ಗೌರವ-ಕಾರ್ಯದರ್ಶಿಗಳಿಗೆ ಯಾವದೇ ಹೊಣೆಯಿಲ್ಲ. ಪತ್ತಿಲ್ಲದವರ ಸಾಲ ಮುಳುಗಿದರೆ ಬೇಂಕಿನ ಖಾತೆಯಲ್ಲಿ ಮುಳುಗಿದ ಸಾಲಗಳ ಲೆಕ್ಕಕ್ಕೆ ಖರ್ಚು ಬರಿದರಾಯಿತು! ಪತ್ತಿಲ್ಲದವನಿಗೆ ಸಾಲ ಕೊಟ್ಟು ಮಾಡಿದ ಉಪಕಾರ ಮತ್ತು ಪಡೆದ ಪ್ರಯೋಜನ ಗೌರವ-ಕಾರ್ಯದರ್ಶಿಗಳ ಸ್ವಂತ ಲೆಕ್ಕಕ್ಕೆ ಜಮೆ! ಸಾಲ ಬೇಂಕಿನ ಲೆಕ್ಕಕ್ಕೆ ಖರ್ಚ! ಸಾಲ ವಸೂಲ ಪಡೆಯುವದೂ ಸುಲಭ ವಿಚುವದೂ ಗೌರವ-ಕಾರ್ಯದರ್ಶಿಗಳ ಸ್ವೇಚ್ಛೆಯಾಗಿದ್ದಿತು. ಈ ಚುನಾವಣೆಯಿಂದ ಗೌರವ-ಕಾರ್ಯದರ್ಶಿಗಳಿಗೆ ತಮ್ಮ ಭೂಮಿಕೆ ತಿಳಿದಿದೆ; ಸಭಾಸದರಿಗೆ ತಮ್ಮ ಅಧಿಕಾರ ತಿಳಿದಿದೆ! ಗೌರವ-ಕಾರ್ಯದರ್ಶಿಗಳು ಸರ್ವ-ಸ್ವತಂತ್ರರಲ್ಲ; ತಮ್ಮ ಸೇವಕರು; ಸಭಾಸದರೆ ಜಜಾಗ್ರಯೆಯಿಂದ ಆವರು ಅಧಿಕಾರಸ್ಥಾನವನ್ನು ಅಕ್ರಮಿಸಿಕೊಂಡು ಹಾವಳಿ ಹಾಕುತ್ತಿದ್ದಾರೆ; ಇವೇ ನೂದಲಾದ ಸಂಗತಿಗಳನ್ನು ಆರ್ಜನ ಬೇಂಕಿನ ಸಭಾಸದರು ಈ ಚುನಾವಣೆಯಿಂದ ಕಲಿತಿದ್ದಾರೆ. ಜಿಲ್ಲೆಯೊಳಗಿನ ಇತರ ಬೇಂಕುಗಳಲ್ಲಿ ಸಹ ಈ ಪ್ರಕಾರ ಚುನಾವಣೆಯಾಗುವಂತೆ ಸಹಕಾರ ಇಲಾಖೆಯ ಅಧಿಕಾರಿಗಳು ಒತ್ತಾಯಪಡಿಸಬೇಕು. ಅಂದರೆ ಆಡಳತದಾರರ ನಿರಂಕುಶ ಪ್ರಭುತ್ವ ನಿರ್ಬಂಧಿಸಲ್ಪಡುವದು.

***

ಕುಮಟಾ ಮ್ಯುನಿಸಿಪಾಲಿಟಿಯಲ್ಲಿ ವಂಚನೆಯಾಗಿರುತ್ತದಾಗಿ ವಾರ್ತೆಯುಂಟು. ಮ್ಯುನಿಸಿಪಾಲಿಟಿಯ ಕಾರ್ಯದರ್ಶಿಗಳೂ ಕಾರಕೂನರೂ ಮನೆತೆರಿಗೆ ವಸೂಲು ಮಾಡುವವರೂ ಒಳ್ಳಬ್ಬುಗಿ ವಸೂಲಾದ ಮನೆತೆರಿಗೆಯನ್ನು ಮ್ಯುನಿಸಿಪಾಲಿಟಿಯಲ್ಲಿ ತುಂಬಿಸಿ ವಂಚನೆ ಮಾಡಿರುತ್ತಾರಂತೆ. ಮನೆತೆರಿಗೆ ರತಿದಿಗಳಲ್ಲಿ ಅಂಕಿಗಳು ತಿದ್ದಲ್ಪಟ್ಟಿವೆಯಂತೆ. ಕಾರ್ಯದರ್ಶಿಗಳು ಇವನ್ನು ನೋಡಿ ತೀರ್ಪಿ ಬರೆಯುವದಿದೆ, ಕಾರಕೂನರು ಈ ಕುರಿತು ಲಕ್ಷ ಹಾಕುವದಿದೆ, ಹೀಗಿದ್ದು ಬೇಜವಾಬ್ದಾರಿಯಿಂದ ಈ ಕೆಲಸ ಆಗಿರುವದಾಗಿ ತಿಳಿದು ಬಂದಿದೆ.

ಕಾನಡಾವೃತ್ತ.

ಮಿತ ಪತ್ರಿಕೆಯು ಸಂವತ್ಸರ ಭಾದ್ರಪದ ಕೃ॥ ೧೦ನು, ಸೋಮವಾರ.

ಯುದ್ಧ ಹಿಂದುಸ್ಥಾನ-ಜನಾಂಗದ್ವಾಗಲಿ!

ಈ ಯುದ್ಧ ಹಿಂದ-ಜನಾಂಗದ್ವಾಗಲೆಂದು ಸರ್ವರೂ ಕಾಂಕ್ಷಿಸುತ್ತಾರೆ. ಅಮೇರಿಕೆಯೊಳಗಡತು ಹಿಂದ ಜನಾಂಗದೊಳಗಿನ ಘಟನೆಗಳ ಬಗ್ಗೆ ಸರ್ವರೂ ಚಿಂತಾತುರರಾಗಿದ್ದಾರೆಂದು ಪತ್ರಿಕೆಗಳ ಮೇಲಿಂದ ತಿಳಿಯುತ್ತದೆ. ಅಮೇರಿಕೆಯ ಸರಕಾರದ ಮಂತ್ರಿಗಳಾದ ಮಿ॥ ಕೊರ್ಡಲ ಹಲ್ಲರವರು ಬ್ರಿಟಿಶ ರಾಯಭಾರಿಗಳೊಡನೆ ಹಿಂದುಸ್ಥಾನದೊಳಗಿನ ಘಟನೆಗಳನ್ನು ಕಾಲ-ಕಾಲಕ್ಕೆ ತಿಳಿಸ್ಪುತ್ತಿದ್ದಾರೆ ಎಂದೇ ಅಮೇರಿಕೆಯೊಳಗಿನ "ನ್ಯೂ ಯೊರ್ಕ ಟ್ರಿಬ್ಯೂ" ಪತ್ರಿಕೆಕರರು ಸುಮಾರು ೫೭ ಪ್ರಮುಖರಿಂದೊಂದು ನಿಯಂತಿ ಪತ್ರವನ್ನು ಪ್ರತ್ಯೇಕ ಪುಟದಲ್ಲಿ ದೊಡ್ಡ ದೊಡ್ಡ ಸದರುಗಳನ್ನು ಹಾಕಿ ಕಳೆದ ಸೋಮವಾರ ಪ್ರಕಟಿಸಿದುವರಾಗಿ 'ಲೈಫ್' ವಾರ್ತಾವಾಪಕರು ತಿಳಿಸುತ್ತಾರೆ. ಮಿತ್ರ-ಜನಾಂಗಗಳ ಕಾರ್ಯದಲ್ಲಿ ಹಿಂದುಸ್ಥಾನದ ಅಂತಃಕರಣವನ್ನು ಸೇರಿಸಿಕೊಳ್ಳುವಂತೆ ಇದಿಗಲೇ ಪ್ರಯತ್ನ ನಡೆಯಬೇಕಾಗಿ ಈ ಪ್ರಮುಖರು ಒತ್ತಾಯ ಮಾಡಿದ್ದಾರೆ. ಹಿಂದುಸ್ಥಾನದ ಸ್ವಾತಂತ್ರ್ಯ ಕಾರ್ಯಕ್ರಮವನ್ನು ಇದಿಗಲೇ ಪ್ರಾರಂಭಿಸಬೇಕೆಂದೂ ಈ ಕಾಲವರಣ ಮಾಡಬಾರದೆಂದೂ ಈ ಪ್ರಮುಖರು ಬರೆದು ಅಮೇರಿಕೆಯ ಅಧ್ಯಕ್ಷರಾದ ರೂಸ್ವೆಲ್ಟರವರಿಗೂ ಚೀನದ ಮುಖ್ಯಾಧಿಕಾರಿಗಳಾದ ಸೇನಾಪತಿ ಚಾಂಗ-ಕೈ ಶೇಕರಿಗೂ ವಿನಂತಿ ಮಾಡಿಕೊಂಡಿದ್ದಾರೆ. ಹಿಂದುಸ್ಥಾನದ ಸಮಸ್ಯೆ ಪ್ರಳಕಸಮಸ್ಯೆಯೆಂದು ಎನೆಸಬಾರದೆಂದೂ ಮಿತ್ರ ಜನಾಂಗಗಳ ಆಗು-ಹೋಗುಗಳಲ್ಲಿ ಹಿಂದುಸ್ಥಾನದ ಭೂಮಿಕೆ ಇರುವದಾಗಿಯೂ ನಿಸೇಟರ ಬೊಲಕರವರು ಉದ್ಧರಿಸುತ್ತಾರೆ ಬ್ರಿಟಿಕರೂ ಹಿಂದೀಯರೂ ಈ ಯುದ್ಧದಲ್ಲಿ ಉತ್ಕರ್ಷತೆಗೆ ಮಾಡಿಕೊಳ್ಳುವದಿದೆ, ಉದಕ್ಕಾಗಿ ಉಭಯತರೂ ಯಾವತ್ತೂ ಉಪಾಯಗಳನ್ನು ಕೈಕೊಳ್ಳಲು ಬದ್ಧರಿದಾರೆಂದು ಸಿನೇಟರ ಪೆಪ್ಪರವರ ಅಭಿಪ್ರಾಯವಿದೆ. ಚೀನ ಅಮೇರಿಕೆಗಳಲ್ಲಿ ಹಿಂದುಸ್ಥಾನದ ಬಗ್ಗೆ ಒಳ್ಳೇ ಕಲ್ಪೋಲವಿದ್ದಿದೆಂದು ಹೇಳುತ್ತಾರೆ. ಆದುರಿಂದಲೇ ಸೇನಾಪತಿ ಚೆವೆಲ್ಲರವರು ಬ್ರಹ್ಮದೇಶವನ್ನು ಹಿಂತಿರುಗಿ ಪಡಕೊಂಡು ಚೀನ ಕೈ ನೆರವಾಗುವ ಹಂಬಕೆಯಲ್ಲಿ ತಾವಿರುವೆವಾಗಿ ಬ್ರಿಟನ-ಜಮೇರಿಕೆಗಳ ಸುದ್ದಿಗಾರರ ಸಭೆಯೊಳಗೆ ನುಡಿದು ಸಮಾಧಾನ ಮಾಡಬಯಸಿದ್ದಾರೆ. ಅಮೇರಿಕೆಯ ಮಿ॥ ಲುಯಿ ಫಿಶರರವರು ಪ್ರಸ್ತಾಪಿಸಿದಂತೆ ಬ್ರಿಟೆರು ಜಪಾನಿಯರ ಮೇಲೆ ದಾಳಿ ಮಾಡಿ ಅವರನ್ನು ಹಿಮ್ಮೆಟ್ಟಿಸಬೇಕಾದುವ ಪ್ರಸಂಗ ಈಗ ಉಂಟು ಜಪಾನಿಯರು ಹಿಂದುಸ್ಥಾನದ ಮೇಲೆ ದಂಡೆತ್ತಿಕೊಂಡು ಬರಲಿ ಇಲ್ಲದೆ ಮಮ್ಮನೆ ಕೈಮುದುಡಿಕೊಂಡು ಕೂತುಕೊಳ್ಳಲಿ; ಜಪಾನಿಯರ ವ್ಯೂಹವಲಂಕಲ್ಪವನ್ನು ಊಹಿಸುವರು ಬ್ರಿಟರರ ಕರ್ತವ್ಯವಲ್ಲ; ತಾವೇನು ಮಾಡತಕ್ಕದ್ದೆಂಬ ವಿಚಾರ ಮಾಡಿ, ಅದರಂತೆ ನುಂದೊತ್ತಿ ಹೋಗುವದಿದೆ.

ಈ ಪ್ರಕಾರ ಧೈರ್ಯ ಕಾಲಿಗಳಾಗಬೇಕಾದರೆ ಜನಾಂಗದ ಬೆಂಬಲವರಬೇಕು. ಬ್ರಹ್ಮದೇಶ ಕಳಕೊಂಡದ್ದನ್ನು ಪ್ರತ್ಯಕ್ಷ ನೋಡಿದ ಅಮೇರಿಕೆಯ 'ಲೈಫ' ಪತ್ರಿಕೆಯ ಪ್ರತಿನಿಧಿಗಳಾದ ಮಿ॥ ಕ್ಲೇರಬೂಥರವರು ಪ್ರಕಟಿಸಿದ ವಿವರಗಳಿಂದ ಹಿಂದುಸ್ಥಾನದ ಜಡ್ಯಗಳ್ಳ ತನ (Inertia)ದಿಂದಲೂ ಇಂಗ್ಲಂಡದ ಹಡಬೆ ಮಾರತನದಿಂದಲೂ ಅಮೇರಿಕೆಯ ಅಜಾ ನದಿಂದಲೂ ಆ ದೇಶ ಬ್ರಿಟಿಶರ ಕೈ ಬಿಟ್ಟಿತೆಂದು ಒರೆದು ದಿಲ್ಲಿ. ಲಂಡನ್ನು ಪೈಶಿಂಗಟನ ಸರಕಾರಗಳ ಮೇಲೆ ಬ್ರಹ್ಮದೇಶ ಕಳಕೊಂಡ ಪಾಪದ ಹೊರೆ ಹೇರಿದ್ದಾರೆ. ಜನಾಂಗದ ಅಂತಃಕರಣವನ್ನು ಸರಕಾರವು ಗಳಸಿ ಕೊಂಡಿನಕ ಯುದ್ಧಕಾರ್ಯ ಸಾರ್ಥಕವಾಗುವದಿಲ್ಲವೆಂದು ತಾನೇ ಸಿದ್ಧವಾಗ್ತಿದೆ. ಸೈಲಿನಗ್ರೆಡದಲ್ಲಿ ರುಷ್ಯರು ಈ ಪರಿ ಕಾವಾಡಲು ಜನಾಂಗದ ನಿರ್ಧಾರವೇ ಕಾರಣವೆಂದು ಅಮೇರಿಕೆಯ ಅಧ್ಯಕ್ಷರಾದ ಮಿ॥ ರೂಸ್ವೆಲ್ಟರ ಪ್ರತಿನಿಧಿಗಳಾದ ಮಿ॥ ವಿಂಡೇಲ ವಿಲ್ಕಿಯವರು ಸ್ಪಷ್ಟವಾಗಿ ಹೇಳ್ತಾರೆ. ಲಕ್ಷಾವಧಿ ರುಷ್ಯ ಸ್ತ್ರೀಯರೂ ೨೧ ವರ್ಷ ಪ್ರಾಯದ ಹುಡುಗ ಹುಡುಗಿಯರೂ ಮೆದ್ದು-ಗುಂಡುಗಳ ಕಾರಖಾನೆಗಳಲ್ಲೂ ಹೊಲಗಳಲ್ಲೂ ದುಡಿಯುವವನ್ನು ನೋಡಿ ಮಿ॥ ವಿಲ್ಕಿಯವರು ಸಂತೋಷಭರಿತರಾಗಿದ್ದಾರೆ. ಆದ ಪ್ರಕಾರ ಹಿಂದುಸ್ಥಾನದಲ್ಲೂ ಅನಸ್ಥಾತರ ವಾಗುವದು ಈಗಿಗ ಅತ್ಯವಶ್ಯ. ಸಿಂಘ ವ್ಯಾಂತದ ಮುಖ್ಯ ಮಂತ್ರಿಗಳಾದ ಬಾಸಬಬ್ಯಾದ್ದೂರ ಅಲಾ ಬಕ್ಷರವರು ತನ್ನ ಪದವಿಯನ್ನು ತ್ಯಜಿಸುವಾಗ ನುಡಿದಂತೆ, ದಬ್ಬಳಕೆಯಿಂದ ಹಿಂದುಸ್ಥಾನಕ್ಕಿಂತ ಬ್ರಿಟಕರೇ ಕೆಚ್ಚು ಹಾನಿಯುಂಟು. ರಾಷ್ಟ್ರೀಯ ಸಭೆಯವರು ಕತ್ತು ಜರ್ಮನಿ-ಜಪಾನ ದೇಶಗಳಗೆ ಕೂಡಿ ಕೊಂಡಿರುವಪ್ಪಾಗಿ ವಿಧ್ವಾರೋಪ ಹೊರಿಸಿದ್ದರಿಂದ ಬ್ರಿಟಿಶರ ರಾರ್ಯಭಾರವಾಗದು ಯುದ್ಧೋಪಯಿಸರ ಪ್ರಮುಖ ಕಾರ್ಯಕರ್ತರಾದ "ಸ್ಟೇಟ್ಸಮನ್" ಪತ್ರಿಕೆಯ ಸಂಪಾದಕರಾದ ಮಿ॥ ಆರ್ಥರ ಮೂರರವರು ಬರೆದಂತೆ ರಾಜ್ಯರಕ್ಷಣ ಕಾನೂನುಗಳನ್ನು ಮಾಡಿ ಜನರನ್ನು ಉಲ್ಲಂಘಿಸುವವರಿಗೆ ಅವುಗಳ ಬಲದಿಂದ ಸೆರೆಮನೆಯಲ್ಲಿ ನೂಕಿ ಸುರಕ್ಷಿತವಾಗಿ ರಾಜ್ಯಭಾರ ನಡಿಸಲಿರುತ್ತದೇಯು ಎಣಿಸುವದು ಅಜಾಕರ ವಾದ ಮಾತು ಹಿಂದುಸ್ಥಾನದೊಳಗೆ ಬ್ರಿಟಿಶರಿಗೆ ರಾಜ್ಯವಿಲ್ಲ ಇವರ ಮೂಲಸ್ಥಾನ ಬ್ರಿಟನ್. ಬ್ರಿಟನ್ನು-ಹಿಂದುಸ್ಥಾನಗಳ ವ್ಯವಹಾರ-ಸಂಬಂಧಗಳು ಕಡಿದು ಹೋದಾಗ ಹಿಂದುಸ್ಥಾನದೊಳಗಿನ ಯುರೋಪಿಯನರು ಪರ-ಬಲದಿಂದ ಜನಾಂಗವನ್ನು ಕಾಪಾಡಿಕೊಳ್ಳಲಾರರು. ಜನಾಂಗಗಳ ಅಂತಃಕರಣವನ್ನು ಯುರೋಪಿಯನರು ಗಳಿಸಿಕೊಳ್ಳಬೇಕು. ಮಿ॥ ಮೂರರವರು ನಮೂದಿಸಿದ ಒಂದು ಮಾತು ಮರ್ಮಭೇದಕವಿದೆ. ಹಿಂದುಸ್ಥಾನದೊಳಗಿನ ಪತ್ರ-ಸಂಗಡಗಳ ಮೂಲಕ ಬ್ರಿಟಿಶರು ರಾಜ್ಯಭಾರವನ್ನು ಹಿಂದೀಯರಿಗೆ ಕೊಡಲು ಅನುಮಾನಿಸುತ್ತಾರೆಂಬ ಮಾತು ವಸ್ತುಸ್ಥಿತಿಯಲ್ಲ. ರಾಜ್ಯಭಾರವನ್ನು ಹಿಂದೀಯರಿಗೊಪ್ಪಿಸಲು ಬ್ರಿಟಿಶರ ಮನಸ್ಸಿಲ್ಲ; ಆದಕ್ಕಾಗಿ ಬ್ರಿಟಿಶರು ಪಕ್ಷ-ಪಂಗಡಗಳ ಮತಭೇದಗಳ ಕಡೆಗೆ ಬೊಟ್ಟು ತೋರಿಸುತ್ತಾರೆ. ಮಿ॥ ಮೂರರಂಥ ಯುರೋಪಿಯನರ ಪಕ್ಷಪಾತಿಗಳೂ ಸಾಮ್ರಾಜ್ಯವಾದಿಗಳ ರಾಜ್ಯಧೋರಣವನ್ನು ದಿನಂಪ್ರತಿ ಪ್ರತಿಪಾದಿಸಿ ಅವರ ಹತಚಿಂತನ ನಾಡುವವರೂ ಈ ಪರಿ ಬ್ರಿಟಿಶರ ಅಂತರಂಗವನ್ನು ಸ್ಪಟ ಮಾಡಿದ ಬಳಿಕ, ಬ್ರಿಟಿಶರು ಹಿಂದ-ಜನಾಂಗವನ್ನು ಒಲಿಸಿಕೊಳ್ಳಯತ್ನಿಸಲು ಬದ್ಧರಿದ್ದಾರೆ. ಮಹಾತ್ಮರನ್ನು ಕಥಿಕ್ಷೇಪಿಸಿ ಸ್ವಾರಸ್ಯವಿಲ್ಲ. ಮಹಾತ್ಮರ ಹೋಕೆಯನ್ನು ಮಿ॥ ಆರ್ಥರ ಮೂರರವರು ಕೊಂಡಿದ್ದಾರೆ. "ರಾಜ್ಯಭಾರವನ್ನು ಜನಾಂಗಕ್ಕೊಪ್ಪಿಸುವ ನಿರ್ಧಾರ ಮಾಡಿರಿ; ಅಂದರೆ ಮಹಾತ್ಮರು ಕೂಡಲೆ ಅಸಹಯೋಗದ ಶಸ್ತ್ರವನ್ನು ಬದಿಗಿಟ್ಟು ಹಿಂದೀ-ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಸಕಲ ಯತ್ನಗಳನ್ನು ಖಂಡಿತವಾಗಿ ನಡಸುವರು." ಸರ್ ಸ್ಟೈಫರ್ಡ ಕ್ರಿಪ್ಸರ ರಾಜ್ಯಯೋಜನೆ ಮುರಿದು ಹೋದ ಬಗ್ಗೆ ಮಹಾತ್ಮರ ಮೇಲೆ ಆಕ್ಷೇಪ ಮಾಡುವದನ್ನು ಜನರು ಓದಿರಬಹುದು. ಆದರೆ ಆ ಕಾಲದಲ್ಲಿ ದಿಲ್ಲಿಯೊಳಗಿದ್ದ ಅಮೇರಿಕೆಯ ಸುದ್ದಿಗಾರರಾದ ಮಿ॥ ಲುಯಿ ಫಿಶರರವರು ಕ್ರಿಪ್ಸ-ಯೋಜನೆ ಮುರಿಯ ಯೋಗಲು ಹಿಂದುಸ್ಥಾನದ ರಾಜ್ಯಭಾರವನ್ನು ಹಿಂದೀಯರಿಗೆ ಒಪ್ಪಿಸಲು ಒಡಂಬಡದಿದ್ದದ್ದೇ ಕಾರಣವೆಂದು ಬರೆಯುತ್ತಾರೆ. ಸೇನಾಪತಿ ಚೆವೆಲ್ಲರವರಂಥ ಅಧಿಕಾರಿ ಪುರುಷರು ಮಿ॥ ಲುಯಿ ಫಿಶರರವರ ಬಳಿ ಈ ಮಾತರಿಯ ಗೌಪ್ಯಕ್ಕೋಟೆ ಮಾಡಿದ್ದರಾಗಿ "ಮುಂಬಯಿ ಕ್ರೊನಿಕಲ" ಪತ್ರಿಕೆಯ 'ಡಿಮ್' ಲೇಖಕರು ಬರೆಯುತ್ತಾರೆ. ಮದ್ರಾಸದ 'ಹಿಂದು' ಮತ್ತು ಲಂಡನ್ನಿನ 'ಮೆಂಚೆಸ್ಟರ ಗಾರ್ಡಿಯನ್' ಪತ್ರಿಕೆಯ ದಿಲ್ಲಿಯ ಸುದ್ದಿಗಾರರಾದ ಡಾ॥ ಶಿವರಾಯರೂ ಸಾಧಾರಣ ಇದೇ ಪ್ರಕಾರ ಅಭಿಪ್ರಾಯಪಡುತ್ತಾರೆ. ಸರ್ ಸ್ಟೈಫರ್ಡ ಕ್ರಿಪ್ಸರು ರಾಷ್ಟ್ರೀಯ ಸಭೆಯವರೊಡನೆ ಒಡಂಬಡಿಕೆ ಮಾಡಿಕೊಳ್ಳಲು ಸಿದ್ಧರಿದ್ದರು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಒಪ್ಪಿದ್ದರು. "We British will quit India after the war: make up with Gandhiji and the Congress" "ಯುದ್ಧ ಮುಗಿದ ಬಳಿಕ ನಾವು ಬ್ರಿಟಿಶರು ಹಿಂದುಸ್ಥಾನವನ್ನು ಬಿಟ್ಟುಹೋಗುತ್ತೇವೆ. ಗಾಂಧಿಜಿ ಮತ್ತು ರಾಷ್ಟ್ರೀಯ ಸಭೆಯವರೊಡನೆ ನೀವು ಒಡಂಬಡಿಕೆ ಮಾಡಿಕೊಳ್ಳಿ" ಹೀಗೆ ಸರ್ ಸ್ಟೈಫರ್ಡ ಕ್ರಿಪ್ಸರು ತಮ್ಮನ್ನು ಕಾಡುಒಂದ ಪ್ರಮುಖ ಸಂಸ್ಥಾನಿಕರಿಗೆ ನಿರ್ಧಾರ್ಪಿಸ್ಯಾದಿಂದ ತಿಳಿಸಿದ್ದರು. ಆದರೆ ಆಧಿಕಾರಿಗಳಿಗೆ ಕ್ರಿಪ್ಸರ ಸಂಧಾನ ಸರಿಹೋಗಲಿಲ್ಲ. ಕ್ರಿಪ್ಸರು ಸಂಧಾನ ಮಾಡಲುದ್ಯುಕ್ತರಾದರೆ ತಾವು ರಾಜೀನಾಮೆ ಕೊಡುವ ಹೆದರಕೆಯನ್ನು ಕ್ರಿಪ್ಸರಿಗೆ ಅವರು ಹಾಕಿದರು. ಈ ಮೂಲಕ ಸಂಧಾನ ಮುರಿಯಿತಾಗಿರಾ॥ ಶಿವರಾಯರು ಬರೆಯುತ್ತಾರೆ. ಅಮೆರಿಕೆಯ ನಾಮಾಂಕಿತ ಪತ್ರಕರ್ತರಾದ ಮಿ॥ ಹಸ್ಸ್ರರವರು ಬರೆದಂತೆ ಬ್ರಿಟಿಶರಿಗಾಗಲಿ ಅಮೇರಿಕೆಯವರಿಗಾಗಲಿ ಸೌರ್ವಾಸ್ಯರ ಹೆಚ್ಚಳ ಇಷ್ಟವಿಲ್ಲ. ಲೋಕಸಾಮ್ರತಂತ್ರ್ಯದ ಪ್ರಕಟನೆಯನ್ನು ಹೊಂದಿಸಿದಾಗ್ಯೂ ಮಿತ್ರ-ಜನಾಂಗಗಳು ಹಿಂದ-ಜನಾಂಗವನ್ನು ಸ್ವತಂತ್ರ ಜನಾಂಗಗಳಲ್ಲಿ ಸೇರಿಸಿಕೊಳ್ಳಲು ಒಡಂಬಡುವದಿಲ್ಲ. ಆದರೆ ಈ ಪ್ರವೃತ್ತಿ ಈಗಾಗ ಪ.ರಿತ್ತಿತ ವಲ್ಲವೆಂದು ನಾವು ಸಾರಿ ಹೇಳುತ್ತೇವೆ. ಯುದ್ಧ

ಹಿಟ್ಲರನೂ ರೂಮೆಲನೂ !

[ನಿರೀಕ್ಷಕನು ಬರೆದಾದು.]

ನ್ನು ಗೆಲ್ಲಿಬೇಕಾದರೆ ಹಿಂದುಸ್ಥಾನವನ್ನು ಸಂತೈಸಲೇಬೇಕು. ರಾಷ್ಟ್ರೀಯ ಸಭೆಯನ್ನು ಹೀಯಾಳಿಸಿ ಎನ್ನಕ್ಕೂ ಕಾರ್ಯಭಾಗವಾಗುವಂತಿಲ್ಲ ! ಹಿಂದುಸ್ಥಾನವು ಶಾಂತವಾದನಕ ಚೀನಿಯರಿಗೆ ನೆರವಾಗುವದಾಗಲಿ ಬ್ರಹ್ಮದೇಶದ ಸೀಲೆ ದಂಡೆತ್ತಿಕೊಂಡು ಹೋಗುವದಾಗಲಿ ಕೈಸಾಗದ ಮಾತು. ಭಾರತ ಮಂತ್ರಿಗಳಾದ ಮಿ॥ ಎಮೆರಿಯವರು ನುಡಿದಂತೆ, ಮಹಾತ್ಮಾ ಗಾಂಧಿಯವರನ್ನು ಜಯಿಸಿ ಹಿಂದುಸ್ಥಾನವನ್ನು ಸಂರಕ್ಷಿಸಿಕೊಳ್ಳುವ ಮಹಾಕಾರ್ಯದಲ್ಲಿ ಹಿಂದುಸ್ಥಾನ ಸರಕಾರವು ಈಗ-ಮಗ್ನವಾಗಿರುತ್ತದೆ. ಲಂಡನ್ನಿನ ಕೆಳ್ಳಟನ ಹೊಲದೊಳಗೆ ಭಾರತ ಮಂತ್ರಿ ಮಿ॥ ಎಮೆರಿಯವರು ಭಾಷಣ ಮಾಡಿ, ಯುದ್ಧೋತ್ತರ ಹಿಂದುಸ್ಥಾನ ದೇಶವು ಬ್ರಿಟನ್ನಿನ ಜೊರಳಕುಂಟಿಯಾಗುವದೆಂದೂ, ಹಿಂದುಸ್ಥಾನವನ್ನು ತ್ಯಜಿಸುವದರಿಂದ ಬ್ರಿಟಿಶರಿಗೆ ಲಾಭವಾಗುವದೆಂದೂ ಹೇಳುತ್ತಿರುವಾಗ, ಈಗಲೇ ಹಿಂದುಸ್ಥಾನವನ್ನು ಸ್ವತಂತ್ರಗೊಳಿಸುವ ಕಾರ್ಯಕ್ರಮವಷ್ಟು ಯಾಕೆ ಕೈಕೊಳ್ಳಬಾರದು. ಬ್ರಿಟನ್ನಿನೊಳಗೆ ಹಿಂದುಸ್ಥಾನವನ್ನು ಕೂಡಲೇ ಸಂಪೈಸಬೇಕೆಂಬದೊಂದು ಮತಪ್ರವಾಹ ಹರಿಯುತ್ತದೆಂದು ಪುನೆಯ "ಕೇಸರಿ" ಪತ್ರಿಕೆಯ ಲಂಡನ್ನಿನ ಪ್ರತಿನಿಧಿಗಳು ಬರೆಯುತ್ತಾರೆ. ಲಂಡನ್ನಿನೊಳಗೆ ಚೀನದ ರಾಯಭಾರಿಯಾಗಿದ್ದ ಡಾ॥ ನೆಲಿಂಗಟನ ಕೂಂರವರು ಮಹತ್ವದ ಕಾರಣಗಳಿಗಾಗಿ ಚುಂಗ-ಕಿಂಗಕ್ಕೆ ಹೋಗಿರುವರಾಗಿ ಲಂಡನ್ನಿನ "ಈವ್ನಿಂಗ ನ್ಯೂಸ" ಪತ್ರಿಕೆಯ ಏಂಬೋಣವುಂಟು. ಅಮೇರಿಕೆಯೊಳಗಿನ ಲೋಕಮತವನ್ನು ತನ್ನ ಕಡೆಗೆ ಸೆಳೆಕೊಳ್ಳದಕ್ಕಾಗಿ, ಬ್ರಿಟಿಶ ಸರಕಾರವು ಸರ್ ಎನ್ವಲಿನ ಲೆಂಚಂಬೊಬ್ಬನ್ನ ಬ್ರಿಟಿಶರನ್ನು ರೂ. ೧೫೦೦ ಸಂಬಳಕೊತ್ತು ಪ್ರವಾಸ ಖರ್ಚು ಕೊಡುನ ಕರಾರಿನ ಮೇಲೆ ಕಳಿಸಿದ್ದು, ಅಮೇರಿಕೆಯ ಸುದ್ದಿಗಾರರಿಗೆ ಅನುಕೂಲವಾದ ಸುದ್ದಿಗಳನ್ನು ಕಳಿಸುವಂತೆ ಏರ್ಪಾಟು ಮಾಡಿದ್ದಾರೆಂದೂ, ಈ ಸುದ್ದಿಗಾರರಿಗೆ ಔತಣ ಕೊಟ್ಟು ಸರ್ ಎನ್ವಲಿನ ರೆಂಚರು ಸತ್ಕರಿಸುತ್ತಾರೆಂದೂ, ಸರಕಾರಪಕ್ಷಪಾತಿ ಮಹಾಸಭಾವರ ಕಡೆ ಸುದ್ದಿಗಾರರ ಹ್ಯೂಯ್ದು ಬ್ರಿಟಿಶರಿಂದ ಹಿಂದುಸ್ಥಾನಕ್ಕೆ ಬಹಳ ಅಪಾಯಿತೆಂಬ ಗಳಿಪಾಠದ ಸುದ್ದಿಗಳನ್ನು ಗಳುಹುವ ಏರ್ಪಾಟು ಮಾಡುತ್ತಾರೆಂದೂ ದಿಲ್ಲಿಯ "ನೇಶನಲ್ ಹೆರಾಲ್ಡ" ಪತ್ರಿಕೆಯು ಪ್ರಕಟಿಸಿ, ಬ್ರಿಟಿಶ ಸರಕಾರದ ಧೋರಣವನ್ನು ಕಠೋರವಾಗಿ ಟೀಕಿಸಿದೆ. ಆದರಿಂದ ಕ್ರಿಪ್ಸ ಯೋಜನೆಯ ತ್ಯಾಗಮಾಡಿ ಹಿಂದುಸ್ಥಾನಕ್ಕೆ ರಾಜ್ಯಾಧಿಕಾರವನ್ನರ್ಪಿಸುವ ಅರ್ಥ ಸದ್ಯಕ್ಕೇ ಬರಲಿರುವಾಗ ಬ್ರಿಟಿಶರು ಇನ್ನೂ ಬಿಟ ಹಿಡಿಯುವದು ಶ್ರೇಯಸ್ಕರವಲ್ಲ. ಯುದ್ಧವ್ಯೂಹವನ್ನು ಸಂಪೂರ್ಣವಾಗಿ ಬ್ರಿಟಿಶರಿಗೊಪ್ಪಿಸಲು ರಾಷ್ಟ್ರಸಭೆಯು ಒಡಂಬಡುತ್ತದೆ. ಶತ್ರು-ಜಪಾನಿಯರಿಗೆ ಸಾಡಿಕೊಳ್ಳಲು ಹಿಂದುಸ್ಥಾನದ ಒಪ್ಪಿಗೆಯಿಲ್ಲ. ಜಪಾನಿಯರ ಪೀಡನೆಗೆ ಬೇಸತ್ತು ಹಲವು ಬ್ರಹ್ಮೀಯರು ಬ್ರಹ್ಮದೇಶದಿಂದ ಹಿಂದುಸ್ಥಾನಕ್ಕೆ ಬಂದಿರುವದಾಗಿ ಮುಂಬಯಿ ಸರಕಾರವು ಪ್ರಕಟಿಸುವ ಬಾಂಬಯಿ ಸಮಾಚಾರ (ಇಂಗ್ಲಿಷ) ಪತ್ರಿಕೆಯಲ್ಲಿ ಕಟವಾಗಿದೆ. ಶತ್ರುಗಳ ಬಗ್ಗೆ ಹಿಂದೀಯರಿಗೆ ಭೀತಿಯಿಲ್ಲ; ನಿತಾಂತ ದ್ವೇಷವೆಂಬ ಅದರೆ ಯುದ್ಧವಲ್ಲ; ಬ್ರಿಟಿಶ ಸಾಮ್ರಾಜ್ಯವಾದಿಗಳದು ಎಂಬ ಹಿಂದು ಭಾವನೆ ದೃಢಮೂಲವಾಗಿದೆ ಇವನ್ನೆಲ್ಲಾ

ಸಾಮ್ರಾಜ್ಯಕರ್ತರು ಕ್ಷಯಮಾಡಿ ಪರಿಹರಿಸಿ ಹಿಂದುಸ್ಥಾನದ ಅಂತಃಕರಣವನ್ನು ಯುದ್ಧಕಾರ್ಯಕ್ಕೆ ಸೇರಿಸಿಕೊಳ್ಳಬೇಕಾಗಿ ನಮ್ಮ ವಿನಂತಿ.

ಸೈಲಿನಗ್ರೆಡದೊಳಗೆ ಇನ್ನೂ ಯುದ್ಧ ನಡೆದಿರುತ್ತದೆ. ರುಶ್ಯರಿಗೂ ಜರ್ಮನರಿಗೂ ಕೈ-ಕೈ ಕಾಳಗ ನಡೆದಿದ್ದಾಗ್ಯೂ ರುಶ್ಯರಾಗಲಿ ಜರ್ಮನರಾಗಲಿ ಸೈಲಿನಗ್ರೆಡದ ಒಡೆಯರಾಗಿಲ್ಲ. ಉಭಯ ಪಾರ್ಶ್ವಗಳಲ್ಲಿ ಉಭಯರು ತರು ನಿಕರದಿಂದ ಹೋರಾಡುತ್ತಿದ್ದಾರೆ. ಲಕ್ಷಾವಧಿ ಸೈನಿಕರು ಜೀವದ ಸೋಲಿನ ಹಂಗುದೊರೆದು ಕಾದಾಡುತ್ತಿದ್ದಾರೆ. ೨೦ ದಿನಗಳಲ್ಲಿ ೨ಲಕ್ಷಕ್ಕೆ ಮಿಕ್ಕಿ ಜರ್ಮನರು ಹತರಾದರಂತೆ! ಆದರೂ ಜರ್ಮನರು ಹೆಜ್ಜೆಚ್ಚು ದಂಡುಗಳನ್ನು ಸೈಲಿನಗ್ರೆಡದಲ್ಲಿ ನೂಕುತ್ತಿದ್ದಾರೆ. ಬ್ರಿಟನ-ಅಮೇರಿಕೆಯವರು ಯುದ್ಧ-ಸಾಹಿತ್ಯಗಳನ್ನು ಲಗಬಗೆಯಿಂದ ಕಳಿಸುತ್ತಿರುವದರಿಂದ ಸೈಲಿನಗ್ರೆಡ ಪಟ್ಟಣ ರುಶ್ಯರ ಕೈ ತಪ್ಪಿ ಹೋಗಲಿಕ್ಕಿಲ್ಲವಾಗಿ ಹೇಳುತ್ತಾರೆ; ಆದರೆ ಆ ಆಸೆ ಕಡಿಮೆಯೆಂದು ಹೇಳಲಾಗುತ್ತಿದೆ. ರುಶ್ಯರ ಮೇರೆ ಕೇಳಿ ಪರಮಾತ್ಮನು ಅದುಗ್ರಹಿಸಬೇಕಲ್ಲದೆ ಬೇರೆ ಉಪಾಯ ನಾ ಕಾಣೆ! ಹಿಟ್ಲರನು ಬುದ್ಧಾರ ಜರ್ಮನರ ಲೋಕಕಥೆಯಲ್ಲಿ ಭಾಷಣ ಮಾಡಿದಂತೆ, ಸೈಲಿನಗ್ರೆಡಿಗಾಗಿ ಬೇಕಾದ ಸಾಹಸ ಮಾಡಲು ಆತನು ದೃಢ ಸಂಕಲ್ಪ ಮಾಡಿದ್ದಾನೆ. ಚಳಿಗಾಲದಲ್ಲಿ ಎಲ್ಲಿ ಆತ ವಾಸ್ತವ್ಯ ಮಾಡುವ ನಿರ್ಧಾರ ಮಾಡಿದ್ದಾನೆ. ಆತನ ಲಕ್ಷ್ಯವನ್ನು ಸೇಕಕೊಳ್ಳುವ ಬೇರೆ ರಣಭೂಮಿ ಇದುವದಿಲ್ಲ. ಇಂಥ ಕ್ರುಸಕ್ತಿಯಲ್ಲಿ ಸೈಲಿನಗ್ರೆಡ ಪಟ್ಟಣ ಬಹು ಕಾಲ ಬಾಳೀತೆಂದು ನಾನಂತು ಹೇಳಲಾರೆ. ಒದರೆ ಸೈಲಿನಗ್ರೆಡ ಪಟ್ಟಣ ಬದ್ದ ಬಳಕ ಹಿಟ್ಲರನ ಯೋಜನೆ ಏನೆಂದು ತಿಳಕೊಳ್ಳಲು ನಾನು ಕುತೂಹಲಪಡುತ್ತೇನೆ. ಹಿಟ್ಲರನ ಭಾಷಣದಲ್ಲಿ ಆ ಯೋಜನೆಯ ಸುದ್ದಿಸುಳುವಿಲ್ಲ. ಸೈಲಿನಗ್ರೆಡ ಬಿದ್ದ ಬಳಕ, ಗೆದ್ದುಕೊಂಡ ಕ್ರುದೇಶವನ್ನು ಆತ ಸಂಘಟಿಸತೊಡಗುವನಂತೆ; ಕಾರಖಾನೆಗಳನ್ನು ಹೊರಡಿಸುವನಂತೆ, ಹೊಲಗಳನ್ನು ಸಾಗುವಳಿ ಮಾಡಿಸುವನಂತೆ; ಜನಾಭಿವೃದ್ಧಿಯನ್ನು ಸಾಧಿಸಿ ಭೂಕ್ರುದೇಶವನ್ನು ಸಮೃದ್ಧ ಮಾಡುವನಂತೆ. ಹಿಟ್ಲರನ ಶಾಂತಿ-ಪಾಠ ಕೇಳಿ ನನಗೆ ವಿನೋದವನಿಸುತ್ತದೆ. ಆದರೆ ಚಳಿಗಾಲದಲ್ಲಿ ಜರ್ಮನರ ಆಕ್ರಮಣಕ್ಕೆ ತಡೆಬೀಳುವದೆಂದು ನಾನು ಎಣಿಸಲಾರೆ. ಈ ವಾರ್ಷಿಕ ಸಭೆಗೆ ಉತ್ತರ ಆಫ್ರಿಕೆಯಿಂದ ಸೇನಾಪತಿ ರೊಮೆಲನೂ ಹೋಗಿದ್ದನು. ಹಿಟ್ಲರನು ಸಭೆ ನೇರಿದೊಡನೆ ಮೊಟ್ಟ ಮೊದಲು ರೊಮೆಲನಿಗೆ ಕಂದು ಆತನೊಡನೆ ಹಸ್ತಾಂದೋಲನ ಮಾಡಿ ಸಭಾಕಾರ್ಯವನ್ನು ಪ್ರಾರಂಭಿಸಿದ್ದಾನೆ. ಉತ್ತರ ಆಫ್ರಿಕೆಯೊಳಗಿನ ಸೇನಾಪತಿ ರೊಮೆಲನಿಗೆ ಹಿಟ್ಲರನು ಆನುಗ್ರಹಿಸಿದ್ದರಿಂದ ಮುಂದಿನ ದಾಳಿ ಉತ್ತರ ಆಫ್ರಿಕೆಯಲ್ಲಿ ಪ್ರಾರಂಭವಾಗುವದಾಗಿ ನನ್ನ ಊಹೆ. 'ರೈಟ್ಟರ' ಸಂಸ್ಥೆಯ ಬರ್ಲಿನ ಸುದ್ದಿಗಾರರು ಕಳಿಸಿದ ಹಿಟ್ಲರನ ಭಾಷಣದಲ್ಲಿ ಉತ್ತರ ಆಫ್ರಿಕೆಯೊಳಗಿನ ರಣಂಗದ ಉಲ್ಲೇಖವಿಲ್ಲ. ರೊಮೆಲನ ಹಸ್ತಾಂದೋಲನ ಮಾಡಿ ಅನುಗ್ರಹಿಸಿದ ಹಿಟ್ಲರನು ಸಭೆಯಲ್ಲಿ ರೊಮೆಲನನ್ನು ಹರಸಲಿಲ್ಲವೆಂದು ನಾ ತಿಳಿಯಲಾರೆ. ಮೇಲಾಗಿ ಹಿಟ್ಲರನು ನುಡಿದಂತೆ, ಆತನ ಭಾವನೆಯಾಗುವದು ವರ್ಷಕ್ಕೊಮ್ಮೆ. ಹೀಗಿರುವಾಗ ರೊಮೆಲನ ಯುದ್ಧ-ಪಾಹಸದ ಕುರಿತು ಆತನು ಸುಮ್ಮಗಿದ್ದಿದ್ದು ಜಯಕ್ಕಾರಿಕವಾಗಿ ಕಾಣುತ್ತದೆ. ರೊಮೆಲನ ಹಸ್ತಾಂದೋಲನವೇ ಅರ್ಥಗರ್ಭಿತವಾಗಿದ್ದರೆ ಉತ್ತರ ಆಫ್ರಿಕೆಯೊಳಗೆ ಚಳಿಗಾಲದಲ್ಲಿ ರಣಸಂಗ್ರಾಮ ವಾಗಬಹುದಾಗಿ ನನ್ನ ಊಹೆ. ೨ನೇ ರಣರಂಗವನ್ನು ಬ್ರಿಟಿಶರಾಗಲಿ ಅಮೇರಿಕೆಯವರಾಗಲಿ ಹೂಡುವ ಸಂಭವವಿಲ್ಲ. ಅಮೇರಿಕೆಯ "ಈವ್ನಿಂಗ ಸ್ಟಾರ" ಪತ್ರಿಕೆಗೆ ಎರಡನೇ ರಣರಂಗ ಹೂಡುದೇಕೆಂದು ಹೇಳಿದ್ದನ್ನು ಕೇಳಿದ ಕೂಡಲೆ ತಲೆಕೂಲಿಯಾಗುತ್ತದೆ! ತಕ್ಕ ಕಾಲದಲ್ಲಿ ೨ನೇ ರಣರಂಗ ಹೂಡಲಾದೀತು; ಈ ಬಗ್ಗೆ ಉಪದೇಶ ಹೇಳುವ ಕಾರಣವಿಲ್ಲ; ಅಟ್ಲಾಂಟಿಕ ಮಹಾಸಾಗರದಲ್ಲಿ ನೌಕಾಯುದ್ಧಗಳು ನಡೆದಿವೆ; ಜರ್ಮನಿಯ ಸೇಲೆ ವೈಮಾನಿಕ ಹಲ್ಲೆಗಳು ನಡೆದಿವೆ; ಉತ್ತರ ಆಫ್ರಿಕೆಯಲ್ಲಿ ಹೋರಾಟ ನಡೆದಿದೆ; ಹೀಗೆ ೧೩ ಕಡೆ ಬ್ರಿಟಿಶರು ಹೋರಾಡುತ್ತಿದ್ದಾರೆ; ಜರ್ಮನಿಯ ೬ ಲಕ್ಷ ಸೈನಿಕರು ಹತರಾದರು; ಹೀಗೆ "ಈವ್ನಿಂಗ ಸ್ಟಾರ" ಕರ್ತರು ಬರೆಯುತ್ತಾರೆ. ಹಿಟ್ಲರನ ಪರಾಭವವಾಗುವ ಸಂಭವ ಕಂಡೊಡನೆ ಜರ್ಮನಿಯ ಪಶ್ಚಿಮ ಪಾರ್ಶ್ವದಲ್ಲಿ ತಾವು ಸ್ಯಾರಿ ಮಾಡುವದು ಖಂಡಿತವೆಂದು ಬ್ರಿಟಿಶ ಸೈನ್ಯಾಧಿಕಾರಿಗಳೂ ಆಕಾಶವಾಣಿಯಿಂದ ಹೇಳುತ್ತಾರೆ. ಇವರ ಅರ್ಧವಿಷ್ಟೇ; ಯುರೋಪ ಖಂಡದ ಪಶ್ಚಿಮ ಪಾರ್ಶ್ವದಲ್ಲಿ ಈ ವರ್ಷ ಎರಡನೇ ರಣರಂಗ ಹೂಡಲ್ಪಡುವ ಬಿಲ್ಲ. ಇಂದುಬಳಕ ಉತ್ತರ ಆಫ್ರಿಕೆಯಲ್ಲೇ ಹಿಟ್ಲರನ ಕಟಾಕ್ಷವಿರುತ್ತದೆಂದು ಸ್ಪಷ್ಟವಾಗಿ ತ್ರುದೆ. ಪೂರ್ವ ಪಾರ್ಶ್ವದಲ್ಲಿ ಸೈಲಿನಗ್ರೆಡದಿಂದ ಜರ್ಮನರು ಕೊಕೆಸಸದಲ್ಲಿ ಇಳಿಮು ಬಂದ ಹಾಗೆ ಸೇನಾಪತಿ ರೊಮೆಲನು ಉತ್ತರ ಆಫ್ರಿಕೆಯಿಂದ ಪೂರ್ವಪಾರ್ಶ್ವದಲ್ಲಿ ಕೂಡುಮಾಡುವನೆಂದು ನಾನು ತರ್ಕಿಸುತ್ತೇನೆ. ಈ ಯುದ್ಧವ್ಯೂಹದಲ್ಲಿ ತುರ್ಕಸ್ತಾನಕ್ಕೆ ಸಹಜವಾಗಿ ಮಹತ್ವ ಪ್ರಾಪ್ತವಾಗುತ್ತದೆ. ಆದರಿಂದ ತುರ್ಕಸ್ತಾನವನ್ನು ಭದ್ರಗೊಳಿಸುವದಕ್ಕಾಗಿ ಅಮೇರಿಕೆಯವರು ಯೋಜಿಸಿದ್ದಾರೆ. ತುರ್ಕಸ್ತಾನದೊಳಗೆ ಈಗ ಗೋದಿಯ ಪುಂಖೈಕೆ ಕಡಿಮೆ. ಅದರಿಂದ ಸಶ್ಯಕ್ಕೆ ತುರ್ಕಸ್ತಾನ ಸರಕಾರವೊಡನೆ ಒಂದು ಒಡಂಬಡಿಕೆದಾಗಿ ಅಮೇರಿಕೆಯವರು ೨ ಲಕ್ಷ ಟನ್ ಧಾನ್ಯಗಳನ್ನು ತುರ್ಕಸ್ತಾನಕ್ಕೆ ಪೂರೈಸಬೇಕೆಂಬ ಗೊತ್ತಾಗಿದೆ. ತುರ್ಕಸ್ತಾನದ ಅಂತಃಕರಣವನ್ನು ಒಲಿಸಿಕೊಳ್ಳುವದಕ್ಕಾಗಿ ಈ ಪ್ರಯತ್ನಗಳು ನಡೆದಿರುತ್ತವೆ. ಬ್ರಿಟಿಶರು ಉತ್ತರ ಆಫ್ರಿಕೆಯೊಳಗಿನ ಇಕಾಲಿಯ ದಂಡುಗಳ ಮೇಲೆ ಸಾನಿಧ್ಯೋಗದಿಂದಾಗಿ ಗುದುವಾರದ ವಾರ್ತೆಯುಂಟು. ಇದೊಂದು ವಿಮಾನ-ಬಲಗಳಿಕೆಯಿಂದ ಚಿಕ್ಕ ಕಾದಾಟವೆಂದು ಕ್ಯಾರೋದೊಳಗಿನ ವಾರ್ತೆ. ಲಂಡನ್ನಿನಲ್ಲಿ ಈ ಸುದ್ದಿ ಮುಟ್ಟಿಲ್ಲವಂತೆ ಮುಂದಿನ ಯುದ್ಧದ ಇದೊಂದು ತಾಲೀಮು ನಡೆಯುತ್ತದಾಗಿ ನನ್ನ ಆಂಬೋಣ.

ಇದಕ್ಕೆ ಆನುಕೂಲವಾಗಿ ಜಪಾನಿಯರು ತಾಂತ್ರಿಕ ಮಹಾಸಾಗರದಲ್ಲಿ ದಾಳಿಯನ್ನು ಹೂಡುವ ಲಕ್ಷಣ ಗಳಿವೆ. ಆದಕ್ಕಾಗಿಯೇ ಅಮೇರಿಕೆಯ ವಿಂಪೆಲ ವಿಲ್ಕಿಯವರು ಚೀನದಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಇವನ್ನು ಅವೇಕ್ಷಿಸಿ ಆಸ್ಟ್ರೇಲಿಯದವರು ನ್ಯೂಗಿನಿಯಲ್ಲೂ, ಹಿಂದುಸ್ಥಾನದ ಸೇ॥ ವೆಸ್ಟ್ಲೊರವರು ಬ್ರಹ್ಮದೇಶದಲ್ಲೂ ದಾಳಿ ಮಾಡಬಹುದು. ಅಮೇರಿಕೆಯು ಈ ಬಗ್ಗೆ ೨೦ ಲಕ್ಷ ಸೈನಿಕರ ಬಲಿ ಕೊಡಲು ಸಿದ್ಧವಿದು ವದಾಗಿ ಅಮೇರಿಕೆಯ ಯುದ್ಧೋತ್ಪಾದನ ಮಂಡಳ

(ಅನೀ ಪುಟದ ಮೇಲೆ ನೋಡಿರಿ)

ಸ್ಥಾನಿಕ ವೃತ್ತಾಂತ.

ಕುಮಟಾ— ಮೊನ್ನೆ ೫ ಮೆಯ ಕಾಗೆ ೩ ಮೆ ಗಳಿಗೆ ಹೊಳ್ತು ಬಲೇ ಮಳೆಯಾಯಿತು ಕರೆವ ಮಳೆ ಇಲ್ಲ ಹುಯಿದ್ದು ೪೯.೦೦ ಮೆ ಮೆ ಮಳೆ ಆಲ್ಲಿಂದ ಕಾರ್ಗಾಲ ವೃಷ್ಟಿ ಬೀಸು ಪ್ರಕಾರಕ್ಕೆ ತಡೆಯಿಲ್ಲದ ಉಮಟಿ ಯಥೇಚ್ಛವಾಗಿ ವರ್ತಿಸುತ್ತಿದ್ದಾನೆ.

ಈಗ ಪೇಟೆಯಲ್ಲಿ ಊರಲ್ಲಿ ಮುಸ್ಕಿ ತೆರೆಯಲು ಗಾಳಿಯು ಧಾನಿ ನಿಯಂತ್ರಣದಲ್ಲಿ ಮಡಚಿಗಳು ಈಗ ಓಡಿ ಇಡುತ್ತಿರುವದು ದೊಡ್ಡ ವರ್ತಕರು ಸರಕುಗಳನ್ನು ತರಿಸಿಕೊಳ್ಳಲು ಇಂದೆ ಮುಂದೆ ನೋಡುತ್ತಿದ್ದಾರೆ ಮುಂಬಯಿಯ ದಲಾಲರು ಇನ್ನೂ ಪುಂಡುಮಿಗೆ ಮರಳಿ ಕೊಡಿರುವದಿಲ್ಲ ಮುಂಬಯಿಯಿಂದ ಈಕಡಾವಳಿಗೆ ಬರುವ ಹೆಬ್ಬುನ ಸರಕುಗಳಿಂದರೆ ಕಾಳಿಕಡಿ ಮುಂತಾದ ಉಡಾರದ ಜೀನಸು ಹುಗು ನುಗ್ಗು ಅದರ ಮುಂಬಯಿಯ ಇವರೆಯ ಪೇಟೆ ಗಳಲ್ಲಿ ವ್ಯವಹಾರ ಸರಾಗವಾಗಿ ನಡೆಯುವದಿಲ್ಲ ಅದ್ದರಿ ದ ಇದೀಗ ಇನ್ನೂ ಇನ್ನೂ ದಿನಗಳು ಮಂಬಯಿ ಯಿಂದ ಈ ಸರಕಾರು ಬರಿವ ಅಂತಿಮ ಕ್ಯಾಂಡಿ ಸಂಗಡಿಯಿಂದರೆ ಧಾನಿ ನಿಯಂತ್ರಣಗಳಿಗಳಪ್ಪ ತೆಂಗಿನ ವಸ್ತ್ರ ಸಕ್ಕರೆ, ಅಕ್ಕಿ ಮೊದಲಾದ ಸರಕುಗಳನ್ನು ವರ್ತಕರು ಆಮದು ಮಾಡಿಕೊಳ್ಳಲು ದಿಟ್ಟಿಸಿ ಪರ್ಮಿಟ್‌ಗಳಿಗೆ ಅರ್ಜಿ ಕೊಟ್ಟಿದ್ದಾರೆ ಅವರು ಇವುಗಳನ್ನು ಇತ್ತಿಗೆ ತರಿಸಲು ಪೆಟ್ಟಿ ಮತ್ತು ಸರಕುಗಳಲ್ಲಿ ಕಾನಾವಧಿ ಕೆಲಸಕ್ಕೆ ಇವುಗಳ ಸಕ್ಕ ಮುಂದೆ ಬಗ್ಗಾ ಬರುವ ಬಟ್ಟಿ ಇವುಗಳನ್ನು ಇಷ್ಟಕ್ಕೆ ತಕ್ಕೊಂಡು ತಮಗೆ ಯೋಗ್ಯ ಮುಂಪಾಲೆ ಉಳಿಯುವಂತೆ ವ್ಯವಸ್ಥೆ ಧಾರಿಗೆ ನಿಯಂತ್ರಣಾಧಿಕಾರಿಗಳು ಅರ್ಜಿದಸ್ತ ಮಾಡಿ ಕೊಡುವ ಸಕ್ಕ ಅರ್ಜಿಸಿಕೆ ಸಿಂಡುವವರೆ ಪರ್ಮಿಟ್ ಮಾತ್ರ ತಪ್ಪ ಆ ಸರಕುಗಳನ್ನು ತಾನುವ ಸಂಹಸವಾಗಿ ಸಿಗುವದಿಲ್ಲ ಆಮದು ಅಂದೇ ಆಧೀನ ರೀತಿ ಇಂತಹ ಅರ್ಜಿ ಸಲ್ಲಿಕೆ ಕೊಡಬೇಕಲ್ಲವೆ?' ಎಂಬ ವಿಷಯಗಳನ್ನು ಸಂಗ್ರಹಿಸಿ ಗಳನ್ನು ಲಕ್ಷಿಸಿಸ್ಟ್ಟೇ ಬೆಲೆಯನ್ನು ನಿರ್ಬಂಧಿಸುತ್ತಿರುವಾಗಿ ಹಾರಿಯು ಉತ್ತರಿಸಿದ್ದೇ ಪ್ರಯಾಸಿಕರತ್ತೆ' ಈ ಕ್ಷೆ ಪ್ರಶ್ನೆ ತಿಳಿಗೆಸ್ಟ್ಟೂ ಸಕ್ಕರೆಯೂ ಮರಳಿಸ್ಟೂಗಿಸಿ ಆದಿಕಾರಿಯ ಅಭಿಪ್ರಾಯವನ್ನು ತರಿಸಿಸಿಂಡಾಯ ವ್ಯವಸ್ಥೆ ಮಾಡಿಸುವ ತೋಯದಿಲ್ಲ ಇದ್ದಲ್ಲಿ ತರಿಸಲು ವರ್ತಕರಿಗೆ ಪೆರ್ಮಿಟ್ ಸಿಕ್ಕುವದೆಂಬ "ಕ್ಷಾಸವಿಲ್ಲ' ಇದ್ದ ತೆಂಗಿನ ಎಳ್ಳೆ ನುತ್ತ ಸಕ್ಕರೆಗಳನ್ನು ಹುಡುಕಿತೆಗೆದು ಅವುಗಳನ್ನು ಸಮಂಜಸ ಕೃತ ಬೆಲೆ ನೀಡಿಸಿ ಮಾರಪಡಿಸ್ಟುತ್ತಿರಿ ಜೆ ಜಿಲ್ಲಾಧಿಕಾರಿ ಅಕ್ಕಪ್ಕೆಯ ಸರಿಸುಜಿಸುವುಗಳ ವ್ಯಾಪಾರದಲ್ಲಿ ಬಿಕ್ಕೆಯಾಗಿ ಗದಿಗೆ ಸಾಧ್ಯವಿದು, ವರ್ತಕರು ಅವುಗಳ ಮಾರಾಟ ಮಾಡುವ ಗೆ ಯೋಗ್ಯವೆಂದೆನ್ನಿಸಿದ್ದೇ ಮಾನಾಳೆಯನ್ನು ಕೊಳ್ಳುವಂತೆ ಜೆಂಜರ್ ವಾಹನವು ಹುಗೂ ಆದಕ್ಕಾಗಿ ಬೇಕಾದ್ದು ಸರಕುಗಳ ಅಮದು ರಫ್ತಿಗಳಿಗೆ ಅವಶ್ಯವುಳ್ಳ ಸಾಕಾರ್ಯಗಳನ್ನು ಒದಗಿಸಿಕೊಡುವದು, ಸರಕುಗಳ ಹಂಚುವಳಿ (distribution) ಸರಿಯಾಗಿ ಆಗುವಂತೆ ಜಾಗ್ರತೆ ತಕ್ಕೊಳ್ಳುವದು ಮತ್ತು ವ್ಯಾಪಾರಸ್ಥರ ತೊಂದರೆ, ಸಂಶಯ ಮತ್ತು ಅನುಚಿತಗಳನ್ನಾದರೂ ಇದ್ದರೆ ಅವುಗಳ ಪರಿಹಾರ ಮಾಡಿ ಅವರಿಗೆ ಜನಚಿಪ್ರಾಪ್ತಿಗೆ ಅವಶ್ಯವಿಲ್ಲ ಸರಕಾರವನ್ನು ತರಿಸಲು ಉತ್ತೇಜನ ಕೊಡುವದು, ಇವೇ ಧಾರಣೆ ನಿಯಂತ್ರಣದ ಗೊತ್ತು ಗುರಿಗಳು ಆದರೆ ಈ ಗೊತ್ತು ಗುರಿಗಳನ್ನು ಸಾಧಿಸಲು ಅಧಿಕಾರಿಗಳು ಅಲ್ಪಾವಧಿ ದಿಟ್ಟಿಸಿದ್ದು ಎಲ್ಲಿಂ ಕಂಡು ಬರುವದಿ.' ಈ ಗೊತ್ತು ಗುರಿಗಳನ್ನು ಯಸಸ್ವಿಯಾಗಿ ಸಾಧಿಸಬೇಕಾದರೆ ವ್ಯಾಪಾರಿ ವರ್ಗದ ಸಹಕಾರವನ್ನೂ ಬೇಕಾಗುವುದರಿಂದ ಅವರ ಸಹಾಯವನ್ನೂ ಸಂಪಾದಿಸಬೇಕು ಅಧಿಕಾರಿಗಳು ಅವನ್ನೂ ಪಡೆದ ವಿಲ್ಲ' ಬರೀ ಕೆಲವೊಂದು ಜೀನಸ ಗಳ ಬೆಲೆಯನ್ನು ತುಂಡಿಕಿಟ್ಟು ಅವಲಂಬಿಸಿ ಜೆಟ್ಟಿಗೆ ಬೆಲೆಗೆ ಯಾರೂ ಅಂಗಡಿಕಾರರು ಮಾಮಿಕ್ಕಿರುವಾಗ ಕಣ್ಣಿಗೆ ದಬ್ಬರೆ ಅವರ ಬೆಲೆ ಒಟ್ಟಿ ಮಾಡಿಸಿದಂತೆ ಇದಿಸ್ಟೇ ಧಾನಿ ನಿಯಂತ್ರಣ ಕೃತ ಇದೀಗ ನಡೆದಿದೆ. ಅದಿಂದರೇ ಸಂಪಾದನೆಯು ನನ್ನ ತತ್ವ ಎಂಬ ವಿಚಾರವಂತರು ಕಷ್ಟ ಮಾಡುತ್ತಾರೆ ಮತ್ತ ಈ ಸಮಸ್ಯೆ ಎದಿಸಲು ತಮ್ಮ ಸ್ವಾನು ಬುದ್ಧಿ ಶಕ್ತಿಗಳನ್ನು ಉಪಯೋಗಿಸಲಾ ಗುವುದಿಲ್ಲ ಕಲಿಪ ವಾರ ಇಲ್ಲಿಯ ವರ ಸಭೆಯವರು ವ್ಯಾಪಾರಿಗಳನ್ನು ತಮ್ಮ ಕಛೇರಿಗೆ ಕರಕೊಂಡು ದೀರ್ಘ ಆಲೋಚನೆ ನಡಿಸಿದ್ದರು ಅದರ ಪರಿಣಾಮವೇನಾಯಿತೆಂಬ ಇನ್ನೂ ತಿಳಿದು ಬಂದಿಲ್ಲ ಮೊನ್ನೆ ಜಿಲ್ಲಾಧಿಕಾರಿಗಳು ದಿ ೫ ರ ವಿಚಾರ ಮಾಡಿ ಹಾಗೂ ಜಿಲ್ಲಾ ಪ್ರಮುಖರ ಸಲಹೆ ತಕ್ಕೊಂಡು ಈ ಸರುಸ್ಕೆಯನ್ನು ಬೇಗನೇ ಸಮಾಧಾನಕರ ವಾಗಿ ಬಗೆಹರಿಸುವ ಪ್ರಯತ್ನ ನಡಿಸಿರುವಾಗಿ ಅರಿವಯಿದೆ

ಬುಧವಾರ ಇಲ್ಲಿಯ ತಾಲೂಕ ಕಛೇರಿಯಲ್ಲಿ ಆಹಾರ-ಸಾಮಗ್ರಿಗಳ ಬೆಳವಣಿಗೆಯ ಕುರಿತು ಒಂದು ಸಭೆಯಾಯಿತು ೦೦ ಅಧ್ಯಕ್ಷಸಾಹೇಬ ಅವಂಶಾಹೇಬ ಬಿಸ್ಟಿಹತ್ತಿಲ ಇವರು ಸಭ ಧ್ಯಕ್ಷರೂಗಿದ್ದರು ಶಾಲಾಕಿನೊಳಗಿನ ಪಟೇಲ ರಾ ಶನೊಗೋಡರು, ಮೊಮಲೇದಾರ, ಸಬಜಿಜ್ಞ, ರೇಂಜರ ಮೊಲಾದ ತಾಲೂಕಿನ ಮುಖ್ಯ ಅಧಿಕಾರಿಗಳೂ ಸ್ವಯಂಸೇವಕ ಸಭೆಗೆ ಬಂದಿದ್ದರು. ಮೊಟ್ಟ ಮೊದಲು ಗ್ರಿಮೋದ್ಯಾರ್ ಮಂಡಳದ ಕಾರ್ಯದರ್ಶಿಗಳಾದ ರಾ ಹಟ್ಟಿಕರ ಭಾಷಣವಾಯಿತು "ನಮ್ಮಿ ಜಿಲ್ಲೆಯೊಳಗೆ ಹುಟ್ಟಿದ ಅಕ್ಕಿ ನಮಗೆ ೬ ತಿಂಗಳು ಸಹ ಸಾಲುವದಿಲ್ಲ, ಲಕ್ಷಾವಧಿ ಬರಿ ದ ಅಕ್ಕಿ ಬರುವದಿಲ್ಲ, ಮೈಸೂರ ಸೀಮೆಯಿಂದ ಕೆಲಸ ವರ್ಷ ಅಕ್ಕಿ ಬಂದದ್ದರಿಂದ ನನ್ನು ನಿರ್ಬಂಧಿಸಿ ಮೇಲು ಅವರು ಅಲ್ಲಿ ನಿಯಂತ್ರಣ ಮಾಡಿದರೆ ನಮಗೆ ಕಷ್ಟವಾಗುವದು, ನಮಗೆ ಬೇಕಾದ ಅಕ್ಕಿ ಯೆನ್ನು ನಾವೇ ಬೆಳಿಸಿಕೊಳ್ಳಬೇಕು, ಚಳಗಾಲದಲ್ಲಿ ತೇವು ಉಳಿಯುವ ಗಿಮುಗಳಲ್ಲಿ ದ್ವಿದಳ ಧಾನ್ಯಗಳನ್ನು ಬೆಳಸಬಹುದು ದ್ವಿದಳ ಧಾನ್ಯಗಳು ಬೆಳವಣಿಗೆಯಿಂದ ಧಾನ್ಯ ಸಿಗುತ್ತದೆ, ದನಗಳಿಗೆ ಮೇವು ಸಿಗುತ್ತದೆ, ಬೇರುಗಳಿಂದ ಗೊಬ್ಬರ ದೊರೆಯುತ್ತದೆ ಕಾಮಿ-ಪಲ್ಲೆಗಳನ್ನು ಅಕ್ಕಿ ಹುಂಡೆ ಮಾಡಿ ಆಹಾರವಾಗಿ ಉಪಯೋಗಿಸಬಹುತ್ತದೆ, ಊರಲ್ಲಿ ಪಟೇಲರಿದ್ದಾರೆ, ಅವರು ಲೋಕ ಪ್ರತಿನಿಧಿಗಳು, ಪಾಟೀಲರಿದ್ದಾರೆ, ಅವರು ಸರಕಾರದ ಪ್ರತಿನಿಧಿಗಳು, ತಳಿಯಾರ ಪರ್ವರಲ್ಲಿ ಗ್ರಾಮದೊಳಗಿನ ಮಾಮಿಯಿಂದ ಸ್ವಲ್ಪ ಧಾನ್ಯ ಸಿಗುತ್ತದೆ ಅದನ್ನು ಪಡೆದು ಆಹಾರ ಸಾಮಗ್ರಿ ಬೆಳಿಸಲು ಜಾಸ್ತಿ ಸ್ಥಳಾಂತರಿಸಬೇಕು ನಿಮ್ಮ ನಿಮ್ಮ ಳಿಗೆ ಜಾಗಾಂಬಿದ್ದರೆ ಅದನ್ನು ಅಧಿಕಾರಿಗಳ ಸುಂದೆ ಇದೆ ಎಂದೇ ಸುಧಾರಿಸಿಕೊಳ್ಳಬೇಕು ಜೀವನವನ್ನು ನಾವು ಪೂರ್ತಿಸಬಹುದು, ಆದರೆ ಎಲ್ಲರೂ ಜೀವನವನ್ನು ಪೂರ್ತಿಸುವದು ಸಾಧ್ಯವಿಲ್ಲ, ನೀವೇ ಪೂರ್ತಿಕೊಳ್ಳಬೇಕು" ಇತ್ಯಾದಿ ಸಂಗತಿಗಳನ್ನು ಹೇಳಿದರು ದಿಪ್ಪಿಕ್ಷೆ ಎಗ್ರಿಕಲ್ಚರಲ ಆಫೀ ಸರಂದ ಇ ಪಟೇಲರು ಇ ಹಬ್ಬುರವರು ಹೇಕಕ ಮೈಸೂ ಸರ್ಮದಿಸಿದ್ದಲ್ಲದೆ, ಅಕ್ಕಿ ಸಿಗದಿದ್ದರೆ ಜೋಳ ತಿನ್ನಿ ಬೇಕಾಗಿ ಬೋಧಿಸಿದರು ಅಧ್ಯಯ ಪ್ರಯೋಗ ಹೊಲದ ಸಮಾಧಿಕಾರಿಯಾವ ಇ ಧಾರೇಶ್ವರರವರು ನುಡಿದದ್ದೇ ನಂದರೆ "ಎಕ್ಕಿ ಬೆಳೆಗಳು ಎಲ್ಲ ಕಡೆಯಲ್ಲಿ ದಿಳೆಯುವ ದಿನ್ನು, ಬೇಕಿ ಬೆಳೆ ಬೆಳೆಗಳು ಬೆಳೆಯುತ್ತವೆ. ಇಲ್ಲಿ ಬಿಳೆ ಯುವ ಅಕ್ಕಿ ಇಲ್ಲಿ ೬ ತಿಂಗಳು ಸಾಲುವದಿಲ್ಲ ಸಂಜೀವನ ಗಡ್ಡೆಗಳನ್ನು ಬೆಳಸಿಕೆಕ್ಕೆ ಹೆಚ್ಚಿನ ಪಠ್ಯಮವಿಲ್ಲ, ಇವುಗಳ ನ್ನು ಬೆಳೆದರೆ ಉಳಿದ ೬ ತಿಂಗಳ ನಿರ್ವಾಹಮಾಡಬಹುದು" ಇತ್ಯಾದಿ ಅವರ ಹಿಂದಿನಿಂದ ಸಹಕಾರ ಸಂಘಗಳ ಜಿಲ್ಲಾ ಡಿ ಕಾರಿಯವರ ಲೋ ಆಡಾರ್ಯರವರ ಭೂಪಾಲನಾಯಕಾ ಆಹಾರ ಸಾಮಗ್ರಿಗಳನ್ನು ಬೆಳೆಯುವ ಭೂಪ್ರದೇಶವನ್ನು ಸ್ಥಾಳೀಕರಿಸಿಕೊಳ್ಳುವದೇ ಈಗಿನ ಯುದ್ಧಕ್ಕೆ ಕಾರಣ, ಜನರು ಆಲಸ ಪನ ಪಡೆದು ತೃಪ್ತರಾಗಿದ್ದರೆ ಸರಕಾರಕ್ಕೆ ತೃಪ್ತಿ, ಈ ಪರಿಪ್ಥಗಳನ್ನು ಜನರು ಬೆಳಿಸಿಕೊಳ್ಳದಿದ್ದರೆ ಸರಕಾರವು ಅದನ್ನು ಪೂರ್ತಿ ಜನರಲ್ಲಿಕೆ ಮಾಡಬೇಕಾಗುತ್ತದೆ, ಯುದ್ಧೋತ್ಪೆಮದಲ್ಲಿ ಸರಕಾರಕ್ಕೆ ಇದೊಂದು ಕಷ್ಟ, ಆದರಿಂದ ಜನರು ಆಹಾರ-ಸಾಮಗ್ರಿಗಳನ್ನು ಬೆಳಿಸಿಕೊಂಡು ಸ್ವಾವಲಂಬಿಗಳಾಗಬೇಕು, ಮುಂತಾಗಿ ಹೇಳಿದರು "ಚಂದಾವರ, ಹಂಚಿ ಸೀಮೆಗಳಲ್ಲಿ ಬೇಕಷ್ಟು ಬಂಜರು ಭೂಮಿಯಿದೆ ಜನರು ಆ ಕಡೆ ಹೋಗುವ ಸಾಹಸ ಮಾಡಬೇಕು,ಸಿತ್ಯಾರ್ಜಿತ ಭೂಮಿಗಳನ್ನು ಕೊಚ್ಚುವಾಲು ಮಾಡಿಕೊಂಡು ಜನರು ವ್ಯವಸಾಯ ಮಾಡಿ ಮನೆ ಹಾಳು ಮಾಡಿಕೊಳ್ಳುತ್ತಾರೆ" ಹೀಗೆ ರಾ ಪಲ್ಲೇಶ್ವರ ಹೆಗಡೆಯವರು ನುಡಿದರು " ರಾ ಮಟ್ಟಿ ಹೆಬ್ಬಲಿಯವರು ವೇಸಾಯ ಇಲಾಖೆಯವರು ಪ್ರತ್ಯಕ್ಷ ಕಾರ್ಯ ಕ್ರಮವಿಲ್ಲದೆ ಪಟೇಲ ಶಾನಭೋಗರಿಗೂ ಗ್ರಾಮಫೀಸರಿಗೂ ಸಹಕಾರಿಗಳಿಗೂ ಪರಸ್ಪರ ಸಹಾಲಿ ಹಾಕಿ ಬಾಯಿ ಪ್ರಚಾರ ಮಾಡುವದರಿಂದ ಪ್ರಯೋಜನವಿಲ್ಲ, ಭಾಷಣ ಮಾಡುವ ಕಾಲ ಕಳೆದು ಹೋಗಿದೆ, ಬರಗಾಲ ಗಡ್ಡೆಯನ್ನು ತಿನ್ನಬೇಕಾಗಿ ಪ್ರಚಾರ ಮಾಡುವದು ಎಷ್ಟಿತವಲ್ಲ, ಫ್ಯಾ ಹಬ್ಬು ಮೊದಲಾದವರು ಒಂದು ಕಾರ್ಯಕ್ರಮ ಸಿದ್ಧ ಪಡಿಸಿ ಅವನ್ನು ಪಾಠಗಾಣಕ ಬೇಕು, ಅಂದರೆ ಮಾತ್ರ ಪ್ರಯೋಜನವುಂಟು" ಹೀಗೆ ರಾ ನರಸಿಂಹ ಶಾನಭಾಗರು ನುಡಿದರು ಅಧ್ಯಕ್ಷರು ನುಡಿದದ್ದೇನಂದರೆ - "ಜಂಗಲ ಇಲಾಟಿಯಾನರು ಒಳ್ಳೆಯವರಿಗೆ ಅನುಕೂಲರಿಲ್ಲ, ಗುಟ್ಟಿಕ್ಕೆ ಕಟ್ಟಿಗೆ ಕೇಳಿದರೆ ಸಮಾಪದ ಬಟ್ಟಿಗಳಿಂದ ಗುಟ್ಟಿಕ್ಕೆ ಬಂದರೆ ಕಟ್ಟಿಗೆ ಒಳ್ಳೆಯದು ಅಂತಾ ಅಡಾಗದಿದ್ದರೆ ದೂರ ದಟ್ಟಿಪಡಿಯಿಂದಲಿಂದ ಗುಟ್ಟಿ ತರಲಿಕೆ ಹೇಳುತ್ತಾರೆ' ಅಲ್ಲಿ ಜನಬಲವಿಲ್ಲ; ಇಲ್ಲಿಂದ ಜನರನ್ನೆಯ್ಯು ಗುಟ್ಟಿ ತರುವ ವರೆಗೆ ಶ್ರಾಯ ಮುಗಿದುಹೋಗುತ್ತದೆ ' ಈಗಂತು ಅಲ್ಲಲ್ಲಿ ಸಂಘಗಳನ್ನು ಕಡಿಯ ಕೆಡಿಸುತ್ತಾರೆ ಅದರಂತೆ ಮತ್ತಿಷ್ಟು ಕಷ್ಟವಾಗಿದೆ, ಬೇಸಾಯಗಾರರಿಗೆ ಬಹಳ ಕಷ್ಟಗಳಾಂಟು, ಈ ಹಿಂದೆ ಅಡಿಕೆಗೆ ದರವಿರಲಿಲ್ಲ, ಜನವಾದಿಂದ ಹೀನ ತರಗತಿಯ ಅಡಿಕೆ ಬರುತ್ತಿತ್ತು, ಇದಕ್ಕೆ ರುಚಿ ಕಡಿಮೆ, ಆದರೂ ಅದು ಅಗ್ಗ ಸಿಗುತ್ತಿದ್ದರಿಂದ ನನ್ನು ಲಿಯು ಅಡಿಕೆಯ ದರ ಕುಗ್ಗಿ ಒಕ್ಕಲಿಗರಿಗೆ ನಷ್ಟವಾಯಿತು ಈಗ ಜಾವ ಜನರಿಂದ ವಶವಾದ್ದರಿಂದ ಅಡಿಕೆಗೆ ದರ ಒಂದು ಒಳ್ಳೆಯರಿಗೆ ಹಿತವಾಗಿದೆ ಹೀಗೇ ೪-೫ ವರ್ಷ ದರ ಸಿಕ್ಕಿದರೆ ಒಳ್ಳೆಯರು ಪರಿಣಾಮ ಹೊಂದಬಹುದು ಬರಗಾಲಗಡ್ಡೆ ಹೀನನೆಂದು ತಿಳಿಯಬೇಡಿ, ಅದನ್ನು ಈ ಪರ್ಶ್ವದಲ್ಲಿ ಉಪಯೋಗಿಸುವಲ್ಲಿ, ಮಲಬಾರದಲ್ಲಿ ಇದರ ಪ್ರಶಾತವುಂಟು, ಕ್ರಮಂತರು ಸಹ ಇದನ್ನು ತಿನ್ನುತ್ತಾರೆ ಕೊಟ್ಟಿಯನ್ನು ಹೇಗೂ ತುಂಬಲೇಬೇಕು " ಹಾಳು ಹೊಟ್ಟಿಗೆ ಧೂಳು ರೊಟ್ಟಿ"ಎಂಬ ನಾಣ್ಣುಡಿಯೇ ಉಂಟು ಆ ಪ್ರಕಾರವಾದರೂ ಎಸೆಸಿ, ಅಕ್ಕಿ ಸಿಗದಿದ್ದರೆ ಬರಗಾಲ ಗಡ್ಡೆಯನ್ನಾದರೂ ತಿಂದು ಜೀವಿಸುವ ಪ್ರಸಂಗ ಬಂದಿದೆ ಸರಕಾರಿವ ಕೊಡಬಹುದಿದ ಅನುಕೂಲತೆಗಳ ಪ್ರಯೋಜನ ಪಡೆದು ಆಹಾರ ಸಾಮಗ್ರಿಗಳನ್ನು ಹೆಚ್ಚೆಚ್ಚು ಬೆಳಿಸಿಕೊಳ್ಳಬೇಕು" ಇತ್ಯಾದಿ ನುಡಿದ ಬಳಿಕ ಆಧಾರಮನ್ನಸಿಯೂಗಿ ಸಭೆಯು ವಿಸರ್ಜನವಾಯಿತು

ಸರಕಾರಿ ಸಂಘಗಳ ಅಗಿ ರಿಜಿಸ್ಟ್ರಾರುದ ರಾ ಪ್ರಸಾದರವು ಇಲ್ಲಿಯ ಅರ್ಬನ ಬೇಂಕಿಗೆ ತಾ ೩೬೯೯ ಶನಿವಾರ ಬೆಟ್ಟಿಕೊಟ್ಟಿರು ಬೇಂಕಿನವರು ಹೊಸನ್ನು ತೊಡಗಿಸಲು ಸಾಧನಗಳಲ್ಲದ್ದರಿಂದ ರೇವುಗಳನ್ನು ನಿರಾಕರಿಸುವ ಪ್ರಸಂಗ ಬಂದಿರುತ್ತಾಗಿ ಅರಿತ ಮಾಹಿತಿಗಳಲ್ಲು, ರೇವುಗಳನ್ನು ನಿರಾಕರಿಸಬಾರದೆಂದೂ ಸರಕಾರದ ಸಾಲಗಳಲ್ಲಿ ಅವನ್ನು ತೊಡಗಿಸಬೇಕೆಂದೂ ಸಲಹೆ ಕೊಟ್ಟರು

ಮಳೆಗಾಲದ ಮೊಲಕ ಮುನ್ನಾಜ ದಿನ ರಾತ್ರೆ ಬಲ ತ್ತಿದ್ದ ಮುಂಬಯಿ ಕಡೆ ಬಪಾಲು ಸಿದ್ಧಿಸಲ್ಪಟ್ಟಿತ್ತು ಈ ಮಳೆ ನಂತರ ಅದರಂದ ಮುಂಚಿನ ಕೃಷಿಯನ್ನು ರೂಪಗೊಳಿಸಬೇಕಾಗಿ ಸಲವರ ಅಂಬೋಣವಿದೆ

ರಾಜಕೀಯ ಬಟ್ಟಿಗಳನ್ನು ಪಿಚಾರಿಸಲು ನೇಮಿಸಲ್ಪಟ್ಟ ರಾ ಬೈಲೂರವರ ಕೆಲಸಕ್ಕೆ ಇಲ್ಲಿಯ ತಾಲೂಕ ಕಚೆ ಯಲ್ಲಿ ತಾ ೨೬೯೦ಯಿಂದ ಪ್ರಾರಂಭವಾಯಿತು ೦

Oriental Government Security Life Assurance Co , Ltd.

ಉತ್ತರ ಕಾನಡಾ ಜಿಲ್ಲಾ ಅಂಕೋಲೆಯ ರಾ ಮಂಗೇಶ ನೀಲಕಂಠ ನಾಡಕರ್ಣಿ ಇವರು ತಮ್ಮ ಜೀವದ ವಿಮೆಯ ಪೊಲಿಸಿ ನಂ 121934ನೇದು ಕಾಯಾಗಿದೆಯೆಂದು ನಮಗೆ ತಿಳಿಸಿದ್ದಾರೆ. ಈ ತಾರೀಖಿನಂದ ೧೫ ತಿಂಗಳೊಳಗಾಗಿ ಯಾರೂ ಆ ಬಗ್ಗೆ ತಕ್ರಾರು ಮಾಡದಿದ್ದಲ್ಲಿ, ನಷ್ಟ ಪೊಲಿಸಿಯ ಬದಲು ಹೊ ಪೊಲಿಸಿ ಪ್ರತಿಯು ಕೊಡಲಾಗುವದು

ಮುಂಬಯಿ, ತಾ 28-9-42

H E JONES
Manager

ಬೈಲೂರರವರ ನೇಮಣೂಕಯಾದದ್ದು ಸಪ್ಟಂಬರ್ ೯ನೇ ತಾರೀಖಿಗೆ ಮೊದಲಿನ ೧೫ ದಿವಸಗಳಲ್ಲಿ ಶಿರಿಯಲ್ಲಾದ ಮುಖ್ಯವಿಷಯಗಳಲ್ಲಿ ಯಾವದೇ ಕೆಲಸಮಾಗಲ್ಲಿ ಆಕ್ಟೋಬರ್ ೧೯ನೇ ತಾರೀಖಿನ ವರೆಗೆ ಅಧಿಕಾರ ಬಾರದ್ದರಿಂದ ಕೆಲಸ ಸಾಗಬೆಕ್ಕೆ ಅನುಕೂಲವಿದ್ದಿಲ್ಲೆಂದು ತಿಳಿಯುತ್ತಿದೆ ಪೆನ್ನಹಡೆದ ಇತಮಿಗಿಂತ ನೌಕರಯಲ್ಲಿದ್ದ ಇತರನ್ನು ಇವರ ಸ್ಥಳದಲ್ಲಿ ನೇಮಿಸಬಹುದಿತ್ತಾಗಿ ಕೆಲವರ ಹೇಳಿಕೆ

ಟ್ಯಾಗೆಯಲ್ಲೊಂದು ಮೊದ್ದ ಗದಿಬಿಡಿಯುಂಟಾಗಿದೆ ಅಲ್ಲೊಂದು ಗ್ರಾಮಪಂಚಾಯಿತಿ ಇತ್ತು. ಗ್ರಾಮಕ್ಕೆ ಒಪ್ಪಿದ ಕಿರಿಬಿಟ್ಟಿದ್ದ ಗ್ರಾಮಬಿಟ್ಟ (village forest) ಎಂದು ಸಂರಕ್ಷಿಸಲ್ಪಟ್ಟಿತ್ತು. ಅದರ ಆಡಳಿತ ಆ ಪಂಚಾಯತಿಗೆ ಒಪ್ಪಿಸಲ್ಪಟ್ಟಿತ್ತು. ಪಂಚಾಯತ ಕವಿನಿಬಿಯವರು ಈ ದಟ್ಟಿಪತ್ರವನ್ನು ಕಾಣುವಿಕೆಯಂಡು. ಆದರಲ್ಲಿರುವ ನಿಜಮುಗಗಳನ್ನಾಲ್ಲ ಬೊಂಗಗಳನ್ನಾಗಿ ಇಸಾರಾಗೂ ಕಡಿಯಗೊಡುತ್ತಿದ್ದಿಲ್ಲ. ಜಗಿಯಾರ್ ಕೆಲವರಿದ ಹಿಂದೆ ಹೊಲನೆಗದ್ದೆಯ ದೈವಳ್ಳಿ ಗೃಹಕ್ಕೊಲ್ಲರು ಹಬ್ಬಾ ಹಂಸಲು ಮೊದಲಾದವುಗಳ ದಿಳಿ ವಸತಿಗಾಗಿ ತಮಗೆ ಈ ಗ್ರಾಮಕ್ಕೊಪ್ಪಿದ ಕಿರಿಬಿಟ್ಟಿದ್ದರಿಂದ ೪೦ ಎಕರೆ ಭೂಮಿಯಂತಹ ಕ್ಷೇತ್ರವನ್ನು ಕೊಡಬೇಕಾಗಿ ಸರಕಾರಕ್ಕೆ ಅರ್ಜಿ ಮಾಡಿದ್ದರು. ಜಿಲ್ಲಾಧಿಕಾರಿಗಳು ಆ ಅರ್ಜಿಯನ್ನು ಚಿತ್ರಿಗಿ ಗ್ರಾಮಪಂಚಾಯತಿಗೆ ಅಭಿಪ್ರಾಯಕ್ಕಾಗಿ ಕಳಿಸಿಕೊಟ್ಟಿದ್ದರು ಆಗ ಗ್ರಾಮ ಪಂಚಾಯತಿನವರು ಅಲೋಚನೆ ಮಾಡಿ, ತಮ್ಮಲ್ಲಿ ಊರ ಜನಗಳಿಗೇ ಸಾಕಷ್ಟು ಹುಲ್ಲುಬ್ಬಿಯ ಕ್ಷೇತ್ರವಿರುವದಿಲ್ಲವಾಗಿಯೂ, ಕುಮ್ಟಾ ಊರಿನ ಜನಗಳು ಸಹ ತಮ್ಮಲ್ಲಿ ಮೇಯಬರುತ್ತಾರಾಗಿಯೂ, ಇಂತಹ ಪರಿಸ್ಥಿತಿಯಲ್ಲಿ ಹುಲ್ಲು ಬೆಳ್ಳಾರು ಬಗ್ಗೆ ಉಪಯುಕ್ತವಿರುವ ಕಿರಿಬಿಟ್ಟಿದ ಕ್ಷೇತ್ರವನ್ನು ಅರ್ಜಿದಾರರಿಗೆ ಕೊಡ ವದು ನ್ಯಾಯವಿಲ್ಲವೆಂಬ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳಿಗೆ ಸಪ್ಟಕ್ಕರ ಬರೆದು ಹಾಕಿದರು ಜಿಲ್ಲಾಧಿಕಾರಿಗಳಿಗೆ ಹೊಲನೆಗದ್ದೆಯವರ ಬೇಡಿಕೆ ತಿರಸ್ಕರಿಸಲು ಭಿಡಿಯಾಯಿತೋ ಏನೋ! ಅವರು ಆ ಅರ್ಜಿಯನ್ನು ಮತ್ತೊಮ್ಮೆ ಪಂಚಾಯತಿಗೆ ಕಳಿಸಿಕೊಟ್ಟು ಪುನರ್ವಿಚಾರ ಮಾಡಲು ಅಪ್ಪಣೆ ನೀಡಿದರು! ಪಂಚಾಯತ ಕವಿನಿಬಿಯವರು ಎಂಥ ಪುನರ್ವಿಚಾರ ಮಾಡುವರು? ಅರ್ಜಿದಾರರ ಹಿತಕ್ಕಾಗಿ ತಮ್ಮ ದನಗಳ ಅಹಿತ ಮಾಡಿಕ್ಕೆ ಅವರು ಒಪ್ಪಿಗೆ ಕೊಡುವರು ಎಂದಾದರೂ ಸಾಧ್ಯವೇ? ಅರ್ಥಾತ್ ಗ್ರಾಮಪಂಚಾಯತಿನವರು ವೇಗದಲಿನ ಅಭಿಪ್ರಾಯವನ್ನೇ ಇನ್ನೊಮ್ಮೆ ದೃಢಪಡಿಸಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕಾಗಿಯೂ, ಜಿಲ್ಲಾಧಿಕಾರಿಗಳಿಗೆ ಇಷ್ಟ ಕಂದಿಲ್ಲ ಹುಲ್ಲುಬ್ಬಿಗೆ ನಿರುಪಯುಕ್ತವಿರುವ ಪ್ರದೇಶವನ್ನು ಶೀಘ್ರದಲ್ಲಿ ಸದರಿ ಅರ್ಜಿದಾರರಿಗೆ ಕೊಡಬಹುದಾಗಿಯೂ ತಿಳಿಸಿದರಂತೆ ಗ್ರಾಮಪಂಚಾಯತಿನ ಈ ಅಭಿಪ್ರಾಯವನ್ನು ಅಲಕ್ಷಿಸಿ ಅರ್ಜಿದಾರರ ಬೇಡಿಕೆಯನ್ನು ಮನ್ನಿಸಲು ಜಿಲ್ಲಾಧಿಕಾರಿಗಳು ಸಿದ್ಧರಾಗಲಿಲ್ಲವೆಂದು ತಿಳಿಯುತ್ತಿದೆ ಆದ್ದರಿಂದಲೇ ಅರ್ಜಿದಾರರು ಎದಗುಂದಲಿಲ್ಲ ಮತ್ತೆ ಕಮಿಷನರರಿಗೆ ಅರ್ಜಿ ಮಾಡಿದರಂತೆ! ಮತ್ತು ಆ ಕಮಿಷನರರು ಸಹ ಗ್ರಾಮಪಂಚಾಯತಿನವರ ಅಭಿಪ್ರಾಯ ಕೇಳಿಕೊಳ್ಳ — ಸ್ಥಾನಿಕ ಅಧಿಕಾರಿಗಳ ಅಭಿಪ್ರಾಯವನ್ನಾದರೂ ಕೇಳಿ ಕೊಂಡಿದ್ದಾರೋ ಗೊತ್ತಿಲ್ಲ' — ಅರ್ಜಿದಾರರು ಬೇಡಿದ ೪೦ ಎಕರೆ ಒಳ್ಳೇ ಕ್ಷೇತ್ರವನ್ನು ಅವರಿ ಆಗಾಗ ಕೊಟ್ಟು ಬಿಟ್ಟರಂತೆ! ಅದಂದ ಗ್ರಾಮಪಂಚಾಯತಿನವರು ಒಮ್ಮೆ ಮೇ ಮುನಿದಿದ್ದಾರೆ, ಮತ್ತು ತನ್ನ ಅಧಿಕ್ಕಾರಿಯಕ್ಕೂ ಉಂಡ ಹಿತಕ್ಕೂ ಸರಕಾರಿ ಅಧಿಕಾರಿಗಳು ಹೀಗೆ ವಿನಮ್ರ ಬೆಲೆ ಕೊಡದೆ ನಡತಿಸುವಂತಾದರೆ ತಾವು ಸಂಚಾಯತಿನಲ್ಲಿ ಇರುವು ವ್ಯರ್ಥವೆನಿಸಿ ಭಾವಿ, ಪಂಚಾಯತಿನ ಸದಸ್ಯರೂ ರಾಜೀನಾಮೆಗಳನ್ನಿತ್ತು ಕವಿನಿಬಿಯ ವಶ್ಯ ಇನ್ನೆಸ್ತು ತಮ್ಮ ತಾಬಿಯಲ್ಲಿ ತ್ಕೊಳ್ಳಲಿಕ್ಕೆ ಮಾಮಲೇ ಇದರ ಸಾಮೀಲರಿಗೆ ತಿಳಿಪ್ಪಾರಂತೆ ಮಾಮಲೇದಾರರು ಇದರ ಪರ್ಣಾವನ್ನೂ ತಿಟ್ಟಿಯಲ್ಲಿ ತಕ್ಕೊಂಡಿಲ್ಲ, ಹೊಸ ಕವಿನಿಬಿ ನೇಮಿಸುವ ವ್ಯವಸ್ಥೆಯನ್ನೂ ಮಾಡಿರುವದಿಲ್ಲ! ಹೊನ್ನೆ ಚಿತ್ರಿಗಿಯಲ್ಲಿ "ಹೆಚ್ಚಿಡ್ಡು ಆಫೀಸ್ ಹಾಸ್ಪಿ ಬೇಳಿ ಸಿರಿ" ಎಂಬ ತತ್ವದ ಪ್ರಚಾರ ಮಾಡಲು ಅಧಿಕಾರಿಗಳು ಒಂದು ಸಭೆಯನ್ನು ಕರೆದಿದ್ದರಂತೆ ಆ ಸಭೆಗೆ ಊರೊಳಗಿನ ಒಬ್ಬ ಮನುಷ್ಯನೂ ಬರಲಿಲ್ಲವಂತೆ! ಈಗ ಚಿತ್ರಿಗಿಯಲ್ಲಿ ಗ್ರಾಮ ಪಂಚಾಯತು ಇರುವದಿಲ್ಲವಾದ್ದರಿಂದ ಆ ಗ್ರಾಮದೊಳಗಿನ ಹಾಗೂ ನೆರೆಹೊರೆಯ ಪುಂಡರಿಗೆ ಗ್ರಾಮದ ಬೆಟ್ಟಿದ್ದ ಬೇಕಾದಂತೆ ಹಾನಿ ಹಾಕಲು ಒಂದು ಸುಸಂಧಿ ದೊರೆತಿದೆ! ಅವರು ತಮಗೆ ಬೇಕಾದಂತೆ ಬೇಕಾದ ನಿಜ ಗಳನ್ನೂ, ಮರಗಳನ್ನೋ, ಮರಗಳ ಹಸಿ ಇಲ್ಲನೆ ಒಣಗಿದ ಬೊಂಗಗಳನ್ನೋ ಕಡಿದುಕೊಂಡು ಹೋಗಿ, ಪಂಚಾಯತಿನವರು ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತಂದಾಗ ಅವರು ಹೀಗೆ ಮಾಡಿದ್ದಲ್ಲ ನಿಯಾಯವಲ್ಲ ಎಂದು ಬೈಲೆ ಹಾಕಿದರಂತೆ! ಈ ಸ್ಥಿತಿಯನ್ನು ಅಧಿಕಾರಿಗಳು ತೀಗೆ ಸುಧಾರಿಸುತ್ತಾರೆ ನೋಡಬೆಕ್ಕಾಗಿದೆ.

ಹೊನ್ನಾವರ— (ತಾ ೩-೧೦-೫೬) ಮಳೆ

ಹಿಂದಾಗಿದೆ ಮೈಲಿ ಬೇಸಿಯೂ ಕಾಗ್ಗಿದೆ

ನೋಡ ಆಕ್ಟೆ ವರ್ತಕರು ಈಗ ಶುಂಠಿತ್ಕ ಬೆಲೆಗೆ ಅಕ್ಕಿಯನ್ನು ಮಾರಲಿಂಥಭಿಷ್ಟಾರೆ ಆದರೆ ಒಬ್ಬರಿಗೆ ಒಂದು ಚೀಲಕ್ಕಿಂತ ಹೆಚ್ಚಿಗೆ ಅಕ್ಕಿ ಕೊಡುವದಿಲ್ಲ

ವರ್ತಕರು ಖರೀದಿದ್ದ ಎಲ್ಲ ಸಕ್ಕರೆಯನ್ನು ನಗರ ಸಭೆಯವರಿಗೊಪ್ಪಿಸಲು ಜಿಲ್ಲಾಧಿಕಾರಿಗಳು ತಿಳಿಪಿದ್ದಾರೆ ನಗರ ಸಭೆಯವರು ಒಂದು ಆಗ್ಗ ಘಂಟೆಯ ಅಂಗಡಿಯನ್ನು ತೆರೆಯುವಂತೆ ಪರಲಂದರಗಳಿಂದ ಬೇಕಾದ ತೆಂಗಿನ ಎಣ್ಣೆಯ ನ್ನೂ, ಅಕ್ಕಿ ಸಕ್ಕರೆ ಮೊದಲಾದವುಗಳನ್ನೂ ತರಿಸುವ ಆಲೋಚನೆಯುಂಟೆಂತೆ ನಗರ ಸಭೆಯವರು ಅಂಗಡಿ ತೆರೆಯುವವರಾಗಿ ಕಳ್ಳೆಕ್ಕೆ ಕಂಪನಿಗಳ ವಿಜಂಟಿಗೆ ಎಲ್ಲ ಎಣ್ಣೆಯನ್ನು ಅವರೇ ಕೊಂಡುಕೊಂಡು ಮಾರುವಮೆಗಳಿತು

ಈ ಗಾಡಗೆ ಬುಸಾರವರ ಈ ಹಿರಿಭಿಜಿಸಿ ಸಪ್ಲಾಸ್ಟ್ ಕ್ಕಾಗಿ ಕೂಡಿದ ಸಾಮಾನ್ಯವಲ್ಲಿ ಶಿಲ್ಪು ಉಳಿದ ಸಾಮಾನಿನ ಪಿತ್ಯಮುಂದೆ ಬಂದ ಹಾಗೆ ವೈವಸ್ಥೆ ಮಾಡಲು ಕಳಿದ ಮಾರ ಸಪ್ತಾಹ ಮಂಡಳದ ಸಭೆ ನೀಂತ್ತು ಅಕ್ಕಿ ಮಾರಿ ಬಂದ ಹಣ ಮಂಡಳದ ಹೊರಿಗಿನ ಜನರ ಕಡಿಗಿಂತ್ತ ದೆಂತೆ ಅದನ್ನು ಹೇಗೆ ಸಹೂಲ ಮಾಡಬೇಕೆಂದೇ ಸಭೆಯಲ್ಲಿ ಚರ್ಚೆಯಾಯಿತಂತೆ ಆ ಹಣ ಸಹೂಲ ಮಾಡುವ ಬಗ್ಗೆ ಈಗ ಪ್ರಯತ್ನ ನಡೆದಿದೆ

ಅರ್ಜುನ ಸಹಕಾರಿ ಬ್ಯಾಂಕಿನ ಮಹಾಸಭೆ ಕಳೆದ ತಾ ೩೦ನೇಗೆ ಕೂಡಿತ್ತು. ಅಧ್ಯಕ್ಷರು ಕ್ಕಾ ಭಾಷ ಇದ್ದಲ್ಲಿ, ಒಟ್ಟಿಗಾಕಿ ಸಾಲಗಳ ವಸೂಲಿಯು ಬಗ್ಗೆ ಚೀಂಕಿ ನವರು ಕೂಡಿದಾಗಿದ ಸಲಕ್ಕತ್ತುಗಳ ಪ್ರಯೋಜನವನ್ನು ಸಾಲಗಾರರು ಪಡಕೊಳ್ಳುವಿಸ್ಸ ಬಗ್ಗೆ ಪಿಪಾಡೆ ಪ್ರಕ್ಟಿಪಡಿಸಿ, ವೈಪ್ಯಳನು ಅವುಗಳ ಲಾಭ ಪಡಕೊಳ್ಳಬೇಕಾಗಿಯೂ, ಅವರು ಹಾಗೆ ಮಾಡಿದಲ್ಲಿ ನಿಯಾಧಾ ಸಾಲಗಾರರ ಬಗೆ ಇನ್ನೂ ಹೆಚ್ಚಿಗೆ ಸಲಕತ್ತು ಕಲ್ಪಿಸಿಕೊಡಲು ಅನುಕೂಲ ವಾದೀತೆಂಬಲೂ ವಿವರಿಸಿ ಹೇಳಿದರು

ಮುರ್ಡೇಶ್ವರ— (ತಾ ೩ ೧೦-೫೬) ಮಳೆ

ನಿಂತಂತೆಯೇ ೩-೪ ದಿನಗಳ ಹಿಂದೆ ಒಂದು ಸಣ್ಣ ಮಳೆ ಯಾಗಿತ್ತಷ್ಟೇ ಹೊರಗಲ್ಲಿ ಭತ್ತದ ಬೆಳೆ ಕೊಯಲಿಗೆ ತಯಾರಾಗಿ ನಿಂತಿದೆ

ಇದ್ದಿಂದ ಹೊನ್ನಾವರಕ್ಕೆ ಹೋಗುವ ಬಿಸಿಂಟಿಗೆ ಗಂಟು ಸಂಜೆ ೫॥ ಘಂಟೆಗೆ ಕಟ್ಟಿಬಲ್ಲುತ್ತು. ಮರುದಿನ ಮುಂಜಾನೆ

** "ಕಾಂಚನ" ಮನೆ ಸೇರಿದ ದಿನವೇ ಹಬ್ಬ ! **

ಸ್ಟೋರ್ಸ್‌ರು :—

ಕಾರವಾರ ಮುಡುಮಿಮದಾರ ಮತ್ತು ಕಸಬೇಕರ.
ಕುಮಟೆ - ದೇವಪ್ಪಾ ಅಯ್ಯ ನಾಯ್ಕ
ಹೊನ್ನಾವರ - ಕಲ್ಯಾಣಪುರ ಬ್ರದರ್ಸ.
ಸಿದ್ದಾಪುರ ರಾಮಯ್ಯನ ಬ್ರದರ್ಸ

ಶಿರಿ - ಎಸ್. ಎಚ್. ಧಾತಪ್ಪಾ ಎಂಡ್ ಸನ್
ಪಿ ಎಲ್ ಧಾಕಪ್ಪಾ ಎಂಡ್ ಸನ್
ವಿರ್ ಪ್ರೈಗ್ ಸ್ಟೋರ್ಸ್
ಆಂಕೋಲಾ - ದಿ ಸ್ಟೇವನೆನ್ ಡಿಪೋ

